## ಸೀಮಾಂತವಾದ(Marginalism)ದ ಉದಯ

ಬಹಳ ಪ್ರಚಲಿತವಾದ ಒಂದು ಅಭಿಪ್ರಾಯದ ಪ್ರಕಾರ 19ನೇ ಶತಮಾನದ ಕೊನೆಯ ಮೂರನೆಯ ಭಾಗದಲ್ಲಿ ಒಂದು ಸೀಮಾಂತವಾದಿ ಕ್ರಾಂತಿಯು ಘಟಿಸಿತು ಮತ್ತು ಅದು ಪ್ರಾಚೀನ ಶಾಸ್ತ್ರೀಯ ಅರ್ಥಶಾಸ್ತ್ರವನ್ನು ತಿರಸ್ಕರಿಸುವುದಕ್ಕೂ ಹಾಗೂ ಈ ಕ್ಷೇತ್ರದ ಹೊಸ ದೃಷ್ಟಿಕೋನಕ್ಕೂ ಕಾರಣವಾಯಿತು. (ಅದು ನಿಜಕ್ಕೂ ಒಂದು ಕ್ರಾಂತಿಯಾಗಿತ್ತೋ ಇಲ್ಲವೋ ಎಂಬುದನ್ನು ನಂತರ ಚರ್ಚಿಸಲಾಗುವುದು.) ಅತ್ಯಂತ ಪ್ರಭಾವಶಾಲಿ ಸೀಮಾಂತವಾದಿ ಚಿಂತಕರೆಂದರೆ, ಬ್ರಿಟನ್ ದೇಶಕ್ಕೆ ಸೇರಿದ ವಿಲಿಯಂ ಸ್ಟ್ಯಾನ್ಲೆ ಜೆವಾನ್ಸ್ (1835- 1882), ಆಸ್ಟ್ರಿಯಾ ದೇಶದ ಕಾರ್ಲ್ ಮೆಂಜರ್ (1840- 1921) ಮತ್ತು ಫ್ರಾನ್ಸ್ ದೇಶಕ್ಕೆ ಸೇರಿದ ಲಿಯಾನ್ ವಾಲ್ರಾಸ್ (1834- 1910). ಆಲ್ಫ್ರೆಡ್ ಮಾರ್ಷಲ್ ಅವರು ಪ್ರಾಚೀನ ಶಾಸ್ತ್ರೀಯ ಅರ್ಥಶಾಸ್ತ್ರಜ್ಞರ ಹಳೆಯ ಸಿದ್ದಾಂತಗಳೊಂದಿಗೆ ಈ ಹೊಸ ಚಿಂತನೆಯನ್ನು ಸಮನ್ವಯಗೊಳಿಸಲು ಪ್ರಯತ್ನಿಸಿದರು. ರಾಜಕೀಯ ಅರ್ಥಶಾಸ್ತ್ರದ ಬದಲು ಮಾರ್ಷಲ್ ಅವರು ಅರ್ಥಶಾಸ್ತ್ರದ ಬಗ್ಗೆ ಚರ್ಚಿಸಿದರು. ಅಂತಿಮವಾಗಿ ನವಶಾಸ್ತ್ರೀಯ ಅರ್ಥಶಾಸ್ತ್ರ ಹಾಗೂ ಬೇಡಿಕೆ ಮತ್ತು ಸರಬರಾಜಿನ ಸಿದ್ಧಾಂತ ಎಂಬ ಪದನಾಮಗಳು ಅರ್ಥಶಾಸ್ತ್ರೀಯ ಚಿಂತನೆಯ ಹೊಸ ವಿಚಾರಧಾರೆಗೆ ನೆಲೆಯನ್ನು ಕಂಡುಕೊಂಡವು.

## ಸೀಮಾಂತವಾದಿ ಚಿಂತನೆಯ ಲಕ್ಷಣಗಳು

ವಿವರಗಳಿಗೆ ಸಂಬಂಧಿಸಿದಂತೆ ಇರುವ ಅನೇಕ ವ್ಯತ್ಯಾಸಗಳ ಹೊರತಾಗಿಯೂ ಸಹ ಹೊಸ ಸಿದ್ದಾಂತಗಳು ಕೆಲವೊಂದು ಗಮನಾರ್ಹವಾದ ಸಹಮತಿಯ ಅಂಶಗಳನ್ನು ಪ್ರದರ್ಶಿಸಿದವು. ನಾನು ಸೀಮಾಂತವಾದಿ ಚಿಂತನೆಯ ಎಂಟು ಪರಿಭಾಷಿತ ಲಕ್ಷಣಗಳನ್ನು ಪ್ರತ್ಯೇಕಿಸುತ್ತೇನೆ ಮತ್ತು ಪ್ರಾಚೀನ ಚಿಂತನೆಯೊಂದಿಗೆ ಹೋಲಿಸಿ ಅವು ಹೇಗೆ ಭಿನ್ನವಾಗಿವೆ ಎಂಬುದನ್ನು ತೋರಿಸುತ್ತೇನೆ.,

ಮೊದಲನೆಯದಾಗಿ ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಒಂದು ಹೊಸ ವ್ಯಾಖ್ಯೆ ಮತ್ತು ಅದಕ್ಕೆ ಸಂಬಂಧಿಸಿದ ಲಕ್ಷಣಗಳು. ಬ್ರಿಟನ್ ದೇಶಕ್ಕೆ ಸೇರಿದ ಲಿಯೋನೆಲ್ ರಾಬಿನ್ಸ್ (1898-1984) ಅವರ ಪ್ರಕಾರ ಅರ್ಥಶಾಸ್ತ್ರವು, “ಗುರಿಗಳು ಮತ್ತು ಪರ್ಯಾಯ ಉಪಯುಕ್ತತೆಯುಳ್ಳ ಕೊರತೆಯಲ್ಲಿರುವ ಸಾಧನಗಳು ಇವುಗಳ ನಡುವಿನ ಸಂಬಂಧವೇ ಮಾನವ ವರ್ತನೆ” ಎಂದು ಅಧ್ಯಯನ ಮಾಡುತ್ತದೆ (1932). ಅದು ಮನುಷ್ಯರನ್ನು ಅನುಕೂಲನಶೀಲ ಅಸ್ತಿತ್ವಗಳು ಎಂದು

ಕಲ್ಪಿಸಿಕೊಳ್ಳುತ್ತದೆ; ವೆಚ್ಚವನ್ನು ಕನಿಷ್ಠಗೊಳಿಸಿ ಲಾಭವನ್ನು ಅತಿ ಹೆಚ್ಚು ಮಾಡಿಕೊಳ್ಳುವುದು (ವ್ಯಾಪಾರ ಸಂಸ್ಥೆಗಳಿಗೆ ಸಂಬಂಧಿಸಿದಂತೆ), ಅಥವಾ ಪ್ರಯೋಜನವನ್ನು ಗರಿಷ್ಠ ಮಟ್ಟಕ್ಕೆ ಪಡೆದುಕೊಳ್ಳುವುದು (ಬಳಕೆದಾರರು ಅಥವಾ ಕುಟುಂಬಗಳಿಗೆ ಸಂಬಂಧಿಸಿದಂತೆ). ಈ ಹೊಸ ಸೈದ್ಧಾಂತಿಕ ದೃಷ್ಟಿಕೋನವನ್ನು ಸ್ಥಾಪಿಸಿದ ಕ್ಷೇತ್ರವನ್ನು ಹೋಮೋ ಎಕನಾಮಿಕ್ಸ್ ಗೆದ್ದುಕೊಂಡಿತು. ಡೇವಿಡ್ ಹ್ಯೂಮ್ ಅವರು ಮನುಷ್ಯನೆಂದರೆ "ವೈರುಧ್ಯಗಳ ರಾಶಿ" ಮತ್ತು ವಿಚಾರವೆಂದರೆ "ಭಾವೋದ್ರೇಕದ ಗುಲಾಮ" ಎಂದು ವರ್ಣಿಸಿದ್ದರೆ, ಸೀಮಾಂತವಾದಿ ಆರ್ಥಿಕ ಚಿಂತನೆಯು ತಮಗೆ ಏನು ಬೇಕೆಂಬುದನ್ನು ಗ್ರಹಿಸಿರುವ ಮತ್ತು ತಮಗೆ ಲಭ್ಯವಿರುವ ಸಾಧನಗಳ ವ್ಯಾಪ್ತಿಯಲ್ಲಿ ಅದನ್ನು ಸಮರ್ಥವಾಗಿ ಬೆನ್ನಟ್ಟುವ ಸರಳ ಏಕಮುಖ ಪಾತ್ರಗಳೊಂದಿಗೆ ಲೀನವಾಯಿತು.

ಶಾಸ್ತ್ರೀಯ ಲೇಖಕರು ತಮ್ಮ ಕಣ್ಣೆದುರಿನ ಇಡಿಯ ಸಮಾಜವು ವಿಭಿನ್ನ ವರ್ಗಗಳಾಗಿ ಶ್ರೇಣೀಕೃತವಾಗಿದೆ ಎಂಬ ದೃಷ್ಟಿಕೋನದೊಂದಿಗೆ ವಿಶ್ಲೇಷಣೆಯನ್ನು ಆರಂಭಿಸಿದರೆ, ಸೀಮಾಂತವಾದಿಗಳಾದರೋ ತಮ್ಮ ವಿಶ್ಲೇಷಣೆಯನ್ನು ಅವಶ್ಯಕತೆಯುಳ್ಳ ಏಕೈಕ ವ್ಯಕ್ತಿಯೊಂದಿಗೆ ಆರಂಭಿಸಿದರು. ಅಮೂರ್ತ ಶಬ್ದಗಳಲ್ಲಿ ವಿವರಿಸಲ್ಪಟ್ಟ ವ್ಯಕ್ತಿಗಳೊಂದಿಗೆ (ಅಂದರೆ ಅವರ ಅವಶ್ಯಕತೆಗಳು, ಬೇಡಿಕೆಗಳು, ಸಾಮರ್ಥ್ಯಗಳು ಮತ್ತು ಪರಸ್ಪರ ಅವಲಂಬಿತವಾದ ಮಾರುಕಟ್ಟೆಗಳಲ್ಲಿ ಅವರ ಅಂತರ್‌ಕ್ರಿಯೆಗಳು) ಸಮಾಜವನ್ನು ಪುನರ್ ರಚಿಸುವ ಕೆಲಸವನ್ನು ಕೈಗೆತ್ತಿಕೊಂಡರು. ಹೀಗಾಗಿ ಸಮಾಜ ಮತ್ತು ಆರ್ಥಿಕತೆಗಳು ಅವರ ಪ್ರಯತ್ನದ ಆರಂಭ ಬಿಂದುವಾಗದೆ ಪರಿಣಾಮವೆನಿಸಿದವು. ಆರ್ಥಿಕ ವಿದ್ಯಮಾನಗಳ ಕುರಿತಾದ ಈ ದೃಷ್ಟಿಕೋನವನ್ನು ಜೋಸೆಫ್. ಎ. ಶುಮ್ಪೀಟರ್ ಅವರು ವಿಧಾನಾತ್ಮಕ ವ್ಯಕ್ತಿವಾದ ಎಂದು ಕರೆದರು. ರಾಬಿನ್ಸನ್ ಕ್ರೂಸೋನ ಅವಶ್ಯಕತೆ, ಇಚ್ಛೆ, ಸಾಧ್ಯತೆಯ ಅವಕಾಶಗಳ ಅನ್ವೇಷಣೆಯೊಂದಿಗೆ ಆರಂಭಿಸುವ ವಿಶ್ಲೇಷಣೆಯು ಆರ್ಥಿಕ ವಿಷಯಗಳನ್ನು ಕುರಿತ ವ್ಯಾಖ್ಯಾನವನ್ನು ನೀಡಿತು. ಏಕೆಂದರೆ ಒಬ್ಬ ವ್ಯಕ್ತಿಯು ಶೂನ್ಯದಲ್ಲಿ ಇದ್ದಾನೆಯೋ ಎಂಬಂತೆ ಅವನ ಆರ್ಥಿಕ ವರ್ತನೆಯನ್ನು ವಿಶ್ಲೇಷಿಸಲು ಇದು ಅವಕಾಶವನ್ನು ಒದಗಿಸುತ್ತದೆ ಎಂಬುದಕ್ಕೆ ಅವರ ಸಮಕಾಲೀನ ಮಿತ್ರರಾದ ಆಸ್ಟ್ರಿಯಾದ ಕಾರ್ಲ್ ಮೆಂಜರ್ ಅವರು ಒತ್ತು ನೀಡಿದ್ದರು. ಇದರ ಮುಂದಿನ ಹೆಜ್ಜೆಯಾಗಿ ನಾವು ವ್ಯಕ್ತಿಗಳು ಸಾಮಾಜಿಕ ಮತ್ತು ಆರ್ಥಿಕ ಅಂತರ್ಕ್ರಿಯೆಗಳು, ಅವರ ಸ್ವಂತ ಹಿತಾಸಕ್ತಿಯನ್ನು ಪೂರೈಸಿದರೆ ಮಾತ್ರವೇ ಮತ್ತು ಎಷ್ಟರಮಟ್ಟಿಗೆ ಪೂರೈಸುತ್ತವೆ ಎಂಬುದನ್ನು ಗಣನೆಗೆ ತೆಗೆದುಕೊಂಡು ಅದರಲ್ಲಿ ತೊಡಗಿಕೊಳ್ಳುತ್ತಾರೆ ಎಂಬುದನ್ನು ಗಮನಿಸಬಹುದು. ಈ ರೀತಿಯಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸಂಬಂಧಗಳನ್ನು ಮತ್ತೆ ಏಕೈಕ ಕಾರಕ(agent)ಗಳೆಂಬಂತೆ ಸಂಕ್ಷೇಪಿಸಲಾಯಿತು.

ಎರಡನೆಯದಾಗಿ ಶಾಸ್ತ್ರೀಯ ಅರ್ಥಶಾಸ್ತ್ರದ ವಸ್ತುನಿಷ್ಠ ಸಿದ್ಧಾಂತಕ್ಕೆ ವಿರುದ್ಧವಾಗಿ ಸೀಮಾಂತವಾದಿ ಅರ್ಥಶಾಸ್ತ್ರವು ಸಂಪೂರ್ಣವಾಗಿ, ಮೌಲ್ಯ ಮತ್ತು ವಿತರಣೆಯ ವ್ಯಕ್ತಿನಿಷ್ಠ ಸಿದ್ಧಾಂತವನ್ನು ಪ್ರತಿಪಾದಿಸುತ್ತದೆ ಎಂದು ಕೆಲವೊಮ್ಮೆ ಹೇಳಲಾಗುತ್ತದೆ. ಆಸ್ಟ್ರಿಯ ದೇಶದ ಅರ್ಥಶಾಸ್ತ್ರಜ್ಞರಾದ ಕಾರ್ಲ್ ಮೆಂಜರ್ ಮತ್ತು ಲುಡ್ವಿಗ್ ವಾನ್ ಮೈಸಿಸ್ (1881-1973) ಅವರುಗಳು, ಎಲ್ಲ ಮೌಲ್ಯವು (ಮತ್ತು ವೆಚ್ಚವು) ಅಂತಿಮವಾಗಿ ಮನುಷ್ಯರ ವ್ಯಕ್ತಿನಿಷ್ಠ ಮೌಲ್ಯಾಂಕನದಿಂದ ಮಾತ್ರವೇ ಹುಟ್ಟಿಕೊಳ್ಳುತ್ತದೆ ಎಂಬ ಸಿದ್ದಾಂತವನ್ನು ಮುಂದಿಟ್ಟದ್ದು ನಿಜ. ಆದರೆ ಎಲ್ಲ ಸೀಮಾಂತವಾದಿ ಚಿಂತಕರು ಸಹ ಈ ದೃಷ್ಟಿಕೋನವನ್ನು ಒಪ್ಪಿರಲಿಲ್ಲ. ಬದಲಿಗೆ ಬೇಡಿಕೆ ಮತ್ತು ಸರಬರಾಜಿನ ಎಲ್ಲ ಶಕ್ತಿಗಳನ್ನು ಅಥವಾ ವಸ್ತುನಿಷ್ಠ ಮತ್ತು ವ್ಯಕ್ತಿನಿಷ್ಠ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಮಾತ್ರ ಬೆಲೆಗಳು ಮತ್ತು ಆದಾಯವನ್ನು ಕುರಿತಾದ ಒಂದು ಸಮಗ್ರ ಸಿದ್ಧಾಂತವನ್ನು ಮುಂದಿಡಲು ಸಾಧ್ಯ ಎಂಬ ಆಲ್ಫ್ರೆಡ್ ಮಾರ್ಷಲ್ ಅವರ ವ್ಯಾಖ್ಯಾನವೇ ಬಹುತೇಕವಾಗಿ ಪ್ರಚಲಿತವಾಗಿತ್ತು. ತಮ್ಮ ಸಿದ್ದಾಂತವನ್ನು ಶಾಸ್ತ್ರೀಯ ಅರ್ಥಶಾಸ್ತ್ರದ ಮುಂದುವರಿಕೆ ಮತ್ತು ವಿಸ್ತರಣೆ ಎಂಬಂತೆ ಪ್ರಸ್ತುತಪಡಿಸುವ ತಮ್ಮ ಪ್ರಯತ್ನದಲ್ಲಿ ಮಾರ್ಷಲ್ ಅವರು, ಶಾಸ್ತ್ರೀಯ ಸಿದ್ಧಾಂತವು ತಿರುಳಿನಲ್ಲಿ ಉತ್ಪಾದನೆ ಮತ್ತು ವಿತರಣೆಯ ಭಾಗಕ್ಕೆ ಸೀಮಿತವಾಗಿದ್ದು, ಬೇಡಿಕೆಯ ಭಾಗವು ಇನ್ನೂ ಸಹ ಶೈಶವಾವಸ್ಥೆಯಲ್ಲಿ ಇತ್ತು ಎಂದು ವಾದಿಸಿದರು. ಶಾಸ್ತ್ರೀಯ ಸಿದ್ದಾಂತಕ್ಕೆ ಪೂರಕವಾಗಿ ಅಗತ್ಯವಾಗಿದ್ದದ್ದೆಂದರೆ ಬಳಕೆ ಮತ್ತು ಬೇಡಿಕೆಯ ಒಂದು ಸಿದ್ಧಾಂತ; ಮಾರ್ಷಲ್ ಅವರು ತಾನು ಈ ಕರ್ತವ್ಯವನ್ನು ನೆರವೇರಿಸಿದೆ ಎಂದು ಹೆಮ್ಮೆಪಟ್ಟುಕೊಂಡರು.

ಈ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಟಿಪ್ಪಣಿಗಳು ಸೂಕ್ತವೆನಿಸುತ್ತವೆ. ಮೊದಲನೆಯದಾಗಿ ನಾವು ನೋಡಿದಂತೆ, ಸ್ಮಿತ್ ಮತ್ತು ಅವರ ಸಹಚರರಾದ ಶಾಸ್ತ್ರೀಯ ಅರ್ಥಶಾಸ್ತ್ರಜ್ಞರು ಒಂದು ನಿರ್ದಿಷ್ಟ ಉತ್ಪಾದನಾ ವ್ಯವಸ್ಥೆ ಮತ್ತು ಒಂದು ನಿರ್ದಿಷ್ಟ ವಾಸ್ತವಿಕ ಕೂಲಿಗೆ ಸಂಬಂಧಿಸಿದಂತೆ ಲಾಭದ ದರ ಮತ್ತು ಸಾಪೇಕ್ಷ ಬೆಲೆಗಳನ್ನು ನಿರ್ಧರಿಸಿದ್ದರು. ಶಾಸ್ತ್ರೀಯ ದೃಷ್ಟಿಕೋನದ ಒಂದು ತಾರ್ಕಿಕ ಸುಸಂಬದ್ಧ ನಿರೂಪಣೆಯು ತೋರಿಸಿ ಕೊಡುವುದೇನೆಂದರೆ ಬೇಡಿಕೆಯ ಕಾರ್ಯ(ಫಂಕ್ಷನ್ಸ್)ಗಳಂತಹ ಇನ್ಯಾವುದೇ ದತ್ತಾಂಶವು ಈ ಕಾರ್ಯವನ್ನು ಪೂರ್ಣಗೊಳಿಸುವುದಕ್ಕೆ ಅಗತ್ಯವಾಗುವುದಿಲ್ಲ. ಆದರೆ ಲಾಭದ ದರ ಮತ್ತು ಬೆಲೆಗಳ ಕುರಿತಾದ ಅವರ ವಿವರಣೆಯು ಸೀಮಾಂತವಾದಿಗಳ ವಿವರಣೆಗಿಂತ ಭಿನ್ನವಾಗಿದ್ದರೂ ಸಹ ಮಾರ್ಷಲ್ ಮತ್ತು ಇತರ ಸೀಮಾಂತವಾದಿಗಳು ನಂಬಿರುವಂತೆ ಅದು ಅಪೂರ್ಣ ಅಥವಾ ಅನಿಶ್ಚಿತವಾದುದಾಗಿರಲಿಲ್ಲ. ಯಾವುದೇ ನಿರ್ದಿಷ್ಟ ಉತ್ಪಾದನಾ ವ್ಯವಸ್ಥೆಯು ನಿರ್ದಿಷ್ಟ ಉತ್ಪನ್ನ ಮಟ್ಟಗಳನ್ನು ಒಳಗೊಂಡಿರುವುದರಿಂದ ಶಾಸ್ತ್ರೀಯ ನಿರ್ಣಾಯಕತೆಯು ವಿಭಿನ್ನ ಸರಕುಗಳ ಸಾಮಾಜಿಕ ಪರಿಣಾಮಕಾರಿ

ಬೇಡಿಕೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡಿತ್ತು. ಹೀಗಾಗಿ ಶಾಸ್ತ್ರೀಯ ವಿಚಾರಧಾರೆಯಲ್ಲಿ ತಮ್ಮ ಸಿದ್ಧಾಂತವು ದೃಢವಾಗಿ ಸ್ಥಾಪಿತಗೊಂಡಿದೆ ಎಂಬ ಮಾರ್ಷಲ್ ಅವರ ವರ್ಗೀಕರಣವು ಸಂದೇಹಾಸ್ಪದವಾಗಿತ್ತು. ಪ್ರಚಾರದ ದೃಷ್ಟಿಯಿಂದ, ತಮ್ಮ ಹೊಸ ಸಿದ್ಧಾಂತವು, ಈಗಾಗಲೇ ಈ ವಿಷಯದಲ್ಲಿ ಪ್ರಖ್ಯಾತ ನಾಯಕರೆನಿಸಿದ ಆಡಂ ಸ್ಮಿತ್ ಅಥವಾ ಡೇವಿಡ್ ರಿಕಾರ್ಡೋ ಅವರ ತತ್ತ್ವಗಳ ನಿಟ್ಟಿನಲ್ಲಿ ಸ್ಥಾಪಿಸಲ್ಪಟ್ಟಿದೆಯೆಂದು ಪ್ರಸ್ತುತಪಡಿಸುವುದು ನಿಶ್ಚಿತವಾಗಿಯೂ ಅತ್ಯಂತ ಅನುಕೂಲಕರವಾಗಿತ್ತು.

ಒಟ್ಟಿನಲ್ಲಿ, ಬೇಡಿಕೆಯ ವಿಷಯಕ್ಕೆ ಸಂಬಂಧಿಸಿದಂತೆ, ಈ ಎರಡು ವೈಚಾರಿಕ ಶಾಖೆಗಳ ನಡುವೆ ಇದ್ದ ಭಿನ್ನಾಭಿಪ್ರಾಯವಾದರೂ ಏನು? ಶಾಸ್ತ್ರೀಯ ಅರ್ಥಶಾಸ್ತ್ರದ ಚಲನಶೀಲ ದೃಷ್ಟಿಕೋನದ ಪ್ರಕಾರ ಈಗಾಗಲೇ ನಮ್ಮ ಅರಿವಿನಲ್ಲಿರುವ ಸರಕುಗಳಲ್ಲಿ, ಹೊಸದಾದ ಅಥವಾ ಉತ್ತಮೀಕರಿಸಲ್ಪಟ್ಟ ಗುಣಗಳನ್ನು ಸದಾ ಲಭ್ಯಗೊಳಿಸಲಾಗುತ್ತಿದ್ದು, ತನ್ಮೂಲಕ ಸರಕುಗಳ ವ್ಯಾಪ್ತಿಯು ವಿಸ್ತರಿಸಿಕೊಂಡಂತೆ ಬಳಕೆದಾರರ ನಡುವೆ ಕಲಿಕೆಯ ಪ್ರಕ್ರಿಯೆಗಳು ಶುರುವಾಗುತ್ತವೆ. ಪ್ರಾರಂಭದಲ್ಲಿ ಇದು ಕೇವಲ ಉಳ್ಳವರನ್ನು ಪ್ರಭಾವಿಸುತ್ತದೆಯಾದರೂ, ಅಂತಿಮವಾಗಿ ಇದು ಸಮಾಜದ ಕೆಳಗಿನ ಶ್ರೇಣಿಗಳನ್ನು ಸಹ ತಲುಪುತ್ತದೆ. ಉಳ್ಳವರು ತಾವು ಕೆಳ ಶ್ರೇಣಿಯವರಿಗಿಂತಲೂ ಪ್ರತ್ಯೇಕವೆಂದು ತೋರಿಸಿಕೊಳ್ಳಲು ಪ್ರಯತ್ನಿಸುತ್ತಾರೆ ಮತ್ತು ಅದೇ ಸಮಯದಲ್ಲಿ ಕೆಳಗಿನ ಶ್ರೇಣಿಗಳು ಉಳ್ಳವರನ್ನು ಅನುಕರಿಸಲು ಪ್ರಯತ್ನಿಸುತ್ತವೆ. ಈ ವರ್ತನೆಯು ಉಪಭೋಗದ ಚಲನಶೀಲತೆಯನ್ನು ಹೆಚ್ಚಿಸಿ, ಉತ್ಪನ್ನಗಳ ನಾವೀನ್ಯತೆಗೆ ವಾಸ್ತವಿಕ ಪ್ರೋತ್ಸಾಹನವೆನಿಸಿದೆ. ಉದಾಹರಣೆಗೆ ಆರ್ಥಿಕ ಅಭಿವೃದ್ಧಿಯ ಯಾವುದಾದರು ಹಂತದಲ್ಲಿ ಕೇವಲ ಶ್ರೀಮಂತರು ಮಾತ್ರ ಟೆನಿಸ್ ಆಟವನ್ನು ಆಡಲು ಅಗತ್ಯವಾದ ಸಾಧನಗಳನ್ನು ಕೊಳ್ಳಬಲ್ಲರಾಗಿರುತ್ತಾರೆ. ಆದಾಯದ ಮಟ್ಟ ಹೆಚ್ಚುತ್ತಿದ್ದಂತೆ ಶ್ರೀಮಂತರನ್ನು ಅನುಕರಿಸುವ ಪ್ರಯತ್ನದಲ್ಲಿ ಸಮಾಜದಲ್ಲಿನ ಕೆಳಗಿನ ಶ್ರೇಣಿಗಳು ಸಹ ಟೆನಿಸ್ ಆಟವನ್ನು ತಾವೂ ಆಡಲು ಪ್ರಾರಂಭಿಸುತ್ತವೆ. ಆಗ ಬಡವರಿಂದ ಪ್ರತ್ಯೇಕವಾಗಿ ಉಳಿಯಲು, ಶ್ರೀಮಂತರು ಗಾಲ್ಫ್, ನಂತರ ಯಾನ(sailing) ಅಥವಾ ಪೋಲೋ ಮುಂತಾದವುಗಳನ್ನು ಅರಸಿಕೊಂಡು ಹೋಗಬೇಕಾಗುತ್ತದೆ. ಹೀಗಾಗಿ ಶಾಸ್ತ್ರೀಯ ದೃಷ್ಟಿಕೋನದಲ್ಲಿ ಯಾವುದೇ ವ್ಯಕ್ತಿಯ ಉಪಭೋಗದ ನಿಟ್ಟಿನ ವರ್ತನೆಯನ್ನು, ಆತ ನಿರ್ದಿಷ್ಟ ಸರಕುಗಳ ಜಗತ್ತಿನೊಂದಿಗೆ ಕರ್ತನ(agent) ಮುಖಾಮುಖಿಯೆಂಬಂತೆ ಅಮೂರ್ತವಾಗಿ ವಿವರಿಸಬಹುದಾದ ಯಾವುದೇ ಪ್ರತ್ಯೇಕಗೊಂಡ ಹಾಗೂ ಸ್ವಾಯತ್ತ ವ್ಯಕ್ತಿಗಳಿಲ್ಲ; ಮನುಷ್ಯನು ಒಬ್ಬ ಸಾಮಾಜಿಕ ಜೀವಿಯಾಗಿದ್ದು ಆತನು ಬೇರೆಯವರು ಏನು ಮಾಡುತ್ತಾರೆ ಎಂಬುದನ್ನು ಪರಿಗಣನೆಗೆ ತೆಗೆದುಕೊಳ್ಳುತ್ತಾನೆ; ಬೇರೆಯವರನ್ನು ಅನುಕರಿಸಲು ಅಥವಾ ಅವರಿಂದ

ದೂರವಾಗಲು ಸಂದರ್ಭಾನುಸಾರವಾಗಿ ಪ್ರಯತ್ನಿಸುತ್ತಿರುತ್ತಾನೆ. ಆದರೆ ಸೀಮಾಂತವಾದದ ಜಡ ದೃಷ್ಟಿಕೋನದ ಪ್ರಕಾರ ಒಬ್ಬ ಪ್ರತ್ಯೇಕಗೊಂಡ ವ್ಯಕ್ತಿಯ ಉಪಭೋಗದ ವರ್ತನೆ ಮಾತ್ರವೇ ನಿರ್ದಿಷ್ಟವಾಗಿ ಅರ್ಥಶಾಸ್ತ್ರಜ್ಞನ ಗಮನದ ಕೇಂದ್ರ ಬಿಂದುವಾಗಿರುತ್ತದೆ. (ಆಸಕ್ತಿದಾಯಕ ಸಂಗತಿ ಅಂದರೆ, ನಾವು ಅಧ್ಯಾಯ ಹತ್ತರಲ್ಲಿ ನೋಡಲಿರುವಂತೆ, ಆಧುನಿಕ ಸ್ಥೂಲ – ಮ್ಯಾಕ್ರೋ - ಅರ್ಥಶಾಸ್ತ್ರದಲ್ಲಿ ಬಹುತೇಕವಾಗಿ, ಒಬ್ಬ ಏಕೈಕ ಪ್ರಾತಿನಿಧಿಕ ಕರ್ತನಿದ್ದಾನೆ ಎಂಬ ಊಹೆಯ ಮೇಲೆ ರಾಬಿನ್ಸನ್ ಕ್ರೂಸೋ ಮಾದರಿಯ ಪಾತ್ರವು ಅಸ್ತಿತ್ವದಲ್ಲಿದೆ.) ಉಪಯುಕ್ತತೆಯ ಕ್ರಿಯೆಯಲ್ಲಿ ರೂಪಿಸಲ್ಪಟ್ಟ (ಒಂದು ನಿರ್ದಿಷ್ಟ ಮತ್ತು ಶಾಶ್ವತವಾದ ಸರಕುಗಳ ಗುಂಪಿನ ನಿಟ್ಟಿನಲ್ಲಿ ನಿರೂಪಿಸಲಾಗಿರುವ), ನಿರ್ದಿಷ್ಟ ಆಯ್ಕೆಗಳ ಕುರಿತಾದ ಸೀಮಾಂತವಾದಿ ಪರಿಕಲ್ಪನೆಯೂ ಸಹ ಹೊಸ ಸರಕುಗಳ ಹೊರಹೊಮ್ಮುವಿಕೆಯ ಕುರಿತು ಸೂಕ್ತ ವಿವರಣೆಯನ್ನು ನೀಡುವುದಿಲ್ಲ. ಹೀಗಾಗಿ ಚಲನಶೀಲ ಪ್ರಕರಣಗಳನ್ನು ಯಾವುದೇ ರೀತಿಯಲ್ಲಿ ನಿರ್ವಹಿಸುವುದಿಲ್ಲ. ಆದ್ದರಿಂದ ಸೀಮಾಂತವಾದದೊಂದಿಗೆ ಆರಂಭದಲ್ಲಿ ಅಭಿವೃದ್ಧಿ ಮತ್ತು ಆರ್ಥಿಕ ಬೆಳವಣಿಗೆಯ ಕುರಿತಾದ ಪ್ರಶ್ನೆಗಳಿಂದ ನಮ್ಮ ಗಮನವು ಪರ್ಯಾಯ ಉಪಯೋಗಗಳೆಡೆಗಿನ ಸಂಪನ್ಮೂಲಗಳ ವಿತರಣೆಯತ್ತ ಪಲ್ಲಟಗೊಂಡಿತು ಎಂಬುದು ಆಶ್ಚರ್ಯದ ಸಂಗತಿಯಾಗಬಾರದು.

ಎರಡು ದೃಷ್ಟಿಕೋನಗಳ ಮಧ್ಯದ ವ್ಯತ್ಯಾಸವನ್ನು ಆಡಂ ಸ್ಮಿತ್ ಅವರು ಮುಂದಿಟ್ಟ ಸುಪ್ರಸಿದ್ಧವಾದ 'ನೀರು ಮತ್ತು ವಜ್ರದ ವಿರೋಧಾಭಾಸ'ದ ಮೂಲಕ ವಿವರಿಸಬಹುದು. ಮನುಷ್ಯನ ಉಳಿವಿಗೆ ತೀರಾ ಅನಿವಾರ್ಯವಾದ ನೀರು ಅತ್ಯಂತ ಹೆಚ್ಚಿನ ಮಟ್ಟದ ಉಪಯುಕ್ತ ಮೌಲ್ಯವನ್ನು ಹೊಂದಿದ್ದೂ ಸಹ ಇಂಗ್ಲಿಷ್ ದ್ವೀಪಗಳಲ್ಲಿ ಬಹಳ ಅಗ್ಗವಾಗಿರುತ್ತದೆ, ಆದರೆ ಇದಕ್ಕೆ ತದ್ವಿರುದ್ಧವಾಗಿ ಯಾವ ಉಪಯುಕ್ತತಾ ಮೌಲ್ಯವನ್ನೂ ಹೊಂದಿರದ ವಜ್ರಗಳು ಅತ್ಯಂತ ದುಬಾರಿಯಾಗಿರುತ್ತವೆ. ಈ ವಿರೋಧಾಭಾಸವನ್ನು ಪರಿಹರಿಸಲು ಸ್ಮಿತ್ ವಿಫಲರಾದರು. ಏಕೆಂದರೆ ಅವರಿಗೆ ಸೀಮಾಂತ ಉಪಯುಕ್ತತೆಯ ಸಿದ್ಧಾಂತವು ತಿಳಿದಿರಲಿಲ್ಲವೆಂದು ಮೆಂಜರ್ ಮತ್ತು ಇತರರು ನಂತರದಲ್ಲಿ ಆಪಾದಿಸಿದರು. ಸ್ಮಿತ್ ಅವರಲ್ಲಿ ಅಂತಹ ಯಾವುದೇ ಸಿದ್ಧಾಂತವಿರಲಿಲ್ಲ ಎಂಬುದು ನಿಜವಾದರೂ ಈ ಟೀಕೆಯನ್ನು ಒಪ್ಪಿಕೊಳ್ಳುವುದು ಕಷ್ಟ. ಸ್ಮಿತ್ ಅವರ ವಾದವೇನೆಂದರೆ ನೀರು ಅಗ್ಗವಾಗಿರುವುದಕ್ಕೆ ಕಾರಣ ಅದನ್ನು ಪಡೆದುಕೊಳ್ಳುವುದು ಕಷ್ಟವಲ್ಲ, ಆದರೆ ವಜ್ರಗಳನ್ನು ಕಂಡುಹಿಡಿಯುವ ಮತ್ತು ಅದರ ಕೆಲಸಗಳ ನಿರ್ವಹಣೆಯ ವೆಚ್ಚವು ದುಬಾರಿಯಾಗಿದೆ. ಆದರೆ ವಜ್ರಗಳನ್ನು ಗಳಿಸಿಕೊಳ್ಳಬೇಕು ಎಂದು ಜನರು ಆಶಿಸುವುದಾದರೂ ಏಕೆ? ಸ್ಮಿತ್ ಅವರಿಗೆ ಈ ಪ್ರಶ್ನೆಯ ಉತ್ತರದ ಬಗ್ಗೆ ಸ್ಪಷ್ಟತೆಯಿತ್ತು; ಅವರ ಪ್ರಕಾರ ಇದು ವ್ಯಕ್ತಿ ಮತ್ತು ವಸ್ತುವಿನ, ಮನುಷ್ಯ ಮತ್ತು ವಜ್ರದ - ಸರಳ

ಸಂಬಂಧವಲ್ಲ ಎಂಬುದನ್ನು ಜನರು ಅರ್ಥಮಾಡಿಕೊಳ್ಳಬೇಕು. ಬದಲಿಗೆ ಮುಖ್ಯವಾದ ಕಾರಣವೆಂದರೆ (ಇದೊಂದೇ ಕಾರಣವಲ್ಲ) ಮನುಷ್ಯರು ಇತರರಿಗೆ ತಮ್ಮ ಸಂಪತ್ತು ಮತ್ತು ಸ್ಥಾನಮಾನವನ್ನು ಸಂಕೇತಿಸಲು ವಜ್ರಗಳು ಸಹಾಯಕವಾಗುತ್ತವೆ ಎಂಬ ಕಾರಣದಿಂದ ಅವುಗಳನ್ನು ಅಪೇಕ್ಷಿಸುತ್ತಾರೆ. ವಜ್ರವು ದುಬಾರಿ ಆದಷ್ಟೂ, ಈ ಕಾರ್ಯಕ್ಕೆ ಹೆಚ್ಚು ಸೂಕ್ತವೆನಿಸುತ್ತದೆ. ಏಕೆಂದರೆ ಬೇರೆಯವರಿಗೆ ಅದನ್ನು ಕೊಳ್ಳುವುದು ಸಾಧ್ಯವಾಗುವುದಿಲ್ಲ. ಒಬ್ಬನೇ ಒಬ್ಬ ವ್ಯಕ್ತಿಯ ಉಪಭೋಗದ ಪ್ರವೃತ್ತಿಯನ್ನು ಅರ್ಥಮಾಡಿಕೊಳ್ಳಬೇಕೆಂದರೂ ಸಹ ನಾವು ಸಾಮಾಜಿಕ ಪಿರಮಿಡ್‌ನಲ್ಲಿ ಅಂದರೆ ಶ್ರೇಣಿಯಲ್ಲಿ ಆ ವ್ಯಕ್ತಿಯ ಸ್ಥಾನವೇನು ಎಂಬುದನ್ನು ಗ್ರಹಿಸಬೇಕು. ರಾಬಿನ್ಸನ್ ಕ್ರೂಸೋಗೆ ಸ್ಮಿತ್ ಅವರ ಚಿಂತನೆಯ ಪ್ರಕಾರ ವಜ್ರಗಳ ಬಗ್ಗೆ ಪ್ರಾಯಶಃ ಯಾವ ಆಸಕ್ತಿಯೂ ಇರಲಿಲ್ಲ, ಏಕೆಂದರೆ ಪ್ರಭಾವಿಸಲು ಅಲ್ಲಿ ಬೇರೆ ಮನುಷ್ಯರೇ ಇರಲಿಲ್ಲ.

ಮೂರನೆಯದಾಗಿ ಗಮನದ ಕೇಂದ್ರವು ಸೀಮಾಂತದೆಡೆಗೆ ಪಲ್ಲಟಗೊಂಡಿತು. ಆದ್ದರಿಂದಲೇ ಸೀಮಾಂತವಾದ ಎಂಬ ಹೆಸರು ಹುಟ್ಟಿಕೊಂಡಿತು. ಈ ವಿಚಾರಧಾರೆಯು ಮುಂದಿಡುವ ವಿಶ್ಲೇಷಣೆಯು ಒಂದು ನಿರ್ದಿಷ್ಟ ರೀತಿಯ ವಾಸ್ತವಾಂಶ ವಿರೋಧಿ ತರ್ಕದ ಸುತ್ತಲೂ ತಿರುಗುತ್ತದೆ ಮತ್ತು ಅದರಿಂದಾಗಿ ಈ ಕೆಳಗಿನ ಪ್ರಶ್ನೆಗಳು ಆರಂಭವಾಗುತ್ತವೆ: ಸಂಸ್ಥೆಯೊಂದರ (ಅಥವಾ ಸಮಗ್ರ ಅರ್ಥವ್ಯವಸ್ಥೆ) ಉತ್ಪಾದಕ ಅಂಶವು ಸ್ವಲ್ಪ ಹೆಚ್ಚು ಅಥವಾ ಕಡಿಮೆಯಾದರೆ, ಮತ್ತು ಇತರ ಎಲ್ಲ ಅಂಶಗಳು ಅದೇ ಪ್ರಮಾಣದಲ್ಲಿದ್ದರೆ ಉತ್ಪನ್ನವು ಎಷ್ಟರಮಟ್ಟಿಗೆ ಹೆಚ್ಚಬಹುದು (ಅಥವಾ ಕಡಿಮೆಯಾಗಬಹುದು)? ವ್ಯಕ್ತಿಯೊಬ್ಬನು/ಳು ತಾನು ಬಳಕೆ ಮಾಡುವ ಸರಕುಗಳಲ್ಲಿ ಒಂದನ್ನು ಸ್ವಲ್ಪ ಹೆಚ್ಚಿನ (ಅಥವಾ ಕಡಿಮೆ) ಪ್ರಮಾಣದಲ್ಲಿ ಬಳಸಿದಲ್ಲಿ, ಮತ್ತು ಅಷ್ಟೇ ಪ್ರಮಾಣದಲ್ಲಿ ಇತರ ಎಲ್ಲ ಸರಕುಗಳನ್ನು ಬಳಸಿದಲ್ಲಿ ಆ ವ್ಯಕ್ತಿಯ ಉಪಯುಕ್ತತೆಯು ಎಷ್ಟರಮಟ್ಟಿಗೆ ಹೆಚ್ಚಬಹುದು (ಅಥವಾ ಕಡಿಮೆಯಾಗಬಹುದು)? ಹೀಗಾಗಿ ಗಮನವನ್ನು ಒಂದು ನಿರ್ದಿಷ್ಟ ಪರಿಸ್ಥಿತಿ ಮತ್ತು ಇನ್ನೊಂದು ಊಹಾತ್ಮಕ ಪರ್ಯಾಯ ಪರಿಸ್ಥಿತಿಗಳ ನಡುವಿನ ಹೋಲಿಕೆಯತ್ತ ಕೇಂದ್ರೀಕರಿಸಲಾಯಿತು. ಪರ್ಯಾಯ ಪರಿಸ್ಥಿತಿಯು ಸಿದ್ಧಾಂತಕಾರನಿಂದ ರೂಪಿಸಲ್ಪಟ್ಟಿದ್ದು, ಆ ಕಾರಣದಿಂದಾಗಿ ಆತನು, ಪರಿಗಣನೆಯಲ್ಲಿರುವ ಆರ್ಥಿಕ ವ್ಯವಸ್ಥೆಯ ಕುರಿತು ಶಾಸ್ತ್ರೀಯ ಅರ್ಥಶಾಸ್ತ್ರಜ್ಞನಂತೆ ನಿರ್ವಿಕಾರ ವೀಕ್ಷಕನಾಗಿರುವುದು ಸಾಧ್ಯವಿಲ್ಲ. ಬದಲಿಗೆ ಆತನು ಸ್ವತಃ ಪ್ರಯೋಗಕರ್ತನಾಗಿದ್ದು ವ್ಯವಸ್ಥೆಯ ಊಹಾತ್ಮಕ ಏರುಪೇರುಗಳ ಪರಿಣಾಮಗಳನ್ನು ಕುರಿತು ಆಲೋಚಿಸುತ್ತಿದ್ದನು. ಶಾಸ್ತ್ರೀಯ ಅರ್ಥಶಾಸ್ತ್ರಜ್ಞರು ಆರ್ಥಿಕ ವ್ಯವಸ್ಥೆ ಹೇಗಿರುವುದೋ ಹಾಗೆಯೇ ವಿಶ್ಲೇಷಿಸಲು ಪ್ರಯತ್ನಿಸಿದರೆ ಸೀಮಾಂತವಾದಿ ಅರ್ಥಶಾಸ್ತ್ರಜ್ಞರು, ಅದರ ಗುಣಗಳನ್ನು

ಅರ್ಥಮಾಡಿಕೊಳ್ಳಲು ವಾಸ್ತವಿಕ ವ್ಯವಸ್ಥೆಗೆ ಪಕ್ಕದಲ್ಲಿರುವಂಥದ್ದು ಎಂದು ಪರಿಭಾವಿಸಿಕೊಂಡ ನಿರ್ಮಿತ ವ್ಯವಸ್ಥೆಯೊಂದಿಗೆ ಅದನ್ನು ಎದುರಿಸಿದರು. ಈ ವಿಧಾನಾತ್ಮಕ ವಿಭಾಜನವು ಬಹಳ ಮುಖ್ಯವಾಗಿದ್ದು ಅದು ಶಾಸ್ತ್ರೀಯ ಮತ್ತು ಸೀಮಾಂತವಾದಿ ದೃಷ್ಟಿಕೋನಗಳು ಹಾಗೂ ಅವು ಆರ್ಥಿಕ ಅನ್ವೇಷಣೆಯ ವಿವಿಧ ಕ್ಷೇತ್ರಗಳಲ್ಲಿ ಪಡೆದುಕೊಳ್ಳುವ ಫಲಿತಗಳಿಗೆ ವಿವರಣೆಯನ್ನು ಒದಗಿಸಬಲ್ಲದು. ಸೀಮಾಂತವಾದದ ಮೂಲಕ ಸೀಮಾಂತ ಉತ್ಪಾದಕತೆ ಮತ್ತು ಸೀಮಾಂತ ಉಪಯುಕ್ತತೆ ಎಂಬ ಅವಳಿ ಪರಿಕಲ್ಪನೆಗಳು ಬೌದ್ಧಿಕ ಕ್ಷೇತ್ರವನ್ನು ಪ್ರವೇಶಿಸಿದವು. ಮತ್ತು ಇವುಗಳ ಜೊತೆಯಲ್ಲಿಯೇ ವಿಭೇದಾತ್ಮಕ ಮತ್ತು ಅವಿಭಾಜ್ಯ ಕಲನಶಾಸ್ತ್ರಗಳ(ಡಿಫರೆನ್ಶಿಯಲ್ ಅಂಡ್ ಇಂಟೆಗ್ರಲ್ ಕ್ಯಾಲ್ಕುಲಸ್) ಗಣಿತಾತ್ಮಕ ಉಪಕರಣಗಳು ಅರ್ಥಶಾಸ್ತ್ರದ ಭಾಗವಾದವು. ಜರ್ಮನಿಯಲ್ಲಿ ತೋಟಗಳ ಒಡೆಯನು ಮತ್ತು ಕೃಷಿಯಲ್ಲಿ ಸೃಜನಶೀಲ ಶೋಧಕನೂ ಆಗಿದ್ದ ಜೊಹಾನ್ ಹೈನ್ರಿಚ್ ವಾನ್ ತ್ಯೂನನ್ (1783-1850) ಎಂಬಾತನು ಉತ್ಪಾದನೆಯ ಕುರಿತು ಸೀಮಾಂತವಾದಿ ವಿಧಾನವನ್ನು ಮೊದಲು ಪ್ರಚಾರ ಮಾಡಿದವರಲ್ಲಿ ಒಬ್ಬನಾಗಿದ್ದರೆ, ಅದೇ ಜರ್ಮನ್ ದೇಶಕ್ಕೆ ಸೇರಿದ್ದ ಕಾರ್ಲ್ ಹೈನ್ರಿಚ್ ರೌ (1782-1870) ಮತ್ತು ಹರ್ಮನ್ ಹೈನ್ರಿಚ್ ಗೋಸ್ಸೆನ್ (1810-1858) ಎಂಬುವರು ಬಳಕೆಯ ವಲಯಕ್ಕೆ ಸಂಬಂಧಿಸಿದಂತೆ ಇದರ ಅಳವಡಿಕೆಯನ್ನು ಮೊದಲು ಆರಂಭಿಸಿದರು.

ನಾಲ್ಕನೆಯದಾಗಿ ಸೀಮಾಂತವಾದಿಗಳು ಉತ್ಪಾದನೆಯ ಭಾಗವನ್ನು ಮತ್ತು ಬಳಕೆಯ ಭಾಗವನ್ನು - ಈ ಎರಡೂ ಸಹ ಒಂದನ್ನು ಇನ್ನೊಂದು ಸಂಪೂರ್ಣವಾಗಿ ಹೋಲುತ್ತವೆ ಎಂಬಂತೆ ಕಲ್ಪಿಸಿಕೊಂಡರು. ವಲಯಗಳಲ್ಲಿಯೂ ಒಂದೇ ರೀತಿಯ ನಿಯಮಗಳು ಪ್ರಚಲಿತವಾಗಿದ್ದವು. ಇದಕ್ಕೆ ಸಂಬಂಧಿಸಿದಂತ ಮುಖ್ಯವಾದ ಕಲ್ಪನೆಯನ್ನು ಅವರು ತೀವ್ರವಾಗಿ ಕ್ಷೀಣಿಸುವ ಪ್ರತಿಫಲಗಳು ಎಂಬ ಶಾಸ್ತ್ರೀಯ ತತ್ವದಿಂದ ಪಡೆದುಕೊಂಡರು. ಒಂದು ನಿರ್ದಿಷ್ಟ ಜಮೀನಿನ ಮೇಲೆ ಹೆಚ್ಚಿನ ಶ್ರಮವನ್ನು ವಿನಿಯೋಗಿಸಿದರೆ ಆಗ ಒಂದು ಹಂತದ ನಂತರ ಪ್ರತಿಯೊಂದು ವೃದ್ಧಿಶೀಲ ಶ್ರಮದ ಘಟಕಕ್ಕೆ ಫಲವಾಗಿ ಬರುವಂತಹ ಉತ್ಪನ್ನವು ಕಡಿಮೆ ವೃದ್ಧಿಯನ್ನು ಕಾಣುತ್ತಾ ಕಡೆಗೆ ವೃದ್ಧಿಯು ಶೂನ್ಯವಾಗುತ್ತದೆ (ನಂತರ ಋಣಾತ್ಮಕವಾಗುತ್ತದೆ). ಇದರ ಅರ್ಥವೇನೆಂದರೆ ಶ್ರಮದ ಸೀಮಾಂತ ಉತ್ಪಾದಕತೆಯು ಒಂದು ಜಮೀನಿನ ಮೇಲೆ ಹೆಚ್ಚಿನ ಶ್ರಮವನ್ನು ಉಪಯೋಗಿಸಿದಂತೆ ಕುಗ್ಗುತ್ತಾ ಹೋಗುತ್ತದೆ. ಸೀಮಾಂತವಾದವು ಈ ತತ್ವವನ್ನು ಅಳವಡಿಸಿಕೊಂಡಿದ್ದಲ್ಲದೆ ಇದನ್ನು ಉತ್ಪಾದನೆಯ ಎಲ್ಲಾ ಅಂಶಗಳಿಗೆ ಮತ್ತು ಅದೇ ರೀತಿಯಲ್ಲಿ ಬಳಕೆಯ ವಲಯಕ್ಕೆ ಯಾವುದೇ ವ್ಯತ್ಯಾಸವಿಲ್ಲದೆ ಸಾಮಾನ್ಯೀಕರಿಸಿತು. ಯಾವುದೇ ಆರ್ಥಿಕ ಪಾತ್ರಧಾರಿಯೂ ಒಂದು ಸರಕನ್ನು ಹೆಚ್ಚಾಗಿ ಬಳಸಿದಲ್ಲಿ ಆಗ ಪಾತ್ರಧಾರಿಯ ಒಟ್ಟು ಉಪಯುಕ್ತತೆಯು ಹೆಚ್ಚಾಗುತ್ತದೆ, ಆದರೆ ಸೀಮಾಂತ ಉಪಯುಕ್ತತೆಯು

ಕುಸಿಯುತ್ತದೆ: ಸರಕಿನ ಪ್ರತಿಯೊಂದು ಹೆಚ್ಚುವರಿ ಘಟಕವು ಸಹ ಉಪಯುಕ್ತತೆಯಲ್ಲಿ ಇನ್ನೂ ಚಿಕ್ಕದಾದ ಹೆಚ್ಚುವರಿಯನ್ನು ಉಂಟುಮಾಡುತ್ತದೆ ಮತ್ತು ಅಂತಿಮವಾಗಿ ಆ ಹೆಚ್ಚುವರಿಯು ಶೂನ್ಯಕ್ಕೆ ಸಮನಾಗುತ್ತದೆ (ನಂತರ ಅದು ಋಣಾತ್ಮಕವಾಗುತ್ತದೆ). ಹೀಗಾಗಿ ಹೆಚ್ಚಿನ ಶ್ರಮವನ್ನು ತೊಡಗಿಸಿದ ಒಂದು ನಿರ್ದಿಷ್ಟ ಜಮೀನಿಗೂ ಮತ್ತು ಸರಕೊಂದನ್ನು ಹೆಚ್ಚಾಗಿ ಬಳಸಿಕೊಳ್ಳುವಂತಹ ಅವಶ್ಯಕತೆಯುಳ್ಳ ಮಾನವನಿಗೂ ನಡುವೆ ಒಂದು ಹೋಲಿಕೆ ಇದೆ. ಜಮೀನಿನ ಒಂದು ತುಂಡಿನ ಮೇಲೆ ವಿನಿಯೋಗಿಸಿದ ಶ್ರಮವು ಉತ್ಪಾದನೆಯನ್ನು ಸೃಷ್ಟಿಸಿದರೂ ಸಹ ಅದರ ಸೀಮಾಂತ ಉತ್ಪಾದಕತೆಯು ಕುಗ್ಗುತ್ತಾ ಹೋಗುವಂತೆ ವ್ಯಕ್ತಿಯೊಬ್ಬನು ಸರಕನ್ನು ಬಳಸಿಕೊಳ್ಳುವುದು ಸಹ ಉಪಯುಕ್ತತೆಯನ್ನು ಸೃಷ್ಟಿಸುತ್ತದೆ, ಆದರೆ ಅದರ ಸೀಮಾಂತ ಉಪಯುಕ್ತತೆಯು ಕುಗ್ಗುತ್ತಾ ಹೋಗುತ್ತದೆ.

ಸೀಮಾಂತ ಉತ್ಪಾದಕತೆಯ ತತ್ವವು ಆದಾಯ ವಿತರಣೆಯ ಕುರಿತಾದ ಸೀಮಾಂತವಾದಿಗಳ ವಿವರಣೆಗೆ ಆಧಾರವಾಯಿತು. ಅವರ ಪ್ರಕಾರ ಉತ್ಪಾದನೆಯ ಅಂಶಗಳು ಸ್ಪರ್ಧಾತ್ಮಕ ಪರಿಸ್ಥಿತಿಗಳಲ್ಲಿ ಅವುಗಳ ಸೀಮಾಂತ ಉತ್ಪಾದಕತೆಗೆ ಅನುಗುಣವಾಗಿ ಪ್ರತಿಫಲವನ್ನು ಪಡೆದುಕೊಳ್ಳುತ್ತವೆ. ಏಕೆಂದರೆ ಯಾವುದಾದರೂ ಒಂದು ಅಂಶಕ್ಕೆ ಕಡಿಮೆ (ಅಥವಾ ಹೆಚ್ಚು) ಪ್ರತಿಫಲವನ್ನು ನೀಡಿದರೆ ಅದರ ಉದ್ಯೋಗವನ್ನು ಹೆಚ್ಚಿಸುವುದು (ಅಥವಾ ಕಡಿಮೆ ಮಾಡುವುದು) ಲಾಭದಾಯಕವಾಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ ನೈಜ ಕೂಲಿ ದರವು ಶ್ರಮದ ಸೀಮಾಂತ ಉತ್ಪಾದಕತೆಯನ್ನು ಪ್ರತಿಬಿಂಬಿಸುತ್ತದೆ ಮತ್ತು ಲಾಭದ ದರವು ಬಂಡವಾಳದ ಸೀಮಾಂತ ಉತ್ಪಾದಕತೆಯನ್ನು ಪ್ರತಿಬಿಂಬಿಸುತ್ತದೆ. ಅದೇನೆ ಇರಲಿ ನಾವು ಮುಂದೆ ಅಧ್ಯಾಯ 12ರಲ್ಲಿ ನೋಡಲಿರುವಂತೆ ಆದಾಯ ವಿತರಣೆಯ ಕುರಿತಾದ ಈ ವಿವರಣೆಯು ಗಂಭೀರ ಸಮಸ್ಯೆಗಳನ್ನು ಎದುರಿಸಬೇಕಾಯಿತು ಮತ್ತು ಅದನ್ನು ಮೊಟ್ಟಮೊದಲ ಬಾರಿಗೆ ಸ್ವೀಡನ್ ದೇಶದ ಅರ್ಥಶಾಸ್ತ್ರಜ್ಞರಾದ ನುಟ್ ವಿಕ್ಸೆಲ್ (1851 - 1926) ಅವರು ಗುರುತಿಸಿದರು.

ಐದನೆಯದಾಗಿ ಸೀಮಾಂತವಾದಿಗಳು ಎಲ್ಲಾ ಆರ್ಥಿಕ ಸಮಸ್ಯೆಗಳನ್ನು "ನಿರ್ಬಂಧಿತ ಅತ್ಯುತ್ತಮಗೊಳಿಸುವಿಕೆಯ ಸಮಸ್ಯೆಗಳು"(ಕಾನ್ಸ್ ಟ್ರೈನ್ಡ್ ಆಪ್ಟಿಮೈಸೇಶನ್ ಪ್ರಾಬ್ಲಮ್ಸ್) ಎಂದು ಅರ್ಥೈಸಿಕೊಂಡರು. ಲಭ್ಯವಿದ್ದ ತಂತ್ರಜ್ಞಾನದ ತಿಳುವಳಿಕೆ ಮತ್ತು ಲಭ್ಯವಿದ್ದ ಉತ್ಪಾದಕ ಸಂಪನ್ಮೂಲಗಳು ಉತ್ಪಾದನೆಗೆ ಸಂಬಂಧಿಸಿದ ನಿರ್ಬಂಧಗಳಾಗಿದ್ದವು ಮತ್ತು ಕುಟುಂಬದ ಆದಾಯ ಮತ್ತು ಸರಕುಗಳ ಬೆಲೆಗಳು ಬಳಕೆಗೆ ಸಂಬಂಧಿಸಿದ ನಿರ್ಬಂಧಗಳಾಗಿದ್ದವು. ಮೌಲ್ಯ ಮತ್ತು ವಿತರಣೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸೀಮಾಂತವಾದವು ಶಾಸ್ತ್ರೀಯ ಅರ್ಥಶಾಸ್ತ್ರವು ಉಪಯೋಗಿಸಿದ ಮಾಹಿತಿ ಸಂಗ್ರಹಕ್ಕಿಂತ ಭಿನ್ನವಾದದನ್ನು ಉಪಯೋಗಿಸಿಕೊಂಡಿತು. ಅದು ಈ ಕೆಳಗಿನ ಅಂಶಗಳನ್ನು

ಅಂಗೀಕೃತ ಸಂಗತಿಗಳು ಎಂದು ಭಾವಿಸಿತು: 1. ಉತ್ಪಾದನೆಗೆ ತಂತ್ರಜ್ಞಾನದ ಪರ್ಯಾಯಗಳು 2. ಕರ್ತೃ/ಕಾರಕಗಳ ಆಯ್ಕೆಗಳು 3. ಆರ್ಥಿಕತೆಯ ಆರಂಭಿಕ ಸ್ವತ್ತುಗಳಾಗಿ ಎಲ್ಲ ರೀತಿಯ ಉತ್ಪಾದಕ ಸಂಪನ್ಮೂಲಗಳು (ಶ್ರಮ, ಭೂಮಿ, ಬಂಡವಾಳ ಸರಕುಗಳು ಇತ್ಯಾದಿಗಳು) ಮತ್ತು 4. ಈ ಸ್ವತ್ತುಗಳಿಗೆ ಸಂಬಂಧಿಸಿದಂತೆ ಸಮಾಜದ ಸದಸ್ಯರಿಗೆ ಆಸ್ತಿಯ ಹಕ್ಕುಗಳನ್ನು ವಿತರಿಸುವುದು. ಈ ದತ್ತಾಂಶಗಳ ಮೂಲಕ ವಿಭಿನ್ನ ಸರಕುಗಳ ಉತ್ಪಾದಿತ ಪ್ರಮಾಣಗಳು ಮತ್ತು ಬೆಲೆಗಳು, ಉತ್ಪಾದನೆಯ ವಿಭಿನ್ನ ಅಂಶಗಳಿಗೆ ಸಂಬಂಧಿಸಿದ ಪ್ರತಿಫಲದ ದರಗಳು (ಕೂಲಿ, ಲಾಭ ಮತ್ತು ಬಾಡಿಗೆಗಳು) ಮತ್ತು ಆರ್ಥಿಕತೆಯ ವಿಭಿನ್ನ ವಲಯಗಳಲ್ಲಿನ ಅಂಶಗಳನ್ನು ತೊಡಗಿಸಿಕೊಳ್ಳುವುದು - ಇವುಗಳನ್ನು ನಿರ್ಣಯಿಸಲಾಯಿತು. ಸೀಮಾಂತವಾದಿಗಳು ಎಲ್ಲ ಬೆಲೆಗಳು ವಿಭಿನ್ನ ಸರಕುಗಳು ಮತ್ತು ಅಂಶಗಳ ಸಾಪೇಕ್ಷಿಕ ಅಭಾವಗಳನ್ನು ಸೂಚಿಸುತ್ತವೆ ಎಂಬುದಾಗಿ ಅರ್ಥಮಾಡಿಕೊಂಡರು ಎಂಬುದನ್ನು ಒತ್ತಿ ಹೇಳುವುದು ಅಗತ್ಯವಾಗುತ್ತದೆ. ಅವರು ಪುನರುತ್ಪಾದನೀಯ ಸರಕುಗಳನ್ನು ವಿಶೇಷವಾಗಿ ಬಂಡವಾಳ ಸರಕುಗಳನ್ನು ಅಭಾವದ ನಿಟ್ಟಿನಲ್ಲಿ ಮತ್ತು ತನ್ಮೂಲಕ ಬಾಡಿಗೆಯ ಸಿದ್ಧಾಂತದ ಮೂಲಕ ಅರ್ಥೈಸಿದರು, ದುರ್ಲಭ ನೈಸರ್ಗಿಕ ಸಂಪನ್ಮೂಲಗಳನ್ನು ಮಾತ್ರ ಈ ರೀತಿಯಲ್ಲಿ ಅರ್ಥೈಸುವ ಶಾಸ್ತ್ರೀಯ ಅರ್ಥಶಾಸ್ತ್ರಕ್ಕಿಂತ ಇದು ಭಿನ್ನವಾಗಿತ್ತು. ಹೀಗಾಗಿ ಸೀಮಾಂತವಾದಿ ತರ್ಕವು ಉತ್ಪಾದನೆಯ ಎಲ್ಲಾ ಅಂಶಗಳು ಸಂಪೂರ್ಣವಾಗಿ ತೊಡಗಿಕೊಳ್ಳುವಂತಹ ಪರಿಸ್ಥಿತಿಗಳನ್ನು ಊಹಿಸಿಕೊಳ್ಳುತ್ತದೆ. ಉದಾಹರಣೆಗೆ ಶ್ರಮದ ಸಂಪೂರ್ಣ ತೊಡಗಿಸಿಕೊಳ್ಳುವಿಕೆಯು ಇಲ್ಲದಿದ್ದಲ್ಲಿ, ಸಂಪೂರ್ಣ ಉದ್ಯೋಗ ದೊರಕುವವರೆಗೂ ಕಾರ್ಮಿಕರು ಕೂಲಿಯ ದರವನ್ನು ಕಡಿಮೆ ಮಾಡುತ್ತಾರೆಂದು ಭಾವಿಸಲಾಗುತ್ತದೆ. ಇದಕ್ಕೆ ಪ್ರತಿಯಾಗಿ ಮಾರುಕಟ್ಟೆ ತೀರುವೆ ಕೂಲಿಯ ದರವು ಬದುಕುಳಿಯಲು ಅಗತ್ಯವಾದ ದರಕ್ಕಿಂತ ಕಡಿಮೆ ಇದ್ದರೆ ಅಥವಾ ಕೂಲಿಯ ದರದ ಸ್ತರವು ಮಾರುಕಟ್ಟೆಯನ್ನು ತೀರುವೆಗೊಳಿಸುವ ನಿಟ್ಟಿನಲ್ಲಿಲ್ಲದಿದ್ದರೆ ಆಗ ವ್ಯವಸ್ಥೆ ಬದುಕುಳಿಯುವುದೇ ದುಸ್ತರವಾಗುತ್ತದೆ. ಸೇ ಅವರ ನಿಯಮವನ್ನು, ಶ್ರಮದ ಮಾರುಕಟ್ಟೆಗೂ ಸೇರಿದಂತೆ ಒಂದು ಸಮಗ್ರ ರೀತಿಯಲ್ಲಿ ಅನ್ವಯಿಸಲು ಯತ್ನಿಸಲಾಯಿತು ಇಲ್ಲಿಂದ ಆಚೆಗೆ ಸೀಮಾಂತವಾದಿಗಳ ಗಮನವು ಸೂಕ್ಷ್ಮ ಘಟಕಗಳ (ಕುಟುಂಬಗಳು ಹಾಗೂ ವ್ಯಾಪಾರ ಸಂಸ್ಥೆಗಳ) ಹಾಗೂ ಇಡಿಯ ಆರ್ಥಿಕ ವ್ಯವಸ್ಥೆಯ ಸಮತೋಲನದ ಮೇಲೆ ಕೇಂದ್ರೀಕೃತವಾಯಿತು. ಸಮತೋಲನದಲ್ಲಿರುವ ಕರ್ತೃ/ಕಾರಕಗಳಿಗೆ ತಮ್ಮನ್ನೇ ಪುನರ್ನಿರ್ದೇಶಿತಗೊಳಿಕೊಳ್ಳಲು ಯಾವ ಕಾರಣವೂ ಇರಲಿಲ್ಲ, ಏಕೆಂದರೆ ಅವರು ತಮಗೆ ಲಭ್ಯವಿರುವ ಎಲ್ಲಾ ಅವಕಾಶಗಳನ್ನು ಈಗಾಗಲೇ ಗರಿಷ್ಠ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಹೀಗೆ ಯಾವುದೇ ರೀತಿಯ ಗೊಂದಲವಿಲ್ಲದೆ ಸಮತೋಲನಗಳು ಸುಸ್ಥಿರ ಎಂದು

ಭಾವಿಸಿಕೊಳ್ಳಲಾಯಿತು - ಅಂದರೆ ಸಮತೋಲನಕ್ಕೆ ಬಂದೊದಗುವ ದಿಕ್ಚ್ಯುತಿಗಳು ಅಂತಹ ದಿಕ್ಚ್ಯುತಿಗಳನ್ನು ಸರಿಪಡಿಸಲು ವ್ಯವಸ್ಥೆಯೊಳಗಿನ ಶಕ್ತಿಗಳಿಗೆ ಚಾಲನೆ ನೀಡುತ್ತವೆ ಎಂದು ಪರಿಭಾವಿಸಲಾಯಿತು.

ಆರನೆಯದಾಗಿ ಅರ್ಥಶಾಸ್ತ್ರದಲ್ಲಿ ಸೀಮಾಂತವಾದಿಗಳ ಅಭಿಪ್ರಾಯದಲ್ಲಿ "ಎಲ್ಲಾ ಅಂಶಗಳು ಸಮಾನವಾಗಿದ್ದರೆ" ಎಂಬ ಊಹನವು ಮುಖ್ಯವಾಯಿತು ಮತ್ತು ಕೆಲವೊಂದು ಕ್ಷೇತ್ರಗಳಲ್ಲಿ ಅದು ಕೇಂದ್ರ ಭಾಗವನ್ನು ಸಹ ಆಕ್ರಮಿಸಿಕೊಂಡಿತು. ನಾವು ಈಗಾಗಲೇ ಒಂದು ನಿರ್ದಿಷ್ಟ ರೀತಿಯ ವಾಸ್ತವಾಂಶ ವಿರೋಧಿ ತರ್ಕದ ಬಗ್ಗೆ ಗಮನವನ್ನು ಸೆಳೆದಿದ್ದೇವೆ. ಸ್ವತ್ತುಗಳು, ಆಯ್ಕೆಗಳು ಇತ್ಯಾದಿಗಳಲ್ಲಿ ಊಹಾತ್ಮಕ ಬದಲಾವಣೆಗಳಿಂದ ಉಂಟಾಗುವ ಪರಿಣಾಮಗಳನ್ನು ಬದಲಾವಣೆಯ ಮೊದಲು ಮತ್ತು ನಂತರದ ಸಮತೋಲನಗಳ ಹೋಲಿಕೆಯಲ್ಲಿ ಕಂಡುಕೊಳ್ಳಲಾಯಿತು. ಹೀಗಾಗಿ ಸೀಮಾಂತವಾದಿ ವಿಶ್ಲೇಷಣಾ ವಿಧಾನವು ಹೋಲಿಕೆಯಲ್ಲಿ ಸ್ಥಿರವಾಗಿತ್ತೇ ಹೊರತು ಚಲನಶೀಲವಾಗಿರಲಿಲ್ಲ. ಬದಲಾವಣೆಯು ಹೊಸ ಸಮತೋಲನಕ್ಕೆ ಕೂಡಲೇ ಕಾರಣವಾಗುತ್ತದೆ ಎಂದು ಊಹಿಸಲಾಯಿತು. ಯಾವ ಹಾದಿಯ ಮೂಲಕ ಇದು ಆಗುತ್ತದೆ ಎಂದು ಅಂದುಕೊಳ್ಳಲಾಯಿತೋ ಅದನ್ನು ಪರೀಕ್ಷಿಸಲಿಲ್ಲ, ಏಕೆಂದರೆ ಇದು ಕಠಿಣವೆಂದು ಭಾವಿಸಲಾಯಿತು. ಉದಾಹರಣೆಗೆ ಇತರ ಎಲ್ಲಾ ಅಂಶಗಳು ಸಮಾನವಾಗಿರುವಾಗ, ಆರ್ಥಿಕತೆಯೊಂದರಲ್ಲಿನ ಜನಸಂಖ್ಯೆಯು ಶೇಕಡಾ ಹತ್ತರಷ್ಟು ಹೆಚ್ಚಾಗುತ್ತದೆ ಎಂದು ಅಂದುಕೊಳ್ಳೋಣ. ಇದು ವಾಸ್ತವಿಕ ಆರ್ಥಿಕ ವ್ಯವಸ್ಥೆಯೊಂದರಲ್ಲಿ ಘಟಿಸಿದರೆ ಅದು ಪ್ರಾಯಶಃ ಮೂಲ ಸಮತೋಲನವನ್ನು (ಅಂಥದೊಂದು ಇರುವುದಾದರೆ) ಬಹಳಷ್ಟು ಏರುಪೇರಿಗೆ ಗುರಿ ಮಾಡುತ್ತದೆ ಮತ್ತು ಮರು ಹೊಂದಾಣಿಕೆಯ ಪ್ರಕ್ರಿಯೆಗಳ ಮಹಾಪೂರವನ್ನು ಪ್ರೇರೇಪಿಸುತ್ತದೆ. ಸೀಮಾಂತವಾದವು ಹೊಸದೊಂದು ಸಮತೋಲನವು ಉಂಟಾಗುತ್ತದೆ ಎಂದೂ, ಅದನ್ನು ಸಾಧ್ಯ ಮಾಡಿದ ಪ್ರಕ್ರಿಯೆಗಳಿಂದ ಸ್ವತಂತ್ರವಾಗಿ ಅದರ ಗುಣಗಳನ್ನು ತಿಳಿದುಕೊಳ್ಳಬಹುದೆಂದು ಭಾವಿಸಿ, ವಿಶ್ಲೇಷಣೆಯನ್ನು ಸಂಕ್ಷೇಪಿಸುತ್ತದೆ.

ಊಹಾತ್ಮಕ ಬದಲಾವಣೆಗಳ ಸೀಮಾಂತವಾದಿ ವಿಧಾನವನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ, ಉತ್ಪಾದನೆಯ ಒಂದು ನಿಶ್ಚಿತ ಅಂಶದ ಲಭ್ಯ ಪ್ರಮಾಣದ ಪ್ರತ್ಯೇಕ ಬದಲಾವಣೆಯ ಅರ್ಥವೇನು ಎಂಬುದು ಎಲ್ಲಾ ಸಂದರ್ಭದಲ್ಲಿಯೂ ಸ್ಪಷ್ಟವಾಗುವುದಿಲ್ಲ. ವಿಶೇಷವಾಗಿ "ಬಂಡವಾಳ" ಎಂಬ ಅಂಶಕ್ಕೆ ಸಂಬಂಧಿಸಿದಂತೆ ಸ್ಪಷ್ಟತೆಯ ಕೊರತೆ ಇತ್ತು. ವಾಸ್ತವದಲ್ಲಿ ಒಂದು ವೇಳೆ ಅನೇಕ ರೀತಿಯ ಬಂಡವಾಳ ಸರಕುಗಳನ್ನು ತೊಡಗಿಸಿದ್ದಲ್ಲಿ, (ಯಂತ್ರಗಳು, ಸಾಗಣೆ ಬೆಲ್ಟು (conveyor belt), ಕಂಪ್ಯೂಟರ್‌ಗಳು ಇತ್ಯಾದಿ) ಬಂಡವಾಳದ ಪ್ರಮಾಣವನ್ನು ವೃದ್ಧಿಸುವುದು ಅಥವಾ

ಕಡಿಮೆಗೊಳಿಸುಸುವುದು ಅಂದರೆ ಅರ್ಥವೇನು? ಪ್ರತಿಯೊಂದು ರೀತಿಯ ಬಂಡವಾಳ ಸರಕು ಪರಿಮಾಣಾತ್ಮಕವಾಗಿ ಅಧಿಕವಾಗಿರುತ್ತದೆ ಎಂಬುದು ಇದರ ಅರ್ಥವೇ? ಹಾಗೇನಾದರೂ ಇದ್ದಲ್ಲಿ, ಇತರ ಅಂಶಗಳ ಪರಿಮಾಣಕ್ಕೆ ಅನುಗುಣವಾಗಿ ಹೊಸ ಸಮತೋಲನದಲ್ಲಿ ಈ ಎಲ್ಲಾ ಬಂಡವಾಳ ಸರಕುಗಳು ಪೂರ್ತಿಯಾಗಿ ಅವಶ್ಯಕವಿರುತ್ತವೆ ಎಂದು ಭಾವಿಸಬಹುದೇ? ಅಥವಾ ಕೆಲವು ಭಾಗಶಃ ಅಥವಾ ಪೂರ್ತಿಯಾಗಿ ಅತ್ಯಂತ ಅಧಿಕವಾಗಿರುತ್ತವೆ ಎಂದು ಭಾವಿಸಬಹುದೇ? ಹೀಗಾದಲ್ಲಿ ನಾವು ಇದನ್ನು "ಸಮತೋಲನ" ಎಂದು ಕರೆಯಬಹುದೇ? ಇವು ಉತ್ತರಿಸಲು ಕಠಿಣವಾದ ಪ್ರಶ್ನೆಗಳು ಮತ್ತು ನಾನಿಲ್ಲಿ ವಿವರಗಳಿಗೆ ಪ್ರವೇಶಿಸಲಾಗುವುದಿಲ್ಲ. ನುಟ್ ವಿಕ್ಸೆಲ್ ಅವರು ಇದರಿಂದ ಕಂಡುಕೊಂಡ ತೀರ್ಮಾನವನ್ನು ನಾವಿಲ್ಲಿ ವರದಿ ಮಾಡಿದರೆ ಅದು ಸಾಕಾಗುತ್ತದೆ. ಭೌತಿಕ ಸಂರಚನೆಯು ನಮಗೆ ಅಜ್ಞಾತವಾಗಿದ್ದು, ಸಮತೋಲನ ಪರಿಹಾರದ ಅವಿಭಾಜ್ಯ ಅಂಗವೆಂದು ಮಾತ್ರವೇ ನಿರ್ಧರಿಸಲ್ಪಡುವ ಬಂಡವಾಳದ ಪ್ರಮಾಣವನ್ನು ವ್ಯಕ್ತಿಯು ಒಂದು ಮೌಲ್ಯದ ಮೊತ್ತವೆಂದು ಭಾವಿಸಿದಾಗ ಮಾತ್ರ ಈ ದೃಷ್ಟಿಕೋನದ ಮೂಲಕ ಭೌತಿಕ ಬಂಡವಾಳವನ್ನು ಒಂದು ಸಮಗ್ರ ರೀತಿಯಲ್ಲಿ ವಿವರಿಸುವುದು ಸಾಧ್ಯ ಎಂದು ಅವರು ತೀರ್ಮಾನಿಸಿದರು. ವಿಕ್ಸೆಲ್ ಅವರಿಗೆ ಇದೊಂದು ತೃಪ್ತಿದಾಯಕ ಪ್ರಕ್ರಿಯೆ ಎನಿಸಲಿಲ್ಲ. ಏಕೆಂದರೆ ಕೇವಲ ಭೌತಿಕ ಬಂಡವಾಳ ವಸ್ತುಗಳು (ಅಂದರೆ ನೇಗಿಲುಗಳು, ಟ್ರ್ಯಾಕ್ಟರ್ ಗಳು, ಬ್ಲಾಸ್ಟ್ ಫರ್ನೇಸ್ ಗಳು ಇತ್ಯಾದಿ) ಮುಖ್ಯವಾಗುವಂತಹ ಆರ್ಥಿಕತೆಯಲ್ಲಿ ಬಂಡವಾಳದ ಪ್ರಮಾಣವನ್ನು ಪ್ರತಿನಿಧಿಸಲು ರೂಪಿಸಿದಂತಹ ಒಂದು ನಿರ್ದಿಷ್ಟ ಮೌಲ್ಯದ ಮೊತ್ತವು ಆರಂಭಿಕ ಸ್ವತ್ತಾದಾಗ ಉತ್ಪಾದನೆಯಲ್ಲಿ ಯಾವ ಅರ್ಥವನ್ನು ಒಳಗೊಂಡಿರುತ್ತದೆ ಎಂಬುದು ಸ್ವಲ್ಪವೂ ಸ್ಪಷ್ಟವಿಲ್ಲ.

ಏಳನೆಯದಾಗಿ ಉತ್ಪಾದನೆ ಮತ್ತು ಬಳಕೆ ಎರಡರಲ್ಲೂ ಸಹ ಸೀಮಾಂತವಾದಿಗಳು ಪರ್ಯಾಯದ (ಸಬ್ಸ್ಟಿಟ್ಯೂಷನ್) ಸಾಧ್ಯತೆಯನ್ನು ಒತ್ತಿ ಹೇಳಿದರು: ಕಾರಕಗಳ (factors) ಬೇರೆ ಬೇರೆ ಸಂಯೋಜನೆಗಳು ಅಥವಾ ಬಳಕೆಯ ವಸ್ತುಗಳೊಂದಿಗೆ ಒಂದು ನಿರ್ದಿಷ್ಟ ಮಟ್ಟದ ಉತ್ಪಾದನೆ ಅಥವಾ ಉಪಯುಕ್ತತೆಯನ್ನು ಸಾಧಿಸಲು ಸಾಧ್ಯ. ಮಾರ್ಷಲ್ ಅವರ ಪ್ರಕಾರ ಇಂತಹ ಪರ್ಯಾಯದ ತತ್ವವು ಅರ್ಥಶಾಸ್ತ್ರದ ಅತ್ಯಂತ ಮುಖ್ಯ ತತ್ವಗಳಲ್ಲಿ ಒಂದು. ಒಂದು ಮಟ್ಟಕ್ಕೆ ವಿವಿಧ ಅಂಶಗಳು ಮತ್ತು ಸರಕುಗಳು ಒಂದಕ್ಕೆ ಇನ್ನೊಂದು ಪರ್ಯಾಯವಾಗುವ ಸಾಧ್ಯತೆ ಇರುತ್ತದೆ. ಒಬ್ಬ ಬಳಕೆದಾರ, ಒಂದು ಸಂಸ್ಥೆ ಅಥವಾ ಒಂದು ಆರ್ಥಿಕ ವ್ಯವಸ್ಥೆಯು ಇಡಿಯಾಗಿ ಬದಲಾಗುತ್ತಿರುವ ಪರಿಸ್ಥಿತಿಗಳಿಗೆ ಹೇಗೆ ಪ್ರತಿಕ್ರಿಸಬಹುದು ಎಂಬುದನ್ನು ಪರಿಗಣಿಸುವ ಬೌದ್ಧಿಕ ಪ್ರಯೋಗಗಳ ದೃಷ್ಟಿಯಿಂದ ಇದು ಗಮನಾರ್ಹವಾಗಿತ್ತು. ಸೇಬು ಮತ್ತು ಪೇರ್ ಹಣ್ಣು - ಈ ಎರಡನ್ನೂ ತಿಂದು ಖುಷಿಪಡುವಂತಹ ಬಳಕೆದಾರನ ಪ್ರಕರಣವೊಂದನ್ನು ಉದಾಹರಣೆಗೆ

ತೆಗೆದುಕೊಳ್ಳೋಣ. ಬೇರೆ ಎಲ್ಲ ಅಂಶಗಳು ಇದ್ದ ಹಾಗೆಯೇ ಇರುತ್ತವೆ ಎಂದು ಭಾವಿಸಿ, ಸೇಬಿನ ಬೆಲೆಯು ದುಪ್ಪಟ್ಟಾಗುತ್ತದೆ ಎಂದಿಟ್ಟುಕೊಳ್ಳೋಣ. ಇದಕ್ಕೆ ಬಳಕೆದಾರನು ಹೇಗೆ ಪ್ರತಿಕ್ರಿಯಿಸುತ್ತಾನೆ? ಆತ ಅಥವಾ ಆಕೆ ಸೇಬುಗಳನ್ನು ಬಳಕೆಯನ್ನು ಕಡಿಮೆ ಮಾಡಿ ಪೇರ್ ಹಣ್ಣುಗಳ ಬಳಕೆಯನ್ನು ಹೆಚ್ಚಿಸುತ್ತಾರೆ ಮತ್ತು ಆ ಮೂಲಕ ಯಾವ ಸರಕಿನ ಬೆಲೆಯು ಹಾಗೆಯೇ ಉಳಿದಿದೆಯೋ ಅದನ್ನು ಹೋಲಿಕೆಯಲ್ಲಿ ದುಬಾರಿಯಾದದ್ದಕ್ಕೆ ಪರ್ಯಾಯವಾಗಿ ಉಪಯೋಗಿಸುತ್ತಾರೆ. ಒಂದು ಸಮಗ್ರ ದೃಷ್ಟಿಕೋನದಿಂದ ನೋಡಿದಾಗ ಇದು ಹೆಚ್ಚುವರಿ ಪರಿಣಾಮಗಳಿಗೆ ದಾರಿ ಮಾಡಿಕೊಡುತ್ತದೆ: ಕಾರಕಗಳನ್ನು ಸೇಬಿನ ಉತ್ಪಾದನೆಯಿಂದ ತೆಗೆದು, ಪೇರ್ ಹಣ್ಣುಗಳ ಉತ್ಪಾದನೆಯಲ್ಲಿ ತೊಡಗಿಸಬಹುದು. ತನ್ಮೂಲಕ ವಿವಿಧ ಉತ್ಪಾದನಾ ಮಟ್ಟಗಳು ಬದಲಾಗಬಹುದು ಮತ್ತು ಉತ್ಪಾದನೆಗೆ ಸಂಬಂಧಿಸಿದ ಕಾರಕಗಳ ನಿಯೋಜನೆ ಬದಲಾಗಬಹುದು ಹಾಗೂ ಇಂತಹ ಇನ್ನೂ ಹಲವು ಪರಿಣಾಮಗಳಾಗಬಹುದು.

"ಸಾಮಾನ್ಯ ಸಮತೋಲನದ" ಸಿದ್ಧಾಂತವು ಈ ಎಲ್ಲಾ ಪರಿಣಾಮಗಳನ್ನು ಚರ್ಚಿಸುವಲ್ಲಿ ತೊಡಗಿಕೊಳ್ಳುತ್ತದೆ. ಮಾರುಕಟ್ಟೆ ಸಂಕೇತಗಳಿಗೆ ಎಲ್ಲ ಪಾತ್ರಧಾರಿಗಳ (ಉತ್ಪಾದಕರು ಮತ್ತು ಬಳಕೆದಾರರ) ಪ್ರತಿಕ್ರಿಯೆಗಳು ಗೊತ್ತಿರುವಂಥದ್ದೇ ಆಗಿರುತ್ತದೆ ಎಂದು ಈ ಸಿದ್ಧಾಂತವು ಊಹಿಸುತ್ತದೆ: ಅಂದರೆ ಮಾರ್ಗವನ್ನು ಕ್ರಮಿಸುವಾಗ ಆಗಬಹುದಾದ ಯಾವುದೇ ಕಲಿಕೆಯ ಪ್ರಕ್ರಿಯೆಗಳನ್ನು (ಹೀಗೆ ಪ್ರತಿಕ್ರಿಯೆಗಳನ್ನು ಬದಲಿಸಬಹುದು ಮತ್ತು ಅದರೊಂದಿಗೆ ಯಾವ ಸಮತೋಲನದತ್ತ ವ್ಯವಸ್ಥೆಯು ಚಲಿಸಬೇಕಿದೆಯೋ ಅದನ್ನು ಸಹ ಬದಲಿಸಬಹುದು) ಒಂದು ಕಡೆ ಸೇರಿಸಲಾಗುತ್ತದೆ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ ಸಾಮಾನ್ಯ ಸಮತೋಲನದ ಸಿದ್ಧಾಂತಿಗಳು ಪಾತ್ರಧಾರಿಗಳನ್ನು "ತೆರೆದಿಟ್ಟ ಗುಟ್ಟುಗಳು" ಎಂಬಂತೆ ಭಾವಿಸುತ್ತಾರೆ. ಯಾವುದೇ ಬದಲಾವಣೆಯ ಪರಿಣಾಮಗಳ ಬಗ್ಗೆ ಮಾತನಾಡುವಾಗ ಸಾಮಾನ್ಯವಾಗಿ ನಾವು ಕೇವಲ ಪ್ರಾಥಮಿಕ ಪರಿಣಾಮಗಳನ್ನು ಮತ್ತು ಆಗೊಮ್ಮೆ ಈಗೊಮ್ಮೆ ಎರಡನೆಯ ಹಂತದ ಪರಿಣಾಮಗಳನ್ನು ಗಣನೆಗೆ ತೆಗೆದುಕೊಳ್ಳುತ್ತೇವೆ: ಈ ಸಿದ್ಧಾಂತವು ನೇರವಾದ ಮತ್ತು ಪರೋಕ್ಷವಾದ - ಒಟ್ಟಿನಲ್ಲಿ ಎಲ್ಲಾ ಪರಿಣಾಮಗಳನ್ನು ಗಣನೆಗೆ ತೆಗೆದುಕೊಳ್ಳಲು ಇಚ್ಛಿಸುತ್ತದೆ. ಹೀಗಾಗಿ ಇದು ಪಡೆದುಕೊಳ್ಳುವ ಫಲಿತಾಂಶಗಳು ನಿಜಕ್ಕೂ ಮೊದಲ ಸುತ್ತಿನ ಪರಿಣಾಮಗಳ ಮೇಲೆ ಗಮನವನ್ನು ಕೇಂದ್ರೀಕರಿಸುವಾಗ ನಿರೀಕ್ಷಿಸಬಹುದಾದ ಫಲಿತಾಂಶಗಳಿಗಿಂತ ಭಿನ್ನವಾಗಿರುತ್ತವೆ. ವಿಶೇಷವಾಗಿ ಆದಾಯದ ಪರಿಣಾಮಗಳನ್ನು ಸಾಮಾನ್ಯವಾಗಿ ಕಡೆಗಣಿಸಲಾಗುವುದಿಲ್ಲ. ಆದಾಯದ ವಿತರಣೆಯು ಖಂಡಿತವಾಗಿಯೂ ಬದಲಾಗುತ್ತದೆ ಮತ್ತು ಬೇರೆ ಬೇರೆ ಆದಾಯವನ್ನು ಪಡೆದುಕೊಳ್ಳುವವರು ಬೇರೆ ಬೇರೆ ಆಯ್ಕೆಗಳನ್ನು ಹೊಂದಿರುವಾಗ ಬೇಡಿಕೆ ಸಹ ಬದಲಾಗುತ್ತದೆ.

ಉದಾಹರಣೆಗೆ ಸೇಬುಗಳ ಬೆಲೆ ಹೆಚ್ಚಿದ್ದಾಗ ಸೇಬುಗಳ ಉತ್ಪಾದಕರಿಗೆ ಅದರಿಂದ ಲಾಭವಾಗುತ್ತದೆ ಏಕೆಂದರೆ ಪೇರ್ ಹಣ್ಣುಗಳ ಉತ್ಪಾದಕರಿಗೆ ಹೋಲಿಸಿದರೆ ಇವರ ಲಾಭಗಳು ಹೆಚ್ಚಿರುತ್ತವೆ. ಇದರಿಂದಾಗಿ ಅತಿ ಹೆಚ್ಚು ಪ್ರತಿಫಲದ ಹುಡುಕಾಟದ ಕಾರಣದಿಂದಾಗಿ ಬಂಡವಾಳವು ಅತ್ತ ಆಕರ್ಷಿಸಲ್ಪಡುತ್ತದೆ ಮತ್ತು ಇಂತಹ ಇನ್ನೂ ಅನೇಕ ಉದಾಹರಣೆಗಳನ್ನು ಕೊಡಬಹುದು.

ಇಲ್ಲಿರುವ ಮೂಲಭೂತ ಕಲ್ಪನೆಯು ಹೊಸದೇನೂ ಅಲ್ಲ: ವ್ಯವಸ್ಥೆಯನ್ನು ಸಮಗ್ರವಾಗಿ ನೋಡುತ್ತಾ ಸೀಮಾಂತವಾದಿಗಳು ಬೆಲೆಗಳಲ್ಲಿನ ಬದಲಾವಣೆಗಳು ಮತ್ತು ವಿತರಣೆಯ ಏರುಪೇರುಗಳನ್ನು ಹಿಡಿದಿಡುವ ನಿರ್ಬಂಧಗಳನ್ನು ಗೌರವಿಸಬೇಕಾಗುತ್ತದೆ ಎಂದು ಒತ್ತಾಯಿಸಿದರು. ಉದಾಹರಣೆಗೆ ನೈಜ ಕೂಲಿ ದರದ ವೃದ್ಧಿ (ಅಥವಾ ಇಳಿಕೆಯು) ಇತರೆ ವಿತರಣೆಯ ಏರುಪೇರುಗಳು, ಸಾಪೇಕ್ಷ ಬೆಲೆಗಳು ಮತ್ತಿತರ ಅಂಶಗಳ ಮೇಲೆ ಯಾವಾಗಲೂ ಪ್ರಭಾವ ಬೀರುತ್ತದೆ. ಮತ್ತು ಉತ್ಪಾದನೆಯ ಎಲ್ಲಾ ಅಂಶಗಳನ್ನು ಪೂರ್ತಿಯಾಗಿ ತೊಡಗಿಸಿಕೊಂಡಿರುವಂತಹ ಆರ್ಥಿಕತೆಯಲ್ಲಿ ಒಂದು ಸರಕಿನ ಉತ್ಪಾದನೆಯನ್ನು ಹೆಚ್ಚಿಸಿದರೆ ಅದು ಖಂಡಿತವಾಗಿಯೂ ಕಡೆಯ ಪಕ್ಷ ಒಂದಾದರೂ ಸರಕಿನ ಉತ್ಪಾದನೆಯ ಮಟ್ಟವನ್ನು ಕೆಳಗಿಳಿಸುವುದು ಅವಶ್ಯಕವಾಗುವಂತೆ ಮಾಡುತ್ತದೆ.

ರಿಕಾರ್ಡೋ ಅವರಿಗೆ ಅಷ್ಟು ಹೊತ್ತಿಗಾಗಲೇ ಚೆನ್ನಾಗಿ ತಿಳಿದಿದ್ದಂತೆ, ಬಳಕೆಯಲ್ಲಿದ್ದ ನಿರ್ದಿಷ್ಟ ಉತ್ಪಾದನಾ ವ್ಯವಸ್ಥೆಯಲ್ಲಿ ನೈಜ ಕೂಲಿ ದರದ ವೃದ್ಧಿ (ಅಥವಾ ಇಳಿಕೆಯು) ಅನಿವಾರ್ಯವಾಗಿ ಲಾಭದ ದರದ ಕುಗ್ಗುವಿಕೆಗೆ (ವೃದ್ಧಿ) ಕಾರಣವಾಗುತ್ತದೆ.

ಎಂಟನೆಯದಾಗಿ, ಉಳಿದ ಅಂಶಗಳು ಸಮಾನವಾಗಿದ್ದರೆ ಎಂಬ ಪೂರ್ವ ತೀರ್ಮಾನದ (ಸಿಟಿರಿಸ್ ಪಾರಿಬಸ್) ಒಂದು ವಿಶಿಷ್ಟವಾದ ನಿರ್ಬಂಧಿತ ಉಪಯೋಗವು ಸೀಮಾಂತವಾದದಲ್ಲಿ ಮುಖ್ಯವಾಯಿತು: ಕೇವಲ ಒಂದು ಮಾರುಕಟ್ಟೆಯನ್ನು ಪರೀಕ್ಷಿಸಿದ ಪ್ರಕರಣ ಮತ್ತು ಉಳಿದ ಎಲ್ಲಾ ಮಾರುಕಟ್ಟೆಗಳಲ್ಲಿನ ಪರಸ್ಪರಾವಲಂಬನೆಗಳನ್ನು ಒಂದು ಕಡೆ ಇರಿಸಲಾಯಿತು. ಇದು ಆಲ್ಫ್ರೆಡ್ ಮಾರ್ಷಲ್ ಅವರು ಎತ್ತಿ ಹಿಡಿದ ಭಾಗಶಃ ಸಮತೋಲನದ ವಿಧಾನ. ಅದರ ಮುಖ್ಯ ಲಕ್ಷಣವೆಂದರೆ ಅದು ಈಗಾಗಲೇ ಹೆಸರಿಸಿರುವ ವಿಭಿನ್ನ ಪರಿಮಾಣಗಳ ಬಾಧ್ಯಕಾರೀ ಬದಲಾವಣೆಗಳನ್ನು ಉಪೇಕ್ಷಿಸುತ್ತದೆ. ಇಂದಿನ ಅರ್ಥಶಾಸ್ತ್ರದಲ್ಲಿ ಸಹ ಅದಕ್ಕಿರುವ ಪ್ರಾಮುಖ್ಯತೆಯಿಂದಾಗಿ ಅದರ ಸಮಸ್ಯಾತ್ಮಕ ಗುಣದ ಬಗ್ಗೆ ನಮಗಿರಬೇಕಾದ ಗಮನವು ತಪ್ಪಿ ಹೋಗಬಾರದು. ಅತ್ಯಂತ ನಿರ್ಬಂಧಿತ ಪರಿಸ್ಥಿತಿಗಳಲ್ಲಿ ಮಾತ್ರ ಭಾಗಶಃ ಸಮತೋಲನದ ವಿಧಾನವನ್ನು ಅನ್ವಯಿಸುವುದು ಸಾಧ್ಯ ಎಂಬುದು ಮಾರ್ಷಲ್ ಅವರಿಗೆ ತಿಳಿದಿತ್ತು ಮತ್ತು ಅವರು

ಭಾಗಶಃ ವಿಶ್ಲೇಷಣೆಯ ಮೂಲಕ ಪಡೆದುಕೊಂಡ ಪ್ರಸ್ತಾವನೆಗಳನ್ನು ಮತ್ತು ಅದನ್ನು ಆಧರಿಸಿದ ಆರ್ಥಿಕ ನೀತಿ ತೀರ್ಮಾನಗಳನ್ನು ಅತ್ಯಂತ ಎಚ್ಚರಿಕೆಯಿಂದ ನಿರ್ವಹಿಸಬೇಕೆಂದು ಒತ್ತಿ ಹೇಳಿದರು. ಆದರೆ ಅವರು ನೀಡಿದ ಮುನ್ನೆಚ್ಚರಿಕೆಗಳನ್ನು ಹಿಂದೆಯೂ ಮತ್ತು ಇಂದೂ ಸಹ ವೃತ್ತಿಯ ಬಹುತೇಕ ಭಾಗಗಳಲ್ಲಿ ಉಪೇಕ್ಷಿಸಲಾಗುತ್ತಿದೆ. ಆದ್ದರಿಂದಲೇ ಭಾಗಶಃ ಸಮತೋಲನದ ವಿಶ್ಲೇಷಣೆಯಲ್ಲಿ ಸಾಮಾನ್ಯವಾಗಿ ಉಪಯೋಗಿಸುವ ಗ್ರಾಫ್ ಚಿತ್ರವು ಅರ್ಥಶಾಸ್ತ್ರದ ನಾಮಫಲಕ(ಬ್ಯಾಡ್ಜ್)ವನ್ನೇ ಪ್ರತಿನಿಧಿಸುವಂತಾಗಿರುವುದು ವಿಷಾದದ ಸಂಗತಿ: ಸರಬರಾಜು ಮತ್ತು ಬೇಡಿಕೆಯ ತಿರುವು(ಕರ್ವ್)ಗಳು ಒಂದನ್ನೊಂದು ಹಾದು ಹೋಗುವ ಆ ಬಿಂದುವನ್ನು ಮಾರ್ಷಲ್‌ರವರ ಶಿಲುಬೆ(ಕ್ರಾಸ್) ಎಂದು ಕರೆಯುತ್ತಾರೆ. ಇದರಲ್ಲಿರುವ ಸಮಸ್ಯೆ ಏನು ಎಂಬುದನ್ನು ನಾವು ನಂತರ ಪರಿಶೀಲಿಸೋಣ.

ಸೀಮಾಂತವಾದಿ ಸಿದ್ಧಾಂತದಲ್ಲಿ ಬಹಳಷ್ಟು ಕರ್ತವ್ಯ ಭಾರವನ್ನು ಹೊರುವುದು ಪರಿಪೂರ್ಣ ಸ್ಪರ್ಧೆಯ ವಿಚಾರ: ಅನೇಕ (ವಿಪರೀತಾರ್ಥದಲ್ಲಿ - ಅನಂತವೆಂಬಷ್ಟು ಹಲವಾರು) ಸಂಪೂರ್ಣವಾಗಿ ತಿಳುವಳಿಕೆಯುಳ್ಳ ಸರಬರಾಜದಾರರು, ಅನೇಕ (ವಿಪರೀತಾರ್ಥದಲ್ಲಿ - ಅನಂತ ಎಂಬಷ್ಟು ಹಲವಾರು) ಪೂರ್ತಿಯಾಗಿ ಮಾಹಿತಿಯುಳ್ಳ ಬೇಡಿಕೆದಾರರಿಗೆ ಎದುರಾಗುತ್ತಾರೆ. ಪಾತ್ರಧಾರಿಗಳಲ್ಲಿ ಯಾರೂ ಸಹ ಆರ್ಥಿಕ ಶಕ್ತಿಯನ್ನು ಹೊಂದಿರುವುದಿಲ್ಲ. ಆದರೆ ಪ್ರತಿಯೊಂದು ವಾಸ್ತವ ಸಮಾಜವು ಶಕ್ತಿ ಮತ್ತು ಮಾಹಿತಿಗೆ ಸಂಬಂಧಿಸಿದ ಅಸಮಾನತೆಗಳಿಂದ ವ್ಯಾಪ್ತವಾಗಿರುತ್ತದೆ; ಈ ಸಂಗತಿಯನ್ನು ಆಡಂ ಸ್ಮಿತ್ ಮತ್ತು ಇತರರು ಎತ್ತಿ ತೋರಿಸಿದರು.

ವಾಸ್ತವತೆ ಹೀಗಿರುವಾಗ "ಸೀಮಾಂತವಾದಿ ಕ್ರಾಂತಿ"ಯ ಕುರಿತು ಮಾತನಾಡುವುದು ಸೂಕ್ತವೇ? ಹೌದು ಮತ್ತು ಇಲ್ಲ. ಇಲ್ಲ ಎನ್ನುವುದು ಏಕೆಂದರೆ ಸೀಮಾಂತ ಉತ್ಪಾದಕತೆ ಮತ್ತು ಸೀಮಾಂತ ಬಳಕೆ ಎಂಬ ಕಲ್ಪನೆಗಳು ಬಹಳ ಕಾಲದಿಂದಲೂ ತಿಳಿದಿತ್ತು. ಹೌದು ಎನ್ನುವುದೂ ಸಾಧ್ಯ. ಏಕೆಂದರೆ; ಎಲ್ಲಾ ಪ್ರತಿಫಲಗಳ ದರಗಳನ್ನು (ಕೂಲಿಯ ದರ, ಲಾಭದ ದರ, ಜಮೀನಿನ ಬಾಡಿಗೆ ದರ) ಒಂದೇ ಒಂದು ತತ್ವದ ಮೂಲಕ, ಅಂದರೆ ಅನುಕ್ರಮವಾಗಿ ಪ್ರತಿಯೊಂದು ಅಂಶಕ್ಕೆ (ಶ್ರಮ, ಬಂಡವಾಳ, ಜಮೀನು ಇವುಗಳಿಗೆ) ಸಂಬಂಧಪಟ್ಟಂತೆ ಸೀಮಾಂತ ಉತ್ಪಾದಕತೆಯ ತತ್ವದ ಮೂಲಕ ವಿವರಿಸಲು ಆದಾಯ ವಿತರಣೆಯ ಒಂದು ಸಂಪೂರ್ಣ ಹೊಸದಾದ ವಿವರಣೆಯನ್ನು ಮುಂದಿಡಲಾಗಿತ್ತು. ಪರಿಗಣನೆಯಲ್ಲಿರುವ ವಿವರಣೆಯು ಎಲ್ಲಾ ಆದಾಯಗಳನ್ನು ಸಹ ಆಯಾ ಅಂಶ ಸೇವೆಗಳ ಸಾಪೇಕ್ಷ ಅಭಾವದ ಸೂಚಕಗಳೆಂದು ಕಲ್ಪಿಸಿಕೊಂಡಿತ್ತು. ಎಲ್ಲಾ ಅಂಶಗಳನ್ನು ಪೂರ್ತಿಯಾಗಿ ತೊಡಗಿಸಿಕೊಳ್ಳಲಾಗಿತ್ತು ಎಂಬುದಾಗಿ ಇದು ಪೂರ್ವನಿಶ್ಚಯ ಮಾಡಿಕೊಂಡಿರುತ್ತದೆ. ಸೀಮಾಂತ ಉತ್ಪಾದಕತೆ ಸಿದ್ಧಾಂತ ಮತ್ತು ಸೇ ಅವರ ನಿಯಮ ಇವುಗಳು

ಬೇರ್ಪಡಿಸಲಾಗದ ಏಕ ದೇಹದ ಅವಳಿ ಮಕ್ಕಳಂತೆ. ಇದಕ್ಕೆ ವಿರುದ್ಧವಾಗಿ ಶಾಸ್ತ್ರೀಯ ಸಿದ್ಧಾಂತದಲ್ಲಿ ಕೇವಲ ಜಮೀನು ಬಾಡಿಗೆಯನ್ನು ಒಂದು ವಿಶಿಷ್ಟ ಗುಣದ ಜಮೀನಿನ ಅಭಾವವನ್ನು ಪ್ರತಿಫಲಿಸುವಂಥದ್ದು ಎಂದು ಭಾವಿಸಲಾಗಿರುತ್ತದೆ ಮತ್ತು ಅದೇ ಸಮಯದಲ್ಲಿ ಲಾಭವನ್ನು ಮಿಗುತಾಯ ಸಿದ್ಧಾಂತದ ಮೂಲಕ ವಿವರಿಸಲಾಗುತ್ತದೆ. ಜಮೀನಿನಂತಲ್ಲದೆ ಬಂಡವಾಳ ಸರಕುಗಳನ್ನು ಉತ್ಪಾದಿಸಬಹುದು ಮತ್ತು ಪುನರುತ್ಪಾದಿಸಬಹುದು ಮತ್ತು ಹೀಗಾಗಿ ಅವು ಅಭಾವದ ಪರಿಸ್ಥಿತಿಯಲ್ಲಿರುವುದು ಕೇವಲ ಅಲ್ಪಾವಧಿಯಲ್ಲಿ ಅಷ್ಟೇ.

**ಹರಿಕಾರರು ಥ್ಯೂನೆನ್, ಕೂರ್ನಾಟ್ ಮತ್ತು ರೌ**

ಜರ್ಮನಿಯ ಅರ್ಥಶಾಸ್ತ್ರಜ್ಞರಾದ ಜೋಹಾನ್ ಹೈನ್ರಿಚ್ ವಾನ್ ಥ್ಯೂನೆನ್ ಎನ್ನುವರು 'ದಿ ಐಸಲೇಟೆಡ್ ಸ್ಟೇಟ್' ಎಂಬ ಪುಸ್ತಕವನ್ನು ಬರೆದರು. 1850ರಲ್ಲಿ ಪ್ರಕಟವಾದ ಮೂರು ಸಂಪುಟಗಳ ಆ ಪುಸ್ತಕದ ಎರಡನೆಯ ಸಂಪುಟದಲ್ಲಿ ಅವರು ಸೀಮಾಂತ ಉತ್ಪಾದಕತೆಯ ಪರಿಕಲ್ಪನೆಯನ್ನು ಮೊದಲು ಪ್ರತಿಪಾದಿಸಿದರು. ಅವರು ಈ ಪರಿಕಲ್ಪನೆಯನ್ನು ಸ್ವಾನುಭವದ ಮೂಲಕ ತಮ್ಮದೇ ಜಮೀನಿನಲ್ಲಿ ಪರೀಕ್ಷಿಸಲು ಪ್ರಯತ್ನಿಸಿದರು. ಅಕ್ಕಪಕ್ಕದಲ್ಲಿರುವ ಜಮೀನಿನ ಭಾಗಗಳನ್ನು ವಿಭಿನ್ನ ತೀವ್ರತೆಗಳಲ್ಲಿ ಕೃಷಿಗೆ ಒಳಪಡಿಸಿದರು. ಅಂದರೆ ಪ್ರತಿಯೊಂದು ಹೆಕ್ಟೇರ್‌ಗೆ ಅವರು ಹಾಕಿದ ಶ್ರಮ ಬೇರೆ ಬೇರೆ. ನಂತರ ಅವರು ಅದರ ಫಲಿತಾಂಶಗಳನ್ನು ಹೋಲಿಸಿದರು. ಥ್ಯೂನೆನ್ ಅವರು ತಾವು ಪ್ರತಿಪಾದಿಸಿದ 'ಸಹಜ ಕೂಲಿ'ಯ ಸೂತ್ರದ ಬಗ್ಗೆ ಪ್ರಸಿದ್ಧರಾಗಿದ್ದಾರೆ. Vap ಎಂಬ ಸೂತ್ರವನ್ನು ಅವರ ಸಮಾಧಿಯ ಕಲ್ಲಿನ ಮೇಲೆ ಕೊರೆಯಲಾಗಿದೆ. ಇದರಲ್ಲಿ ಎ ಅಂದರೆ ಜೀವನಾವಶ್ಯಕ ಕೂಲಿ ಮತ್ತು ಪಿ ಅಂದರೆ ಶ್ರಮದ ಉತ್ಪಾದಕತೆ. 1826ರಲ್ಲಿ ಪ್ರಕಟವಾದ ಅವರ ಗ್ರಂಥದ ಮೊದಲನೆಯ ಸಂಪುಟದ ಹೊತ್ತಿಗೆ ಅವರು ಯಾವುದೇ ಒಂದು ವ್ಯವಹಾರದಲ್ಲಿ ಲಾಭವನ್ನು ಗರಿಷ್ಠ ಮಟ್ಟಕ್ಕೆ ಏರಿಸುವುದಕ್ಕೆ ಒಂದು ಸಾಮಾನ್ಯ ಸ್ಥಿತಿ ಇರುತ್ತದೆ ಎಂಬ ಅಂಶವನ್ನು ಸ್ಥಾಪಿಸಿದ್ದರು: ಮಾರುಕಟ್ಟೆಗೆ ತರಲಾದ ಯಾವುದೇ ಸರಕಿನ ಪರಿಮಾಣಕ್ಕೆ ಸಂಬಂಧಿಸಿದಂತೆ ಸೀಮಾಂತ ವೆಚ್ಚಗಳು (ಅಂದರೆ ಉತ್ಪಾದಿತವಾದ ಕೊನೆಯ ಘಟಕದ ವೆಚ್ಚಗಳು) ಸೀಮಾಂತ ಆದಾಯಕ್ಕೆ (ಅಂದರೆ ಆ ಘಟಕವನ್ನು ಮಾರಾಟ ಮಾಡುವುದರಿಂದಾಗುವ ಆದಾಯದ ಹೆಚ್ಚಳ) ಸಮನಾಗಬೇಕು. (ಸ್ಥಾನಿಕ ಅರ್ಥಶಾಸ್ತ್ರಕ್ಕೆ ಥ್ಯೂನೆನ್ ಅವರು ನೀಡಿರುವ ಮಾರ್ಗದರ್ಶಕ ಕಾಣಿಕೆಗಳ ಕುರಿತು ಅಧ್ಯಾಯ 12 ಅನ್ನು ನೋಡಿ.)

ಒಂದು ಸರಕಿನ ಬೆಲೆಗೆ ಅನುಗುಣವಾಗಿ ಬೇಡಿಕೆಯ ಅವಲಂಬನೆ ಇರುತ್ತದೆ ಎಂಬುದನ್ನು ಅಭಿವ್ಯಕ್ತಿಸುವ ಸರಕಿನ ಕುರಿತಾದ ಬೇಡಿಕೆಯ ತಿರುವಿನ (curve) ಪರಿಕಲ್ಪನೆಯನ್ನು ಮೊದಲಿಗೆ ಫ್ರೆಂಚ್ ಗಣಿತಶಾಸ್ತ್ರಜ್ಞರಾದ ಆಂಟೊಇನ್ ಆಗಸ್ಟಿನ್ ಕೂರ್ನಾಟ್ (1801-1877) ಅವರು 1838ರಲ್ಲಿ ಮುಂದಿಟ್ಟರು. ಮತ್ತು ಕೆಲವೇ ಕಾಲದ ನಂತರ ಇದೇ ಪ್ರತಿಪಾದನೆಯನ್ನು ಜರ್ಮನಿಯವರಾದ ಕಾರ್ಲ್ ಹೈನ್ರಿಚ್ ರೌ (1792-1870) ಅವರು ಸ್ವತಂತ್ರವಾಗಿ ಮಂಡಿಸಿದರು. ಪದಶಃವಾಗಿ ಅಲ್ಲದಿದ್ದರೂ ಸಾರಾಂಶದಲ್ಲಿ ರೌ ಅವರು ಸೀಮಾಂತ ಉಪಯುಕ್ತತೆಯ ಪರಿಕಲ್ಪನೆಯನ್ನು ಮೊಟ್ಟಮೊದಲು ಪ್ರತಿಪಾದಿಸಿದರು ಎಂದು ಸಹ ಹೇಳಬಹುದೇನೋ. ಏಕಸ್ವಾಮ್ಯದ ಪ್ರಕರಣವನ್ನು ಗಮನಿಸಿದ್ದಕ್ಕಾಗಿ ಮತ್ತು ಈ ಮೊದಲು ಹೇಳಿದಂತೆ ಲಾಭದ ಗರಿಷ್ಠೀಕರಣದ ಸ್ಥಿತಿಯನ್ನು ಪುಷ್ಟೀಕರಿಸಿದ್ದಕ್ಕಾಗಿ (ಸೀಮಾಂತ ಆದಾಯ = ಸೀಮಾಂತ ವೆಚ್ಚ) ನಾವು ಕೂರ್ನಾಟ್ ಅವರಿಗೆ ಕೀರ್ತಿಯನ್ನು ಸಲ್ಲಿಸಲೇಬೇಕು.

**ಹರಿಕಾರ: ಹರ್ಮನ್ ಹೈನ್ರಿಚ್ ಗೊಸ್ಸೆನ್**

ಗೊಸ್ಸೆನ್ ಅವರು ಪ್ರಕಟಿಸಿದ್ದು ಕೇವಲ ಒಂದೇ ಒಂದು ಕೃತಿಯನ್ನು; ಅದೆಂದರೆ 'ದಿ ಲಾಸ್ ಆಫ್ ಹ್ಯೂಮನ್ ರಿಲೇಶನ್ಸ್ ಅಂಡ್ ದಿ ರೂಲ್ಸ್ ಆಫ್ ಹ್ಯೂಮನ್ ಆಕ್ಷನ್ ಡಿರೈವ್ಡ್ ದೇರ್‌ಫ್ರಮ್' (1854). ಅದು ಸುಮಾರು ಕಾಲು ಶತಮಾನದವರೆಗೂ ಯಾರ ಕಣ್ಣಿಗೂ ಬೀಳಲೇ ಇಲ್ಲ. ಆದರೂ ಸಹ ಇದರಲ್ಲಿ ಆತನ ಕಾಲವನ್ನು ಮೀರಿದಂತಹ ರೌ ಅವರಿಂದ ಪ್ರೇರಣೆ ಪಡೆದ 'ಸೀಮಾಂತ ಉಪಯುಕ್ತತಾ ಸಿದ್ಧಾಂತ'ದ ಸಂರಚನೆ ಇತ್ತು. ಹೀಗಾಗಿ ಈ ಸಿದ್ಧಾಂತದ ಹರಿಕಾರರಲ್ಲಿ ಗೊಸ್ಸೆನ್ ಸಹ ಒಬ್ಬರು ಎಂದು ಸರಿಯಾಗಿಯೇ ಗುರುತಿಸಲಾಗಿದೆ.

ಸೃಷ್ಟಿಕರ್ತನು ಯಾವುದು ಮಾನವ ಜೀವನದ ನಿಜವಾದ ಉದ್ದೇಶ ಎಂದು ಸಂಕಲ್ಪ ಮಾಡಿದ್ದನೋ ಅದನ್ನು ತಾನು ತಿಳಿಯಪಡಿಸುತ್ತಿದ್ದೇನೆ ಎಂದು ಗೊಸ್ಸೆನ್ ನಂಬಿದ್ದರು ಮತ್ತು ತಾವು ಅರ್ಥಶಾಸ್ತ್ರದ ಮಟ್ಟಿಗೆ ಒಬ್ಬ ಕೊಪರ್ನಿಕಸ್ ಅಥವಾ ನ್ಯೂಟನ್ ಎಂದು ಭಾವಿಸಿಕೊಂಡಿದ್ದರು. ಗೊಸ್ಸೆನ್ ಅವರ ಪ್ರಕಾರ ಸೃಷ್ಟಿಕರ್ತನು ಗಣಿತದಲ್ಲಿ ತೊಡಗಿರುವುದರಿಂದ ಸೃಷ್ಟಿಯ ಯೋಜನೆಯನ್ನು ಅರ್ಥೈಸಿಕೊಳ್ಳಬೇಕೆಂದರೆ ಗಣಿತವು ಸಹ ಅಗತ್ಯ. ಕ್ರಿಶ್ಚಿಯನ್ ಧರ್ಮದ ಚರ್ಚ್‌ಗಳು ಪ್ರೋತ್ಸಾಹಿಸುವ ಆನಂದವನ್ನು ಖಂಡಿಸುವ ವಿರಕ್ತಿಯು ಒಂದು ತಪ್ಪು ತಿಳುವಳಿಕೆಯನ್ನು ಆಧರಿಸಿದೆ ಎಂದು ಗೊಸ್ಸೆನ್

ಒತ್ತಿ ಹೇಳಿದರು. ಮನುಷ್ಯನ ಪಾಲಿಗೆ ವಿಧಿಸಲ್ಪಟ್ಟಿರುವುದು ನಿಗ್ರಹವಲ್ಲ, ಬದಲಿಗೆ ಬದುಕಿನ ಒಟ್ಟು ಆನಂದವನ್ನು ಹೆಚ್ಚಿಸಿಕೊಳ್ಳುವುದು, ಅಂದರೆ ವ್ಯಭಿಚಾರವಲ್ಲದ ಭೋಗವಾದ (hedoism).

ಗೊಸ್ಸೆನ್ ಅವರು ತಮ್ಮ ವಾದಕ್ಕೆ ಎರಡು ಆಧಾರವಾಕ್ಯಗಳನ್ನು ಅವಲಂಬಿಸಿದ್ದರು. ಮೊದಲನೆಯದೆಂದರೆ: "ನಾವು ಅದೇ ಸಂತೋಷವನ್ನು ಮತ್ತೆ ಮತ್ತೆ ಅನುಭವಿಸಿದಾಗ ಮತ್ತು ಅದೇ ಸಂತೋಷವನ್ನು ನಾವು ಯಾವುದೇ ಅಡಚಣೆಯಿಲ್ಲದೆ, ತೃಪ್ತಿಯಾಗುವವರೆಗೂ ಮುಂದುವರೆಸಿದಲ್ಲಿ, ಆನಂದದ ಪ್ರಮಾಣವು (ತೀವ್ರತೆಯು), ಸತತವಾಗಿ ಕಡಿಮೆಯಾಗುತ್ತಾ ಹೋಗುತ್ತದೆ." ಸೀಮಾಂತ ಉಪಯುಕ್ತತೆಯ ಕ್ಷೀಣಿಸುವಿಕೆಯ ಈ ತಥ್ಯಾತ್ಮಕ ಸಮರ್ಥನೆಯನ್ನೇ ಗೊಸ್ಸೆನ್ ಅವರ ಮೊದಲನೆಯ ನಿಯಮ ಎಂದು ಕರೆಯುತ್ತಾರೆ. ಎರಡನೆಯದು ಹೀಗಿದೆ: "ತನ್ನ ಸಂಪೂರ್ಣ ಆನಂದವನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸಿಕೊಳ್ಳಲು ವ್ಯಕ್ತಿಯೊಬ್ಬನು ಅನೇಕ ಆನಂದಗಳ ಮಧ್ಯೆ ಆಯ್ಕೆಮಾಡಿಕೊಳ್ಳಲು ಸ್ವತಂತ್ರನಾಗಿದ್ದಾನೆ. ಆದರೆ ಆತನ ಸಮಯವು ಎಲ್ಲ ಆನಂದಗಳನ್ನು ತೃಪ್ತಿಪಡಿಸಿಕೊಳ್ಳಲು ಸಾಕಾಗದಿದ್ದಲ್ಲಿ, ಎಲ್ಲಾ ಸಂತೋಷಗಳನ್ನು ಆಂಶಿಕ ರೂಪದಲ್ಲಿ ಯಾವ ರೀತಿಯಲ್ಲಿ ಅನುಭವಿಸಬೇಕೆಂದರೆ, ಯಾವುದೇ ಒಂದು ಆನಂದದ ಪ್ರಮಾಣವು (ತೀವ್ರತೆಯು), ಆತನು ಅದನ್ನು ಅನುಭವಿಸುವುದನ್ನು ನಿಲ್ಲಿಸಿದಾಗ ಎಲ್ಲಾ ಆನಂದಗಳಿಗೆ ಸಮನಾಗಿರಬೇಕು." ಈ ಪ್ರತಿಪಾದನೆಯನ್ನು ಗೊಸ್ಸೆನ್ ಅವರ ಎರಡನೆಯ ನಿಯಮ ಎಂದು ಕರೆಯಲಾಗುತ್ತದೆ.

ಗೊಸ್ಸನ್ ಅವರ ಪ್ರತಿಪಾದನೆಗಳನ್ನು ಕುರಿತಾದ ಅನೇಕ ವಿವರಣೆಗಳು ಪರಿಮಿತವಾದ ಸಮಯವನ್ನು ಪರ್ಯಾಯ ಚಟುವಟಿಕೆಗಳಲ್ಲಿ ವಿನಿಯೋಗಿಸಬೇಕು ಎಂಬುದರ ಬಗ್ಗೆ ಆತ ನೀಡಿದ ಒತ್ತನ್ನು ಕಡೆಗಣಿಸುತ್ತವೆ. ಉದಾಹರಣೆಯೊಂದು ಇದನ್ನು ಚೆನ್ನಾಗಿ ವಿವರಿಸಬಹುದು. ಮೊದಲಿಗೆ 24 ಗಂಟೆಗಳು ಇರುವ ದಿನವೊಂದರಲ್ಲಿ 12 ಗಂಟೆಗಳನ್ನು ನಿದ್ರೆಗೆ ಮತ್ತು ವ್ಯಕ್ತಿಗತ ಸ್ವಚ್ಛತೆಗೆ ವಿನಯೋಗಿಸಲಾಗುತ್ತದೆ ಎಂದು ಭಾವಿಸೋಣ. ವಿಷಯವನ್ನು ಸರಳವಾಗಿ ಅರ್ಥಮಾಡಿಕೊಳ್ಳಲು ಉಳಿದ 12 ಗಂಟೆಗಳಲ್ಲಿ ಕೇವಲ ಎರಡೇ ರೀತಿಯ ಸಂತೋಷಗಳು ಲಭ್ಯವಿದ್ದು (ತರ್ಕದ ನಿಟ್ಟಿನಲ್ಲಿ), ಅವೆರಡೂ ಏಕಕಾಲದಲ್ಲಿ ಆಗುವುದಿಲ್ಲ ಎಂದುಕೊಳ್ಳೋಣ: ಚಲನಚಿತ್ರವನ್ನು ನೋಡುವುದು ಮತ್ತು ತಿನಿಸನ್ನು ತಿನ್ನುವುದು. ಚಲನಚಿತ್ರವನ್ನು ನೋಡಲು ಎರಡು ತಾಸು ಬೇಕಾದರೆ ಆ ತಿನಿಸಿನ ಒಂದು ಭಾಗವನ್ನು ತಿನ್ನಲು ಅರ್ಧ ಗಂಟೆ ಬೇಕಾಗಬಹುದು. ಅಯಾನ್ ಸ್ಟೀಡ್ಮನ್ ಅವರು ಹೇಳುವಂತೆ ಯಾವುದೇ ಸರಕನ್ನು ಬಳಸುವುದಕ್ಕೂ ಸಮಯ ಬೇಕಾಗುತ್ತದೆ! ಹೀಗಾಗಿ ನಮ್ಮ ಉದಾಹರಣೆಯಲ್ಲಿರುವ ವ್ಯಕ್ತಿಯು ಆ 12 ಗಂಟೆಗಳಲ್ಲಿ 6 ಚಲನಚಿತ್ರಗಳನ್ನು ನೋಡಬಹುದು ಅಥವಾ 24 ತಿನಿಸುಗಳನ್ನು ತಿನ್ನಬಹುದು ಅಥವಾ ಈ ಎರಡು ಆನಂದಗಳ ಸಂಯೋಜನೆಯನ್ನು

ವ್ಯವಸ್ಥೆಗೊಳಿಸಬಹುದು. ಹೀಗಾಗಿ ನಾವು ಅನುಸರಿಸಬೇಕಾದ ಸೂತ್ರದ ಅರ್ಥ ಈಗ ಏನಾಗುತ್ತದೆ ಎಂದರೆ ಎರಡು ವಿಷಯಗಳ ಉಪಯೋಗದ ಹೆಚ್ಚಳವು (ಅದನ್ನು ನಿಲ್ಲಿಸುವ ಕೊನೆಯ ಕ್ಷಣದಲ್ಲಿ) ನಿಖರವಾಗಿ ಒಂದೇ ಪ್ರಮಾಣವನ್ನು ಮುಟ್ಟಿದ ತಕ್ಷಣದಲ್ಲಿ ನೀವು ನಿಮ್ಮ ಚಟುವಟಿಕೆಗಳನ್ನು ನಿಲ್ಲಿಸಬೇಕು. ವ್ಯಕ್ತಿಯು ತಿನಿಸಿನ ಎಷ್ಟು ಭಾಗವನ್ನು ಅನುಕೂಲಕರವಾಗಿ ತಿನ್ನಬಹುದು ಹಾಗೂ ಆತ ಅಥವಾ ಆಕೆ ಎಷ್ಟು ಸಿನಿಮಾಗಳನ್ನು ಅನುಕೂಲಕರವಾಗಿ ನೋಡಬಹುದು ಎಂಬುದು ಆಯಾ ವ್ಯಕ್ತಿಯ ಆಯ್ಕೆಗಳ ಮೇಲೆ ಅವಲಂಬಿತವಾಗಿರುತ್ತದೆ ಎಂಬುದು ನಿಜ; ಬೇರೆ ಬೇರೆ ವ್ಯಕ್ತಿಗಳು ಬೇರೆ ಬೇರೆ ಬಳಕೆಯ ಅನುಕೂಲತೆಯನ್ನು ಪ್ರದರ್ಶಿಸಬಹುದು. ಹಾಲು ಮತ್ತು ಜೇನು ಸಮೃದ್ಧವಾಗಿರುವಂತಹ ಪ್ರದೇಶದಲ್ಲಿ ಸಹ ಅವುಗಳನ್ನು ಬಳಸಲು ಸಮಯ ಖರ್ಚಾಗುವುದರಿಂದ ಸದಾ ಬಳಕೆಯನ್ನು ಅತ್ಯುತ್ತಮಗೊಳಿಸುವಿಕೆಯ ಸಮಸ್ಯೆಯಿದ್ದು, ಪರಿಹಾರವನ್ನು ಬೇಡುತ್ತದೆ.

ಎಲ್ಲ ಮನುಷ್ಯರಿಗೂ ಸಮಯದ ಮಿತಿ ಇರುತ್ತದೆ ಮತ್ತು ಅನೇಕರಿಗೆ ಆದಾಯದ ಮಿತಿ ಸಹ ಇರುತ್ತದೆ. ಆನಂದದ ಕುರಿತಾದ ಸಂಶೋಧನೆಯ ಒಂದು ಕಾಣ್ಕೆ(finding)ಯನ್ನು ವಿವರಿಸುವಲ್ಲಿ ಗೊಸ್ಸನ್ ಅವರ ವಾದವು ನೆರವಾಗುತ್ತದೆ: ಕುಟುಂಬವೊಂದರ ಆದಾಯವು ಹೆಚ್ಚುತ್ತಿದ್ದಂತೆ ಆನಂದವು ಹೆಚ್ಚಾಗುತ್ತಿದೆ ಎಂಬ ಅನುಭವ ಮನಸ್ಸಿಗೆ ಆಗುತ್ತದೆ; ಆದರೆ ಅದು ಒಂದು ಮಿತಿಯವರೆಗೂ ಅಷ್ಟೇ. ಆ ನಂತರ ಆನಂದವು ನಿಂತಲ್ಲೇ ನಿಂತುಬಿಡುತ್ತದೆ. ಹೆಚ್ಚುತ್ತಲೇ ಇರುವ ಆದಾಯಗಳು ಜನರಿಗೆ ಹೆಚ್ಚು ಆನಂದವನ್ನೇನೂ ನೀಡುವುದಿಲ್ಲ. ಸರಕುಗಳನ್ನು ಹೆಚ್ಚು ಹೆಚ್ಚು ಕೊಳ್ಳಲು ಸಾಧ್ಯವಾಗಬಹುದು, ಆದರೆ ಅದನ್ನು ಅನುಭವಿಸಿ ಸಂತೋಷಪಡಲು ಸಮಯ ಸಾಕಾಗುವುದಿಲ್ಲ.

ಗೊಸ್ಸೆನ್ ಅವರ ಪ್ರಕಾರ ವ್ಯಕ್ತಿಗತ ಅಹಂ ಎಂಬುದು ಸಮಾಜದ ಕಲ್ಯಾಣದೊಂದಿಗೆ ಹೇಗೆ ಸಂಬಂಧಪಟ್ಟಿರುತ್ತದೆ? ಆತ ಒಂದು ಮುಗ್ಧ ಆಶಾವಾದವನ್ನು ಹೊಂದಿದ್ದಾರೆ: ಅವರ ಪ್ರಕಾರ ಸಮಯದ ಮಿತಿಯಿಂದಾಗಿ ನಾವು ಬಳಕೆಗೆ ಒಡ್ಡುವ ತಡೆಯೇ, ದುರಾಸೆ ಹಾಗೂ ಇನ್ನೂ ಬೇಕು ಎನಿಸುವ ಮನೋಭಾವಕ್ಕೆ ಕಡಿವಾಣ ಹಾಕುತ್ತದೆ. ಶ್ರಮ ವಿಭಜನೆಯಿಂದಾದ ಉತ್ಪಾದಕತೆಯ ಹೆಚ್ಚಳದ ಪರಿಣಾಮಗಳು ಮತ್ತು ಸ್ಮಿತ್ ಅವರು ಹೇಳುವ ವ್ಯಾಪಾರದಿಂದ ಆಗುವ ಲಾಭಗಳು ಇವೆರಡೂ ಸಹ ಜನರು ಪರಸ್ಪರ ಸಹಕರಿಸುವಂತೆ ಮತ್ತು ಪರಸ್ಪರ ಅವಲಂಬಿತರಾಗುವಂತೆ ಮಾಡುತ್ತವೆ. ಇವೆರಡರ ಕಾರಣದಿಂದಾಗಿ ಪ್ರತಿಯೊಬ್ಬ ವ್ಯಕ್ತಿಯೂ ಸಹ ತನ್ನ ವೈಯಕ್ತಿಕ ಕಲ್ಯಾಣವನ್ನು ಅರಸುತ್ತಲೇ, ಅದೇ ಸಮಯದಲ್ಲಿ ಇಡಿಯ ಮಾನವ ಕುಲದ ಕಲ್ಯಾಣಕ್ಕೆ ತನ್ನ ಕೊಡುಗೆಯನ್ನ ಕೊಡುತ್ತಿರುತ್ತಾನೆ. ಸರ್ವಶಕ್ತನೂ, ಎಲ್ಲರ

ಬಗ್ಗೆಯೂ ದಯೆಯುಳ್ಳವನೂ ಆದ ಮೇಲಿರುವಾತನು ಈ ಜಗತ್ತನ್ನು ಹಾಗೂ ಅದರಲ್ಲಿರುವ ಜೀವಿಗಳನ್ನು ಯಾವ ರೀತಿ ಸೃಷ್ಟಿಸಿದ್ದಾನೆ ಎಂದರೆ, "ಅದನ್ನು ಪರಿಪೂರ್ಣ ಸ್ವರ್ಗವನ್ನಾಗಿ ಮಾಡಲು ಈ ಜಗತ್ತಿನಲ್ಲಿ ಇನ್ನೇನು ಬೇಕಿಲ್ಲ."

ಗೊಸ್ಸೆನ್ ಅವರ ಸಂತೋಷದ ಆಶಾವಾದಿ ಚಿಂತನೆಗಳು ಕಮರಿ ಹೋದವು. ಆತನ ಜೀವಿತ ಕಾಲದಲ್ಲಿ ಆತನ ಪುಸ್ತಕದ ಕೇವಲ ಹತ್ತು ಪ್ರತಿಗಳು ಮಾರಾಟವಾದವು. ಭೋಗ ವಾದದ ಈ ಪ್ರವಾದಿಯು ಸಾಕಷ್ಟು ಚಿಕ್ಕವಯಸ್ಸಿನಲ್ಲಿಯೇ ತೀರಿಕೊಂಡಾಗ ಆತನಲ್ಲಿ ಕಹಿ ತುಂಬಿತ್ತು.

ವಿಲಿಯಂ ಸ್ಟ್ಯಾನ್ಲೇ ಜೆವಾನ್ಸ್

ಜೆವಾನ್ಸ್ ಅವರು ತಮ್ಮ ಕೋಲ್ ಕ್ವೆಸ್ಚನ್ (1865) ಎಂಬ ಪುಸ್ತಕದ ಮೂಲಕ ಗಣನೀಯವಾಗಿ ಎಲ್ಲರ ಗಮನ ಸೆಳೆದರು. ಅದರಲ್ಲಿ ಅವರು ಇಂಗ್ಲೆಂಡ್ ದೇಶದ ಮುಂದಿನ ಅಭಿವೃದ್ಧಿಯ ಬಗ್ಗೆ ನಿರಾಶಾದಾಯಕ ಚಿತ್ರಣವನ್ನು ಬರೆದಿದ್ದರು. ಅವರ ಪ್ರಕಾರ ಕಲ್ಲಿದ್ದಲಿನ ನಿಕ್ಷೇಪಗಳನ್ನು ದೋಚುವಿಕೆಯು, ಮಾಲ್ತಸ್ ಅವರಂತೆಯೇ ಜಗತ್ತಿನ ಕುರಿತಾದ ನಿರಾಶಾವಾದಿ ದೃಷ್ಟಿಕೋನವನ್ನು ಬಿಂಬಿಸುತ್ತಿತ್ತು. ಆದರೂ ಸಹ ಮಾಲ್ತಸ್ ಅವರಲ್ಲಿ ಎಂದಿಗೂ ಮುಗಿಯದ ಸಂಪನ್ಮೂಲದ (ಭೂಮಿ) ಅಭಾವ ಎಂಬ ಪೂರ್ವ ತೀರ್ಮಾನವಿದ್ದು, ಅದರಿಂದಾಗಿ ಜನಗಳಿಗೆ ತೊಂದರೆಯಾಗುತ್ತದೆ ಎಂಬ ಪ್ರತಿಪಾದನೆ ಇದ್ದರೆ, ಇಲ್ಲಿ ಇದ್ದದ್ದು ಮುಗಿದುಹೋಗುವಂತಹ ಸಂಪನ್ಮೂಲವೊಂದರ (ಕಲ್ಲಿದ್ದಲು) ಕ್ಷಯಿಸುವಿಕೆ. ಈಗ ಹಿಂತಿರುಗಿ ನೋಡುವಾಗ ನಮಗೆ ಇಬ್ಬರು ಲೇಖಕರೂ ಸಹ ತಂತ್ರಜ್ಞಾನದ ಅಭಿವೃದ್ಧಿಯ ಪ್ರಾಮುಖ್ಯತೆ ಮತ್ತು ಪರ್ಯಾಯ ಶಕ್ತಿ ಮೂಲಗಳ ಕುರಿತು ಕಡಿಮೆ ಅಂದಾಜು ಮಾಡಿದರು ಎನಿಸಬಹುದು. ಜೆವಾನ್ಸ್ ಅವರ ಕೃತಿಯು, 1972ರಲ್ಲಿ ಕ್ಲಬ್ ಆಫ್ ರೋಮ್ ಮಂಡಿಸಿದ ದಿ 'ಲಿಮಿಟ್ಸ್ ಆಫ್ ಗ್ರೋತ್' ಎಂಬ ಅಧ್ಯಯನದ ಮುನ್ಸೂಚಕವಾಗಿದ್ದು, ಸಂಪನ್ಮೂಲ ಮತ್ತು ಶಕ್ತಿ ಅರ್ಥಶಾಸ್ತ್ರಕ್ಕೆ ಆರಂಭಿಕ ಕೊಡುಗೆ ಎಂದು ಭಾವಿಸಬಹುದು.

ಅದೇನೆ ಇರಲಿ, 'ಥಿಯರಿ ಆಫ್ ಪೊಲಿಟಿಕಲ್ ಎಕಾನಮಿ' (1871) ಎಂಬ ಇನ್ನೊಂದು ಪುಸ್ತಕದಿಂದ ಜೆವಾನ್ಸ್ ಅವರಿಗೆ ಚಿರಸ್ಥಾಯಿಯಾದ ಕೀರ್ತಿ ದೊರಕಿತು. ಈ ಪುಸ್ತಕದಲ್ಲಿ ಅವರು ಶಾಸ್ತ್ರೀಯ ಅರ್ಥಶಾಸ್ತ್ರದ ತಪ್ಪನ್ನು ಪ್ರತಿಪಾದಿಸಿದರು. ಶಾಸ್ತ್ರೀಯ ಅರ್ಥಶಾಸ್ತ್ರವು ಗೋಜಲಿನ ಹಾಗೂ ವಿವೇಚನಾರಹಿತ ಪೂರ್ವತೀರ್ಮಾನಗಳನ್ನು ಆಧರಿಸಿದೆ ಎಂಬುದು ಅವರ ಆಪಾದನೆಯಾಗಿತ್ತು. ಗೌರವಾರ್ಹ ವಿಜ್ಞಾನ ಎನಿಸಿಕೊಳ್ಳಬೇಕಾದರೆ ಅರ್ಥಶಾಸ್ತ್ರವು ಭೌತಶಾಸ್ತ್ರವನ್ನು ಗಮನಿಸಬೇಕು ಮತ್ತು ಗಣಿತ ಶಾಸ್ತ್ರವನ್ನು ಬಳಸಬೇಕು ಎಂದು ಅವರು ದೃಢವಾಗಿ

ಪ್ರತಿಪಾದಿಸಿದರು. ವಾಸ್ತವದಲ್ಲಿ ಜೆವಾನ್ಸ್ ಅವರ ಗಣಿತದ ಪ್ರತಿಭೆಗಳು ತೀರಾ ಮಾಮೂಲಿನದಾಗಿದ್ದರೂ ಅವರ ಈ ಮನವಿಯು ಅತ್ಯಂತ ಯಶಸ್ವಿಯಾಯಿತು.

ಆತನ ಮುಖ್ಯ ಖಂಡನೆ ಇದ್ದದ್ದು ಮೌಲ್ಯವನ್ನು ಕುರಿತ ಶಾಸ್ತ್ರೀಯ ಸಿದ್ಧಾಂತದ ವಿರುದ್ಧ. ಆತನ ಪ್ರಕಾರ ಒಂದು ಸರಕಿನ ಮೌಲ್ಯವನ್ನು ಅದಕ್ಕೆ ಅವಶ್ಯವಿರುವ ಶ್ರಮವು ನಿರ್ಧರಿಸುವುದಿಲ್ಲ, ಬದಲಿಗೆ ಅದರ "ಉಪಯೋಗತ್ವದ ಅಂತಿಮ ಮಟ್ಟ"ವು ನಿರ್ಧರಿಸುತ್ತದೆ; ಇದು ಅವರು ಸೀಮಾಂತ ಉಪಯೋಗತ್ವವನ್ನು ಸೂಚಿಸಲು ಪ್ರಯೋಗಿಸಿದ ಪದ. ಆದರೆ ಇದು ವ್ಯಕ್ತಿನಿಷ್ಠವಾಗುತ್ತದೆ, ಇದನ್ನು ಪ್ರತಿಯೊಬ್ಬ ಬಳಕೆದಾರನು ನಿರ್ಧರಿಸುತ್ತಾನೆ ಮತ್ತು ಅದು ಆತನ ಅಥವಾ ಆಕೆಯ ಅವಶ್ಯಕತೆಗಳನ್ನು ಮತ್ತು ಅಪೇಕ್ಷೆಗಳನ್ನು ಪ್ರತಿಬಿಂಬಿಸುತ್ತದೆ. ಜೆವಾನ್ಸ್ ಅವರು ಗೊಸ್ಸೆನ್ ಅವರ ಮೊದಲ ನಿಯಮಕ್ಕೆ ಸಮಾನವಾದದ್ದನ್ನು ಸೂಚಿಸಿದ್ದರೂ, ಎರಡನೆಯ ನಿಯಮಕ್ಕೆ ಸಂಬಂಧಿಸಿದಂತೆ ಅವರು ಏನನ್ನೂ ಹೇಳಲಿಲ್ಲ. ಗೊಸ್ಸೆನ್ ಅವರಂತೆ ಇವರೂ ಸಹ ಒಂದು ಸರಕಿನ ಸೀಮಾಂತ ಉಪಯುಕ್ತತೆಯು ಆ ಸರಕಿನ ಮೇಲೆಯೇ ಅವಲಂಬಿತವಾಗಿದ್ದು, ಇತರ ಸರಕುಗಳ ಬಳಕೆಯ ಪ್ರಮಾಣದ ಮೇಲೆ ಅಲ್ಲ ಎಂದುಕೊಂಡರು. ಗೊಸ್ಸೆನ್ ಅವರ ಪ್ರತಿಪಾದನೆಗಳಲ್ಲಿ ಕೇಂದ್ರ ಭಾಗವನ್ನು ಆಕ್ರಮಿಸಿಕೊಂಡಿದ್ದ, ಬಳಕೆಯ ಕಾಲಾಧಾರಿತ ಆಯಾಮ(temporal dimension of consumption)ವು ಜೆವಾನ್ಸ್ ಅವರ ವಿಶ್ಲೇಷಣೆಯಲ್ಲಿ ಯಾವ ಪಾತ್ರವನ್ನೂ ವಹಿಸಲಿಲ್ಲ.

ಜೆವಾನ್ಸ್‌ರವರು ಬೇಡಿಕೆಯ ಭಾಗಕ್ಕೆ ಒತ್ತು ನೀಡಿ ಶಾಸ್ತ್ರೀಯ-ವಿರೋಧಿ ಕಾರ್ಯಕ್ರಮವೊಂದನ್ನು ಪ್ರತಿಪಾದಿಸಿದರೂ ಸಹ ಸೂಕ್ಷ್ಮವಾಗಿ ಪರೀಕ್ಷಿಸಿದಲ್ಲಿ ಅವರ ವಾದವು ಮುಂದೆ ಸಾಗದೆ ಉಳಿದುಬಿಡುತ್ತದೆ. ಇವರು ಸಮಸ್ಥಿತಿಯಲ್ಲಿರುವ ಸಾಪೇಕ್ಷ ಬೆಲೆಗಳು ಸಾಪೇಕ್ಷ ಶ್ರಮದ ವೆಚ್ಚಗಳಿಗೆ ಸಮ ಎಂದು ಭಾವಿಸಿದರು ಎಂಬುದರಿಂದ ಹೀಗೆ ಅರ್ಥೈಸಿಕೊಳ್ಳಬಹುದು. ಅವರ ಚಿಂತನೆಯಲ್ಲಿ ನವೀನವಾಗಿರುವುದು ಮೌಲ್ಯದ ಕುರಿತಾದ ಶ್ರಮ ಸಿದ್ಧಾಂತದ ತಿರಸ್ಕಾರವಲ್ಲ, ಬದಲಿಗೆ ಅವರು ಮುಂದಿಡುವ ಹೊಸ ಕಾರ್ಯಕಾರಣ(causality): ಸೀಮಾಂತ ಉಪಯುಕ್ತತೆಯಿಂದ ಹೊರಟ ಈ ಕಾರ್ಯಕಾರಣವು ಶ್ರಮದಲ್ಲಿ ಕೊನೆಯಾಗುತ್ತದೆ. ಅವರ ಪ್ರಕಾರ ಇದರ ಅರ್ಥವೇನೆಂದರೆ ಶ್ರಮದಿಂದ ಆರಂಭಿಸಿದ್ದ ಶಾಸ್ತ್ರೀಯ ಅರ್ಥಶಾಸ್ತ್ರದ ಲೇಖಕರ ಕಾರ್ಯಕಾರಣವನ್ನು ಇದು ತಲೆಕೆಳಗು ಮಾಡುತ್ತದೆ. ಜೆವಾನ್ಸ್ ಹೀಗೆಂದು ವಾದಿಸಿದರು: ಸೀಮಾಂತ ಉಪಯುಕ್ತತೆಯ ತತ್ವದ ಮೇಲೆ ಆಧರಿತವಾದ ಬೇಡಿಕೆಯು ಉತ್ಪನ್ನದ ಸಂರಚನೆಯನ್ನು ನಿರ್ಧರಿಸುತ್ತದೆ. ಸಮಸ್ಥಿತಿಯಲ್ಲಿ ಸರಕುಗಳ ಸರಬರಾಜು, ಸರಕುಗಳ ಬೇಡಿಕೆಗೆ ಸಮನಾಗಿರುತ್ತದೆ, ಇಲ್ಲಿ ಸರಕುಗಳ ಸರಬರಾಜು, ಶ್ರಮದ ವ್ಯಯದಿಂದ ಪ್ರಭಾವಿತವಾರುತ್ತದೆ. ಸಮಸ್ಥಿತಿಯಲ್ಲಿ ವೆಚ್ಚದ ನಿಯಮವು ಕೆಲಸ

ಮಾಡುತ್ತದೆ, ಇದರ ಅರ್ಥವೇನೆಂದರೆ ಉತ್ಪಾದನೆಯ ವೆಚ್ಚಗಳು (ಶ್ರಮವು) ಸರಕುಗಳ ಬೆಲೆಗೆ ಸಮನಾಗಿರುತ್ತವೆ. ಈ ರೀತಿಯಾಗಿ ಮುಂಬಾಗಿಲಿನಿಂದ ಹೊರಗೆ ಎಸೆಯಲ್ಪಟ್ಟಿದ್ದ ಮೌಲ್ಯದ ಶ್ರಮ ಸಿದ್ಧಾಂತವು ಈಗ ಹಿಂಬಾಗಿಲಿನಿಂದ ಮತ್ತೆ ಮನೆಯನ್ನು ಪ್ರವೇಶಿಸುತ್ತದೆ.

ಆಸಕ್ತಿಕರ ವಿಷಯವೆಂದರೆ, ಇತರ ಅರ್ಥಶಾಸ್ತ್ರಜ್ಞರಾದ ಆಸ್ಟ್ರಿಯಾ ದೇಶದ ಯೂಜಿನ್ ವಾನ್ ಬೂಮ್ ಬಾವೆರ್ಕ್ ಮತ್ತು ಅಮೆರಿಕ ದೇಶದ ಜಾನ್ ಬೇಟ್ಸ್ ಕ್ಲಾರ್ಕ್ (1847-1938) ಇದೇ ತೀರ್ಮಾನಕ್ಕೆ ಬಂದರು ಮತ್ತು ವೆಚ್ಚದ ನಿಯಮ ಎಂಬುದು ಮೌಲ್ಯದ ಶ್ರಮ ಸಿದ್ಧಾಂತವೇ ಆಗುತ್ತದೆ ಎಂಬುದನ್ನು ಒತ್ತಿ ಹೇಳಿದರು. ಇದನ್ನು ನೋಡಿದಾಗ ಅವರು ಮೌಲ್ಯದ ಶ್ರಮ ಸಿದ್ಧಾಂತದೊಂದಿಗೆ ಆಗಾಗ ಗುರುತಿಸಲ್ಪಟ್ಟಿರುವ ಸಿದ್ಧಾಂತಗಳನ್ನು ಪ್ರತಿಪಾದಿಸುವ ಸ್ಮಿತ್ ಮತ್ತು ರಿಕಾರ್ಡೊ ಅವರ ಅರ್ಥಶಾಸ್ತ್ರಕ್ಕೆ ಹಿಂತಿರುಗಿದ್ದಾರೆ ಎನ್ನಿಸಬಹುದು. ಆದರೆ ನಾವು ಅಧ್ಯಾಯ ಎರಡರಲ್ಲಿ ಗಮನಿಸಿದಂತೆ ಶಾಸ್ತ್ರೀಯ ಅರ್ಥಶಾಸ್ತ್ರದ ಲೇಖಕರು ಯಾರೂ ಸಹ ಅವರಿಗೆ ಆರೋಪಿಸಲಾಗಿರುವ ಈ ಸಿದ್ಧಾಂತವನ್ನು ಪ್ರತಿಪಾದಿಸಲಿಲ್ಲ ಎಂಬುದು ಒಂದು ವಿಪರ್ಯಾಸ. ಅಂದರೆ ಅವರಲ್ಲಿ ಯಾರೇ ಆಗಲಿ ಸಾಪೇಕ್ಷ ಬೆಲೆಗಳು ನಿಶ್ಚಿತವಾಗಿಯೂ ಅವುಗಳ ಉತ್ಪಾದನೆಗೆ ಅವಶ್ಯಕವಾದ ಸಾಪೇಕ್ಷ ಶ್ರಮ ಪರಿಮಾಣಗಳಿಗೆ ಸಮಾನುಪಾತವನ್ನು ಹೊಂದಿರುತ್ತದೆ ಎಂದು ಪ್ರತಿಪಾದಿಸಲಿಲ್ಲ. ಸ್ಮಿತ್ ಮತ್ತು ವಿಶೇಷವಾಗಿ ರಿಕಾರ್ಡೊ ಅವರು ಚಕ್ರಬಡ್ಡಿಯೂ ಸಾಪೇಕ್ಷ ಬೆಲೆಗಳ ಮೇಲೆ ಪ್ರಭಾವವನ್ನು ಹೊಂದಿರುತ್ತದೆ ಎಂಬ ವಾಸ್ತವಾಂಶದ ಬಗ್ಗೆ ಮತ್ತು ಇದರಲ್ಲಿ ಶ್ರಮ ವೆಚ್ಚಗಳ ಕಾಲ ಚಿತ್ರಣಗಳು ವಹಿಸುವ ಪಾತ್ರದ ಬಗ್ಗೆ ಸಂಪೂರ್ಣ ಅರಿವನ್ನು ಹೊಂದಿದ್ದರು. ಹೀಗಾಗಿ ಸಂಕೀರ್ಣ ಸನ್ನಿವೇಶವೊಂದು ನಮಗೆ ಎದುರಾಗುತ್ತದೆ: ಅದೆಂದರೆ ಶಾಸ್ತ್ರೀಯ ಅರ್ಥಶಾಸ್ತ್ರವನ್ನು ಅದರ ಕೆಲವು ಮುಖ್ಯ ಟೀಕಾಕಾರರು ತಿರಸ್ಕರಿಸಿದ್ದು ಏಕೆಂದರೆ ಅದು ಮೌಲ್ಯದ ಶ್ರಮ ಸಿದ್ಧಾಂತವನ್ನು ಪ್ರತಿಪಾದಿಸುತ್ತದೆ ಎಂದು; ಆದರೆ ಶಾಸ್ತ್ರೀಯ ಲೇಖಕರು ಯಾರೂ ಸಹ ಪ್ರತಿಪಾದನೆಯನ್ನು ಮಾಡಲಿಲ್ಲ. ಆದರೆ ಅವರ ಟೀಕಾಕಾರರೇ ಸಾಪೇಕ್ಷ ಬೆಲೆಗಳು ಸಾಪೇಕ್ಷ ಶ್ರಮ ಪರಿಮಾಣಗಳೊಂದಿಗೆ ಸಮಾನುಪಾತವನ್ನು ಹೊಂದಿವೆ ಎಂಬ ಅಭಿಪ್ರಾಯವನ್ನು ಪ್ರತಿಪಾದಿಸಿದ್ದಾರೆ. ಇದೊಂದು ವಿಪರ್ಯಾಸವೇ ಸರಿ!

ಜೆವಾನ್ಸ್ ಅವರ ಕೃತಿಯು ಬೂಮ್ ಬಾವೆರ್ಕ್ ಅವರ 'ಕ್ಯಾಪಿಟಲ್ ಅಂಡ್ ಇಂಟರೆಸ್ಟ್' (1884-1889) ಎಂಬ ಪುಸ್ತಕದಲ್ಲಿ ಪ್ರತಿಪಾದಿಸಿದ ಆಸ್ಟ್ರಿಯನ್ ಬಂಡವಾಳ ಮತ್ತು ಬಡ್ಡಿಯ ಕುರಿತಾದ ಸಿದ್ಧಾಂತಕ್ಕೆ ಅಥವಾ ಕಾಲ ಸಂಬಂಧಿ ಸಿದ್ಧಾಂತಕ್ಕೆ ಎಡೆ ಮಾಡಿಕೊಟ್ಟಿತು. ಇದನ್ನು ನಟ್ ವಿಕ್ಸೆಲ್ ಅವರು 'ವ್ಯಾಲ್ಯೂ ಕ್ಯಾಪಿಟಲ್ ಅಂಡ್ ರೆಂಟ್' (1893)

ಎಂಬ ಕೃತಿಯಲ್ಲಿ ಇನ್ನಷ್ಟು ವಿಶದೀಕರಿಸಿದರು. ಆಸ್ಟ್ರಿಯಾದ ಚಿಂತಕರು ಗ್ರಹಿಸಿದಂತೆ ಬಂಡವಾಳವು ಮೊಟ್ಟಮೊದಲನೆಯದಾಗಿ ಶ್ರಮಿಕರಿಗೆ ಜೀವನಾವಶ್ಯಕ ಸಾಧನಗಳ ಸಣ್ಣ ಅಥವಾ ದೊಡ್ಡದೊಂದು ಪ್ರಮಾಣ. ಅಂತಹ ಜೀವನಾವಶ್ಯಕತೆಯ ಇಂತಹ ಸಾಧನವು ಯಾವುದೇ ವ್ಯಕ್ತಿಯು, ಹೆಚ್ಚುಕಡಿಮೆ(more or less) ಉತ್ಪಾದನೆಯ ಪರಿಕ್ರಮ ಪ್ರಕ್ರಿಯಗಳನ್ನು ಆರಂಭಿಸಲು ಅನುಮತಿ ನೀಡುತ್ತದೆ. ಅಂದರೆ ಅವು ಉತ್ಪಾದನಾ ಅವಧಿಯನ್ನು ವಿಸ್ತರಿಸಲು ಅನುವು ಮಾಡಿಕೊಡುತ್ತವೆ; ಉತ್ಪಾದನಾ ಕಾಲಾವಧಿ ಅಂದರೆ ಮೊಟ್ಟ ಮೊದಲ ಬಾರಿ ಶ್ರಮವನ್ನು ತೊಡಗಿಸಿದಾಗಿನಿಂದ, ಮುಂದೆ ಮಧ್ಯದಲ್ಲಿ ಬರುವ ಉತ್ಪನ್ನಗಳ ಮುಂದಿನ ಹಂತಗಳನ್ನೂ ಸೇರಿದಂತೆ ಅಂತಿಮ ಉತ್ಪನ್ನವು ಪೂರ್ಣವಾಗುವವರೆಗೂ ತೆಗೆದುಕೊಳ್ಳುವ ಅವಧಿ. ಉದಾಹರಣೆಗೆ ವ್ಯಕ್ತಿಯೊಬ್ಬನು ಬರೀ ಕೈಯಲ್ಲಿ ಮೀನನ್ನು ಹಿಡಿಯಬಹುದು ಅಥವಾ ಈಗಾಗಲೇ ಚೂಪಾಗಿಸಿಕೊಂಡ ಕಡ್ಡಿಯೊಂದನ್ನು ಉಪಯೋಗಿಸಿ ಚುಚ್ಚಿ ಹಿಡಿಯಬಹುದು ಅಥವಾ ದೋಣಿ ಮತ್ತು ಬಲೆಯನ್ನು ಉಪಯೋಗಿಸಿ ಅವುಗಳನ್ನು ಹಿಡಿಯಬಹುದು ಇತ್ಯಾದಿ. ಉತ್ಪಾದನಾ ಅವಧಿಯ ಅಂತಹ ವಿಸ್ತರಣೆಗಳು ಮೇಲ್ಮಟ್ಟದವು, ಯಾವ ಅರ್ಥದಲ್ಲಿ ಅಂದರೆ ಅವು ತೊಡಗಿಸಿಕೊಂಡ ಪ್ರತಿಯೊಂದು ಶ್ರಮದ ಘಟಕಕ್ಕೆ ಪ್ರತಿಯಾಗಿ ಹೆಚ್ಚಿನ ಉತ್ಪನ್ನವನ್ನು ನೀಡುತ್ತವೆ, ಅಂದರೆ ಅವು ಹೆಚ್ಚಿನ ಶ್ರಮ ಉತ್ಪಾದಕತೆಯನ್ನು ಪ್ರದರ್ಶಿಸುತ್ತವೆ ಎಂದು ಬೋಮ್ ಬಾವೆರ್ಕ್ ಅವರು ಪ್ರತಿಪಾದಿಸಿದರು. ಉತ್ಪಾದನಾ ಅವಧಿಯನ್ನು ಹೆಚ್ಚು ಮಾಡುವುದರಿಂದ ಉತ್ಪನ್ನವು ಹೆಚ್ಚಾಗುವುದು ಧನಾತ್ಮಕ ಬಡ್ಡಿಯ ದರ (ಆಸ್ಟ್ರಿಯಾದ ಅರ್ಥಶಾಸ್ತ್ರಜ್ಞರು ಲಾಭ ಎನ್ನುವುದಕ್ಕೆ ಸಮಾನಾರ್ಥಕವಾಗಿ ಉಪಯೋಗಿಸಿದ ಪದ). ಮತ್ತು ಬಂಡವಾಳ ಸಂಚಯದ ಕುರಿತು ಆಸ್ಟ್ರಿಯಾದ ತಜ್ಞರು ನೀಡುವ ವಿವರಣೆಯ ಮುಖ್ಯ ಭಾಗಗಳಲ್ಲಿ ಒಂದು. ಇನ್ನೊಂದು ಮುಖ್ಯ ಅಂಶವೆಂದರೆ ಧನಾತ್ಮಕ 'ಸಮಯದ ಆದ್ಯತೆಯ ದರ': ವ್ಯಕ್ತಿಯೊಬ್ಬನು ಇಂದು ಒಂದು ಸರಕುಗಳ ಕಂತೆಗೆ ಆದ್ಯತೆ ನೀಡಬಹುದು, ಅದು ಅವನು ಮುಂದಿನ ವಾರ ಅದೇ ಸರಕಿನ ಕಂತೆಗೆ ನೀಡುವ ಆದ್ಯತೆಗಿಂತ ಹೆಚ್ಚಿರುತ್ತದೆ ಮತ್ತು ಅದೇ ರೀತಿಯಲ್ಲಿ ಅದರ ಮುಂದಿನ ಸರಕಿನ ಕಂತೆಗೂ ಈ ಮಾತು ಅನ್ವಯಿಸುತ್ತದೆ ಇತ್ಯಾದಿ. ಮತ್ತೊಂದು ಮಾತಿನಲ್ಲಿ ಹೇಳಬೇಕೆಂದರೆ, ತಮ್ಮ ಉಪಭೋಗಕ್ಕೆ ಸಂಬಂಧಿಸಿದಂತೆ ವ್ಯಕ್ತಿಗಳಿಗೆ ಅಸಹನೆಯಿರುತ್ತದೆ. ಇದರ ಅರ್ಥವೆಂದರೆ ಅವರು ತಮ್ಮ ತಾಳ್ಮೆಗೇಡಿತನವನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ತಯಾರಿರುತ್ತಾರೆ, ಅಂದರೆ ಉಳಿತಾಯ ಮಾಡಲು ಸಿದ್ಧರಿರುತ್ತಾರೆ. ಆದರೆ ಅವರ ಉಳಿತಾಯದ ಮೇಲಿನ ಬಡ್ಡಿಯು ವ್ಯಕ್ತಿಗತ ಸಮಯದ ಆದ್ಯತೆಯ ದರಕ್ಕಿಂತ ಹೆಚ್ಚಿರಬೇಕಷ್ಟೆ. ಅದೇನೇ ಇರಲಿ ಉಳಿತಾಯವು ಉತ್ಪಾದನೆಯ ಅವಧಿಯನ್ನು ಮೀರುತ್ತದೆ ಮತ್ತು ಇದರಿಂದಾಗಿ ಪ್ರತಿಯೊಂದು ಜೀವನಾವಶ್ಯಕ

ಸಮುಚ್ಚಯಕ್ಕೆ (ಕಾರ್ಮಿಕರನ್ನು ಉದ್ಯೋಗದಲ್ಲಿ ತೊಡಗಿಸಿಕೊಳ್ಳಲು ಅಗತ್ಯವಾದದ್ದು) ಪ್ರತಿಯಾಗಿ ಹೆಚ್ಚಿನ ಉತ್ಪಾದನೆ ಉಂಟಾಗುತ್ತದೆ. ಎಲ್ಲಿಯವರೆಗೂ ಎರಡನೆಯದರ ಹೆಚ್ಚಳವು ಸಮಯದ ಆದ್ಯತೆಯ ದರಕ್ಕಿಂತ ದೊಡ್ಡದಾಗಿರುತ್ತದೆಯೊ ಅಲ್ಲಿಯವರೆಗೂ ಉಳಿತಾಯವಿರುತ್ತದೆ.

**ಕಾರ್ಲ್ ಮೆಂಜರ್**

'ಪ್ರಿನ್ಸಿಪಲ್ಸ್ ಆಫ್ ಎಕನಾಮಿಕ್ಸ್' ಎಂಬ ಕಾರ್ಲ್ ಮೆಂಜರ್ ವಿರಚಿತ ಆಸ್ಟ್ರಿಯಾದ ಸೈದ್ಧಾಂತಿಕ ಶಾಖೆಯ ಉದ್ಗ್ರಂಥವು ಜೆವಾನ್ಸ್ ಅವರ 'ಥಿಯರಿ ಆಫ್ ಪೊಲಿಟಿಕಲ್ ಎಕಾನಮಿ' ಪ್ರಕಟವಾದ ವರ್ಷದಲ್ಲಿಯೇ, ಅಂದರೆ 1871ರಲ್ಲಿ ಪ್ರಕಟವಾಯಿತು. ಮೆಂಜರ್ ಅವರು ಈ ಪುಸ್ತಕವನ್ನು ಜರ್ಮನಿ ದೇಶದ ವಿಲ್ ಹೆಲ್ಮ್ ರಾಷರ್ (1817–1894) ಎಂಬ ಹಳೆಯ ಚಾರಿತ್ರಿಕ ಶಾಖೆಯ ಪ್ರಮುಖ ಪ್ರತಿಪಾದಕರಿಗೆ ಅರ್ಪಿಸಿದರು ಮತ್ತು ಈ ಹಿಂದೆ ಜರ್ಮನಿಯ ಉಪಯೋಗ ಮೌಲ್ಯ ಶಾಖೆಯ ಹಾಗೂ ಸಾಲಮಂಕ ಶಾಖೆಯ ಚಿಂತನೆಗಳಿಂದ ಕೊಡುಗೆಗಳನ್ನು ಸ್ವೀಕರಿಸಿದರು (ನೋಡಿ: ಅಧ್ಯಾಯ 1). ಈ ಆರಂಭಕಾಲದ ಜರ್ಮನ್ ಅರ್ಥಶಾಸ್ತ್ರಜ್ಞರು ಯಾವುದೇ ಸರಕುಗಳ ಬೆಲೆಗಳನ್ನು ವಿವರಿಸಲು ಜನರು ಅವುಗಳಿಗೆ ಯಾವ ಮೌಲ್ಯವನ್ನು ನಿರ್ಧರಿಸುತ್ತಾರೆ, ಆ ಸರಕುಗಳ ಬಗ್ಗೆ ಅವರ ಅಭಿಪ್ರಾಯ ಏನಿರುತ್ತದೆ ಎಂಬುದರ ಪ್ರಾಮುಖ್ಯತೆಗೆ ಒತ್ತು ನೀಡಿದ್ದರು. ಮೆಂಜರ್ ಅವರ ಪ್ರಕಾರ ಈ ಲೇಖಕರ ಕೊಡುಗೆಗಳು ಸರಿಯಾದ ದಿಕ್ಕಿನತ್ತ ಬೊಟ್ಟು ಮಾಡಿದ್ದವು, ಆದರೆ ಮಾನವರ ಆರ್ಥಿಕ ವರ್ತನೆಯ ಕುರಿತಾದ ಸಾಮಾನ್ಯ ಸಿದ್ಧಾತವೊಂದರ ಅಭಾವವಿತ್ತು. ಅರ್ಥಶಾಸ್ತ್ರವನ್ನು ಸದೃಢ ತಳಹದಿಯ ಮೇಲೆ ರೂಪಿಸಬೇಕೆಂಬ ಉದ್ದೇಶದಿಂದ ಮೆಂಜರ್ ಇದನ್ನು ವಿಶದೀಕರಿಸಿದರು.

ಮೆಂಜರ್ ಅವರ ತರ್ಕವು ಹೀಗಿದೆ. ಎಲ್ಲ ಸರಕುಗಳನ್ನು ಒಂದು ಶ್ರೇಣಿಕೃತ ಸರದಿಯಲ್ಲಿ ಇರಿಸಬಹುದು ಎಂಬ ಪೂರ್ವ ತೀರ್ಮಾನದೊಂದಿಗೆ ಅವರು ಆರಂಭಿಸಿದರು. ಮೊದಲನೆಯ ಶ್ರೇಣಿಯಲ್ಲಿ ಅವಶ್ಯಕತೆಗಳನ್ನು, ಬೇಕುಗಳನ್ನು ನೇರವಾಗಿ ತೃಪ್ತಿಪಡಿಸಬಲ್ಲ ಸರಕುಗಳನ್ನು ಇರಿಸುವುದು. ಎರಡನೆಯ ಶ್ರೇಣಿಯಲ್ಲಿ ಮೊದಲ ಶ್ರೇಣಿಯ ಸರಕುಗಳನ್ನು ಉತ್ಪಾದಿಸಲು ಅಗತ್ಯವಾದ ಸರಕುಗಳನ್ನು ಇರಿಸುವುದು. ಮೂರನೆಯ ಶ್ರೇಣಿಯಲ್ಲಿ ಎರಡನೆಯ ಶ್ರೇಣಿಯ ಸರಕುಗಳನ್ನು ಉತ್ಪಾದಿಸಲು ಅಗತ್ಯವಾದ ವಸ್ತುಗಳನ್ನು ಇರಿಸುವುದು. ಮೆಂಜರ್ ಅವರು ಸರಕುಗಳು ಎಂಬ ಪರಿಕಲ್ಪನೆಯಲ್ಲಿ ಕೇವಲ ಉತ್ಪನ್ನಗಳನ್ನು ಮಾತ್ರವಲ್ಲದೆ ಶ್ರಮ ಮತ್ತು ಭೂ ಸೇವೆ(land services)ಗಳನ್ನು ಸಹ ಸೇರಿಸಿಕೊಂಡಿದ್ದರು. ಮೇಲಿನ ಶ್ರೇಣಿಯ ಸರಕುಗಳನ್ನು ಆನಂತರದ ಆಸ್ಟ್ರಿಯಾ ದೇಶದ ಅರ್ಥಶಾಸ್ತ್ರಜ್ಞರು "ಬೆಲೆಯ

ವೆಚ್ಚ (ಕಾಸ್ಟ್) ಸರಕುಗಳು" ಎಂದು ಸಹ ಕರೆದರು. ವಿಭಿನ್ನ ವಿಭಾಗಗಳಿಗೆ ಸೇರಿದ ಸರಕುಗಳ ನಿರ್ಧರಿತ ಮೌಲ್ಯಗಳನ್ನು ಮೆಂಜರ್ ಅವರು ಅರ್ಥೈಸಿಕೊಂಡದ್ದು ಹೇಗೆ? ಆತ ಮತ್ತು ಆತನ ಅನುಯಾಯಿಗಳು 'ಅನುವಂಶಿಕತೆ ಕಾರಣದ ದೃಷ್ಟಿಕೋನವು' ಆರ್ಥಿಕ ವ್ಯಕ್ತಿಗಳು ಅಂದರೆ ಬಳಕೆದಾರರು ಹೊಂದಿರುವ ಆದ್ಯತೆಗಳು, ಬೆಲೆ ಕಟ್ಟುವ ರೀತಿಗಳು ನೇರವಾಗಿ ಮೊದಲ ಶ್ರೇಣಿಯ ಸರಕುಗಳ ಮೌಲ್ಯವನ್ನು ನಿರ್ಧರಿಸುತ್ತವೆ ಎಂದು ತೀರ್ಮಾನಿಸಿದರು. ಈ ಮೌಲ್ಯಗಳ ಮೂಲಕ ನಾವು ಎಲ್ಲ ಸರಕುಗಳ ಅಂದರೆ "ಮೇಲಿನ ಶ್ರೇಣಿಯ ಸರಕುಗಳ" ಮೌಲ್ಯಗಳನ್ನು ಲೆಕ್ಕಹಾಕಬಹುದು ಎಂದು ಮೆಂಜರ್ ದೃಢವಾಗಿ ನಂಬಿದ್ದರು. ಆದರೆ ನಿರ್ದಿಷ್ಟವಾಗಿ ಹೇಗೆ?

ಮೆಂಜರ್ ಅವರು ಆರೋಪಣಾ ಸಮಸ್ಯೆಗೆ (Imputation problem) ತೃಪ್ತಿದಾಯಕ ಉತ್ತರವನ್ನು ಒದಗಿಸುವುದರಲ್ಲಿ ಸಫಲರಾಗಲಿಲ್ಲ; ಅವರ ದೃಷ್ಟಿಕೋನವು ಗೆಲ್ಲುವುದೋ ಇಲ್ಲವೋ ಎಂಬುದು ಆ ಸಮಸ್ಯೆಯ ಪರಿಹಾರವನ್ನು ಅವಲಂಬಿಸಿದೆ. ಸೀಮಾಂತ ಉಪಯುಕ್ತತೆ ಎಂಬ ಪದವನ್ನು ಚಲಾವಣೆಗೆ ತಂದ ಫ್ರೆಡ್ರಿಕ್ ವಾನ್ ವೈಸರ್ ಅವರು (1851-1926) ಈ ಸವಾಲನ್ನು ಕೈಗೆತ್ತಿಕೊಂಡು ಆಸ್ಟ್ರಿಯನ್ ದೃಷ್ಟಿಕೋನದಲ್ಲಿರುವ ಮತ್ತಷ್ಟು ಸಮಸ್ಯೆಗಳನ್ನು ಮೊದಲ ಬಾರಿ ತೆರೆದಿಟ್ಟರು. ಆಧುನಿಕ ಕೈಗಾರಿಕಾ ವ್ಯವಸ್ಥೆಗಳಲ್ಲಿ ಉತ್ಪಾದನೆಯ ಒಂದು ಚಕ್ರೀಯ(circular) ಪ್ರಕ್ರಿಯೆ ಇದೆ, ಅದರಲ್ಲಿ ಯಾವುದೇ ಉತ್ಪನ್ನಗಳನ್ನು ತಯಾರು ಮಾಡಲು ಇನ್ನಾವುದೋ ಉತ್ಪನ್ನಗಳನ್ನು ಉಪಯೋಗಿಸಲಾಗಿರುತ್ತದೆ ಎಂಬ ಅಂಶದ ಬಗ್ಗೆ ಗಮನ ಸೆಳೆದರು. ಕೃಷಿಯಲ್ಲಿಯೂ ಸಹ ಇಂತಹ ಚಕ್ರೀಯತೆಯನ್ನು ಅಲ್ಲಗಳೆಯಲಾಗುವುದಿಲ್ಲ: ಗೋಧಿಯನ್ನು ಉತ್ಪಾದಿಸಲು ಬೀಜವಾಗಿ ಗೋಧಿಯನ್ನು ಉಪಯೋಗಿಸಲಾಗುತ್ತದೆ ಮತ್ತು ಜಾನುವಾರುಗಳ ಸೃಜನೆಗೆ ಸಂತಾನೋತ್ಪತ್ತಿಗೆ ಬಳಸುವ ಪಶುಗಳನ್ನೇ ಉಪಯೋಗಿಸಲಾಗುತ್ತದೆ. ಹೀಗಾಗಿ ಧಾನ್ಯ ಮತ್ತು ಇನ್ನೂ ಅನೇಕ ಉತ್ಪನ್ನಗಳು ಬೇರೆ ಬೇರೆ ಶ್ರೇಣಿಗಳಿಗೆ ಸೇರಿದ ವಸ್ತುಗಳಾಗಿರುತ್ತವೆ. ಈ ವಾಸ್ತವಾಂಶವನ್ನು ಸಿದ್ಧಾಂತವು ಗೌರವಿಸಬೇಕು. ಇದಲ್ಲದೆ ಮೊದಲ ಶ್ರೇಣಿಯ ಸರಕುಗಳು ಬೇರೆ ಎಲ್ಲಾ ಶ್ರೇಣಿಗಳ ಸರಕುಗಳ ಸಂಖ್ಯೆಗಿಂತ ಹೆಚ್ಚಿದ್ದರೆ ಆಗ ಉತ್ತರವೇನು? ಅಥವಾ ಆ ಸಂಖ್ಯೆಯು ಕಡಿಮೆಯಿದ್ದಲ್ಲಿ ಉತ್ತರವೇನು? ಮೊದಲನೆಯ ಸಂದರ್ಭದಲ್ಲಿ ನಿಯೋಜನಾ ಸಮಸ್ಯೆಯನ್ನು ಅತಿಯಾಗಿ ನಿರ್ಣಯಿಸಿದ್ದರೆ ಎರಡನೆಯ ಪ್ರಕರಣದಲ್ಲಿ ಅದನ್ನು ಕಡಿಮೆ ನಿರ್ಣಯಿಸಲಾಗಿರುತ್ತದೆ. ಯಾವ ಯಾವ ವೆಚ್ಚಸರಕುಗಳು ಅಥವಾ ಒಳಸುರಿ(input) ಅಂಶಗಳ ಬೆಲೆಗಳನ್ನು ನಿಷ್ಕರ್ಷೆ ಮಾಡಬೇಕಾಗಿರುತ್ತದೋ, ಅಷ್ಟೇ ಸಂಖ್ಯೆಯಲ್ಲಿ "ಬೆಲೆ = ವೆಚ್ಚ" ಎಂಬಂತಹ ಏಕಕಾಲೀನ ಸಮೀಕರಣಗಳು ಇರುವಂತಹ ವ್ಯವಸ್ಥೆಯೊಂದು ಆರೋಪಣಾ ಸಮಸ್ಯೆಯ ಪರಿಹಾರಕ್ಕೆ ಅಗತ್ಯವಾಗುತ್ತದೆ ಎಂಬುದನ್ನು ವೈಸರ್ ಅವರು

ಒತ್ತಿ ಹೇಳಿದರು. ಒಂದು ಚಕ್ರೀಯ ಚೌಕಟ್ಟಿನಲ್ಲಿ ಎಲ್ಲಾ ಸರಕುಗಳ ಬೆಲೆಗಳನ್ನು ಏಕಕಾಲದಲ್ಲಿ ನಿರ್ಧರಿಸಬೇಕಾಗುತ್ತದೆ. ಮೆಂಜರ್ ಅವರ ಅನುಕ್ರಮವಾದಿ ದೃಷ್ಟಿಕೋನವು ಊರ್ಜಿತವಾಗುವುದಿಲ್ಲ. "ಅನುವಂಶಿಕ ಕಾರ್ಯಕಾರಣವಾದಿ" ವಿವರಣೆಯು ಸಾಕಾಗುವುದಿಲ್ಲ ಮತ್ತು ಒಂದಷ್ಟು ಗಣಿತಶಾಸ್ತ್ರದ ನೆರವಿಲ್ಲದೆ ಮೌಲ್ಯಗಳನ್ನು ನಿಗದಿಪಡಿಸಲು ಸಾಧ್ಯವಾಗದು.

ಇದಲ್ಲದೆ ಈ ಕೆಳಗೆ ಹೇಳಲಿರುವ ಇನ್ನೊಂದು ಸಮಸ್ಯೆಯೂ ಸಹ ಇದ್ದು ಇದರ ಬಗ್ಗೆ ಮೆಂಜರ್ ಅವರು ಆಗಲೇ ಗಮನವನ್ನು ಸೆಳೆದಿದ್ದಾರೆ. ಯಾವುದೇ ವಸ್ತುವನ್ನು ಬಳಕೆ ಮಾಡುವುದಕ್ಕೆ ಮುಂಚೆ ಅದನ್ನು ಉತ್ಪಾದಿಸಬೇಕಾಗುತ್ತದೆ. ಆದರೆ ಉತ್ಪಾದಕರಿಗೆ ಯಾವುದನ್ನು ಎಷ್ಟರಮಟ್ಟಿಗೆ ಉತ್ಪಾದಿಸಬೇಕು ಎಂದು ತಿಳಿಯುವುದು ಹೇಗೆ? ಅವರು ಸಂಭಾವ್ಯ ಬೇಡಿಕೆಗಳ ಬಗ್ಗೆ ನಿರೀಕ್ಷೆಗಳನ್ನು ರೂಪಿಸಿಕೊಳ್ಳಬೇಕು, ಅವು ತಪ್ಪೆಂದು ಸಾಬೀತಾಗಲೂಬಹುದು. ಬಳಕೆದಾರರು ಸಹ ತಪ್ಪು ಮಾಡಬಹುದು. ಅವರು ಯಾವುದೋ ಒಂದು ಸರಕನ್ನು ಬಳಸುವುದರ ಮೂಲಕ ತಮ್ಮ ಅವಶ್ಯಕತೆಯೊಂದನ್ನು ಪೂರೈಸಿಕೊಳ್ಳಬಹುದು ಎಂದು ತಪ್ಪಾಗಿ ನಿರೀಕ್ಷಿಸಬಹುದು. ಮೆಂಜರ್ ಅವರ 'ಪ್ರಿನ್ಸಿಪಲ್ಸ್' ಬರಹದಲ್ಲಿ ಇರುವ ಉಪ ವಿಭಾಗವೊಂದನ್ನು 'ಟೈಮ್ ಅಂಡ್ ಎರರ್'(ಕಾಲ ಮತ್ತು ತಪ್ಪು) ಎಂದು ಹೆಸರಿಸಿರುವುದು ಯಥೋಚಿತವಾಗಿಯೇ ಇದೆ: ಎಲ್ಲಾ ಆರ್ಥಿಕ ಕ್ರಿಯೆಗಳು ನಡೆಯುವುದು ಕಾಲದ ಒಳಗಡೆ ಮತ್ತು ನಮಗೆ ಭವಿಷ್ಯವನ್ನು ಅರಿಯುವುದು ಸಾಧ್ಯವಾಗದಿರುವುದರಿಂದ ಅನಿಶ್ಚಿತತೆ ಉಳಿಯುತ್ತದೆ. ನಿರೀಕ್ಷೆಗಳು ವರ್ತಮಾನದ ನಿರ್ಧಾರಗಳ ಮೇಲೆ ಪ್ರಭಾವ ಬೀರುತ್ತವೆ ಮತ್ತು ಅದನ್ನೇ ವಿಸ್ತರಿಸಿ ಹೇಳಬೇಕೆಂದರೆ ಬೆಲೆಗಳು ಮತ್ತು ಪರಿಮಾಣಗಳ ಮೇಲೆ ಸಹ.

ಮೆಂಜರ್ ಅವರ ನಷ್ಟದ ತತ್ವದಿಂದ ಆರಂಭಿಸಿ ವೈಸರ್ ಅವರು ನಂತರ "ಅವಕಾಶ ವೆಚ್ಚಗಳು" ಎಂದು ಕರೆಯಲ್ಪಟ್ಟ ಪರಿಕಲ್ಪನೆಯನ್ನು ವಿಶದೀಕರಿಸಿದರು. ಉದಾಹರಣೆಗೆ ಒಂದು ಬಹು ಉತ್ಪನ್ನಗಳನ್ನು ತಯಾರಿಸುವ ಉದ್ದಿಮೆಯು ಉತ್ಪಾದನಾ ಸಂಪನ್ಮೂಲಗಳ ನಿರ್ದಿಷ್ಟ ಪ್ರಮಾಣದಿಂದ ಹಾಗೂ ಒಂದು ನಿರ್ದಿಷ್ಟ ತಾಂತ್ರಿಕ ಜ್ಞಾನದಿಂದ ಅಡೆತಡೆಯನ್ನು ಎದುರಿಸುತ್ತಿದ್ದು, ಒಂದು ವಿಶಿಷ್ಟ ಉತ್ಪನ್ನವನ್ನು ಹೆಚ್ಚಾಗಿ ಉತ್ಪಾದಿಸಲು ಇಚ್ಛಿಸಿದರೆ, ಆಗ ಆ ಉದ್ದಿಮೆಯು ಬೇರೆ ಉತ್ಪನ್ನದ(ಗಳ) ಉತ್ಪಾದನಾ ಪ್ರಮಾಣವನ್ನು ಎಷ್ಟರಮಟ್ಟಿಗೆ ಕಡಿಮೆ ಮಾಡಬೇಕು? ಮೊದಲನೆಯ ಉತ್ಪನ್ನದ ಮತ್ತೊಂದು ಘಟಕವನ್ನು ಉತ್ಪಾದಿಸಲು ತಗಲುವ ಅವಕಾಶ ವೆಚ್ಚವು ಆ ಉದ್ದಿಮೆಯು ಯಾವ ಉತ್ಪನ್ನದ ಉತ್ಪಾದನೆಯನ್ನು ನಿಲ್ಲಿಸುತ್ತದೆಯೊ ಅದರ ಪ್ರಮಾಣದ ಮೂಲಕ ತಿಳಿದು ಬರುತ್ತದೆ.

ಮೆಂಜರ್ ಅವರ ಸಂದೇಶವು ಫಲಪ್ರದ ಕ್ಷೇತ್ರದ ಮೇಲೆ ಬಿದ್ದಿತು, ಅಂದರೆ ಯಾವುದು ಆಸ್ಟ್ರಿಯನ್ ವಿಚಾರಧಾರೆಯ ಮೂಲತಃ ವ್ಯಕ್ತಿನಿಷ್ಠ ಕವಲು ಎಂದು ಹೆಸರಾಯಿತೋ ಅದರ ಪ್ರತಿಪಾದಕರು ಅದನ್ನು ಕೈಗೆತ್ತಿಕೊಂಡರು. ಅದರ ಅತ್ಯಂತ ಪ್ರಭಾವಶಾಲಿ ವಕ್ತಾರನೆಂದರೆ ಲುಡ್ವಿಗ್ ವಾನ್ ಮೈಸಿಸ್. ಈತನು 1940ರಲ್ಲಿ ವಿಯೆನ್ನಾ ಮತ್ತು ಜಿನೀವಾ ನಗರಗಳಲ್ಲಿ ಬೋಧನೆ ಮಾಡಿದ ನಂತರ ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ವಲಸೆ ಹೋದನು. ಅಲ್ಲಿ 1945ರಲ್ಲಿ ನ್ಯೂಯಾರ್ಕ್ ವಿಶ್ವವಿದ್ಯಾಲಯದಲ್ಲಿ ಆತನು ಪೀಠವೊಂದಕ್ಕೆ ನೇಮಿಸಲ್ಪಟ್ಟನು. ಮೈಸಿಸ್ ಒಬ್ಬ ಅವಿಚಲ ಸ್ವಾತಂತ್ರ್ಯವಾದಿಯಾಗಿದ್ದು ಆತನ ಆರಂಭಕಾಲದ ಕಾರ್ಯವು ಹಣ ಮತ್ತು ಬ್ಯಾಂಕಿಂಗ್ ಕ್ಷೇತ್ರದ ಪಾತ್ರದ ಮೇಲೆ ಕೇಂದ್ರೀಕೃತವಾಗಿತ್ತು. ಆ ಕ್ಷೇತ್ರವು ಹಣ ಮತ್ತು ಸಾಲದ ಪರಿಚಲನೆಯನ್ನು ವಿಸ್ತೃತಗೊಳಿಸುವ ಮೂಲಕ ಹಣದುಬ್ಬರ ಮತ್ತು ವ್ಯಾಪಾರದ ಆವರ್ತಗಳಿಗೆ ಕಾರಣವಾಗುತ್ತದೆ ಎಂದು ಭಾವಿಸಲಾಗಿತ್ತು. ಹಣವು ಆರ್ಥಿಕತೆಯ ವಾಸ್ತವಿಕ ಭಾಗಕ್ಕೆ ಸಂಬಂಧಿಸಿದಂತೆ ತಟಸ್ಥವಲ್ಲ, ಅದು ಕೇವಲ ವಾಸ್ತವಿಕ ವ್ಯವಹಾರಗಳನ್ನು ಮುಚ್ಚಿಡುವ ಮುಸುಕಲ್ಲ ಎಂದು ಅವನು ಒತ್ತಿ ಹೇಳಿದನು. ಅದು ಅವುಗಳ ಒಳಗೆ ಮಧ್ಯಪ್ರವೇಶ ಮಾಡುತ್ತದೆ ಮತ್ತು ಉತ್ಪನ್ನ, ಉದ್ಯೋಗ, ಸಂಪನ್ಮೂಲಗಳ ವಿತರಣೆ ಇತ್ಯಾದಿಗಳ ಮೇಲೆ ಪ್ರಭಾವ ಬೀರುತ್ತದೆ. ಮೈಸಿಸ್‌ನ ಪ್ರಕಾರ ಅರ್ಥಶಾಸ್ತ್ರವು "ಮಾನವ ಕ್ರಿಯೆಯ ಸಿದ್ಧಾಂತವಾಗಬೇಕೇ ಹೊರತು ಸಮಸ್ಥಿತಿಯ ಸಿದ್ಧಾಂತದ ಕ್ರಿಯಾಹೀನತೆಯ, ಅಂದರೆ, ಆತನು ಕಟುವಾಗಿ ವಿರೋಧಿಸುತ್ತಿದ್ದ ನವಶಾಸ್ತ್ರೀಯ ಅರ್ಥಶಾಸ್ತ್ರದ ಮುಖ್ಯವಾಹಿನಿಯ ಸಿದ್ಧಾಂತವಾಗಬಾರದು." ತಾನು ಪ್ರತಿಪಾದಿಸಿದ ಸಿದ್ಧಾಂತವನ್ನು ಆತನು "ಪ್ರಾಕ್ಸಿಯಾಲಜಿ" ಎಂದು ಕರೆದನು. ಅರ್ಥಶಾಸ್ತ್ರದಲ್ಲಿ ಗಣಿತಶಾಸ್ತ್ರವನ್ನು ಉಪಯೋಗಿಸುವುದಕ್ಕೆ ಮತ್ತು ಭೌತಶಾಸ್ತ್ರದ ಬಿಂಬವಾಗಿ ಅರ್ಥಶಾಸ್ತ್ರವನ್ನು ರೂಪಿಸಬೇಕು ಎಂಬ ಕಲ್ಪನೆಗೆ ಉಗ್ರ ವಿರೋಧವನ್ನು ವ್ಯಕ್ತಪಡಿಸಿದನು. ಒಂದು ಸಿದ್ಧಾಂತದ ಗುಣಮಟ್ಟವನ್ನು ಅದು ಭವಿಷ್ಯವನ್ನು ಎಷ್ಟು ಚೆನ್ನಾಗಿ ಊಹಿಸುತ್ತದೆ ಎನ್ನುವುದರ ಮೇಲೆ ನಿರ್ಧರಿಸಬೇಕು ಎಂಬ ಅಭಿಪ್ರಾಯವನ್ನು ಆತ ತಿರಸ್ಕರಿಸಿದನು. ಸಮಾಜವಾದವು ತಾರ್ಕಿಕವಾಗಿ ಅಸಾಧ್ಯ, ಏಕೆಂದರೆ ಅದು ಲೆಕ್ಕಾಚಾರದ ಸಮಸ್ಯೆಯನ್ನು ಪರಿಹರಿಸುವುದರಲ್ಲಿ ಮತ್ತು ಒಂದು ಸಂಕೀರ್ಣ ಸಮಾಜವನ್ನು ಸಂಘಟಿಸುವುದರಲ್ಲಿ ಅಸಮರ್ಥವಾಗಿದೆ ಎಂಬುದಕ್ಕೆ ಆತನು ಒತ್ತು ನೀಡಿದನು. ಅರ್ಥವ್ಯವಸ್ಥೆಯಲ್ಲಿ ಪ್ರಭುತ್ವವು ಮಧ್ಯಪ್ರವೇಶಿಸಿದರೆ ಉಂಟಾಗುವ ವಿರೂಪಗಳಿಂದಾಗಿ ಅದು ಇನ್ನಷ್ಟು ಮಧ್ಯಪ್ರವೇಶಗಳಿಗೆ ಕಾರಣವಾಗುತ್ತದೆ ಮತ್ತು ಅಂತಿಮವಾಗಿ ಸಮಾಜವಾದಕ್ಕೆ ಎಡೆಮಾಡಿಕೊಡುತ್ತದೆ ಎಂಬ ಅರ್ಥ ಬರುವ ಡೊಮಿನೊ ಸಿದ್ಧಾಂತದ

ಪ್ರತಿಪಾದನೆಯಲ್ಲಿ, ವ್ಯಕ್ತಿ ವ್ಯವಹಾರದಲ್ಲಿ ಸರ್ಕಾರವು ಪ್ರವೇಶಿಸದಿರುವ ಆತನ ಮೂಲಭೂತ ಸಿದ್ಧಾಂತವು ಮುನ್ನೆಲೆಗೆ ಬರುತ್ತದೆ. ಆದರೆ ಅವನ ಭವಿಷ್ಯವಾಣಿಯು ಸತ್ಯವಾಗಲಿಲ್ಲ.

ಅವನಿಗೆ ಅನೇಕ ಅನುಯಾಯಿಗಳಿದ್ದರು, ವಿಶೇಷವಾಗಿ ಅಮೇರಿಕಾ ದೇಶದ, ಶೈಕ್ಷಣಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ. ಅರ್ಥಶಾಸ್ತ್ರಜ್ಞರಾದ ಲುಡ್ವಿಗ್ ಲಾಚ್ಮನ್ (1906– 1990), ಮುರ್ರೆ ರಾತ್ಬರ್ಡ್ (1926 -1995) ಮತ್ತು ಇಸ್ರೇಲ್ ಎಂ ಕಿರ್ಸ್ನರ್ (ಜನನ: 1930) ಇವರುಗಳನ್ನು ಹೆಸರಿಸಬಹುದು. ರಷ್ಯನ್ ಅಮೆರಿಕನ್ ಕಾದಂಬರಿಕಾರ್ತಿಯಾದ ಐನ್ ರ್ಯಾಂಡ್ (1905– 1982) ಅವರ ಬರಹಗಳಲ್ಲಿ ಮತ್ತು ಟೀ ಪಾರ್ಟಿ ಸಂಘದ ಸದಸ್ಯರ ಪ್ರಸ್ತಾಪಗಳಲ್ಲಿ ಮೈಸಿಸ್ ಅವರ ಕಲ್ಪನೆಗಳು ಧ್ವನಿಸುತ್ತವೆ.

**ಮೆಥಡಾನ್‌ಸ್ಟ್ರೈಟ್ (ವಿಧಾನಗಳ ಕುರಿತಾದ ಸಮರ)**

ಸೀಮಾಂತವಾದವನ್ನು ಸುತ್ತುವರೆದ ಚರ್ಚೆಗಳ ಹಿನ್ನೆಲೆಯಲ್ಲಿದ್ದ ಪ್ರಶ್ನೆ ಎಂದರೆ ಅರ್ಥಶಾಸ್ತ್ರಕ್ಕೆ ಸಮರ್ಪಕವಾದ ವಿಧಾನ ಯಾವುದು ಎಂಬುದು. ಮೆಂಜರ್ ಅವರು ಜರ್ಮನಿಯಲ್ಲಿದ್ದ ಗುಸ್ತಾವ್ ಶ್ಮೊಲರ್ (1838 -1917) ನೇತೃತ್ವದ 'ಚಾರಿತ್ರಿಕ ನೈತಿಕ' ದೃಷ್ಟಿಕೋನದ ಅನುಯಾಯಿಗಳು ಮತ್ತು ಮೆಂಜರ್ ಅವರ ನೇತೃತ್ವದಲ್ಲಿ ಪ್ರಬಲಗೊಳ್ಳುತ್ತಿದ್ದ ಸೀಮಾಂತ ಉಪಯುಕ್ತತೆಯ ವಿಚಾರಧಾರೆಯ ಪ್ರತಿನಿಧಿಗಳ ನಡುವೆ ಜರುಗಿದ ವಿಧಾನಗಳ ಕುರಿತಾದ ಚರ್ಚೆಯಲ್ಲಿ ಅರ್ಥಾತ್, ವಿಧಾನಗಳ ಕುರಿತಾದ ಸಮರದಲ್ಲಿ ಮುಖ್ಯ ಪಾತ್ರವನ್ನು ವಹಿಸಿದರು. ಶ್ಮೊಲರ್ ಅವರಿಗೆ ಮುಂಚೆ Wilhelm Roscher ಅವರು ಸೈದ್ಧಾಂತಿಕ ಕಾರ್ಯದ ಜೊತೆಯಲ್ಲಿ ವಿವರವಾದ ಅನುಭವ ಆಧಾರಿತ ಮತ್ತು ಚಾರಿತ್ರಿಕ ಸಂಶೋಧನೆಯನ್ನು ನಡೆಸಬೇಕು ಎಂದು ಪ್ರತಿಪಾದಿಸಿದ್ದರು. ಅನುಗಮನ ಮತ್ತು ನಿಗಮನ (ಇಂಡಕ್ಟಿವ್ ಮತ್ತು ಡಿಡಕ್ಟಿವ್) – ಈ ಎರಡೂ ವಿಧಾನಗಳು ಕೂಡ ಸಮಾನವಾಗಿ ಅನಿವಾರ್ಯ ಎಂಬುದು ಅವರ ಅಭಿಪ್ರಾಯ. ಇದಕ್ಕೆ ವಿರುದ್ಧವಾಗಿ ಶ್ಮೊಲರ್ ಅವರ ನಿಲುವು ತೀವ್ರಗಾಮಿಯಾಗಿತ್ತು ಮತ್ತು ಅದು ಸಿದ್ಧಾಂತೇತರವೆಂದು ಮತ್ತು ಕೆಲವೊಮ್ಮೆ ಸಿದ್ದಾಂತ ವಿರೋಧಿ ಎಂದು ಪರಿಗಣಿಸಲ್ಪಟ್ಟಿತ್ತು. ಜರ್ಮನಿಯಲ್ಲಿ ಅವರ ಪ್ರಭಾವವು ಗಣನೀಯವಾಗಿತ್ತು.

ಮೆಂಜರ್ ಅವರ 'ಪ್ರಿನ್ಸಿಪಲ್ಸ್' ಕೃತಿಯಲ್ಲಿದ್ದ ಸಂದೇಶವನ್ನು ಶ್ಮೊಲರ್ ಅವರ ಅನುಯಾಯಿಗಳು ತಿರಸ್ಕರಿಸಿದರು ಮತ್ತು ಅರ್ಥಶಾಸ್ತ್ರದ ಸಿದ್ಧಾಂತವೊಂದರ ರಚನೆಯು ಕೇವಲ ಸಮಗ್ರ ಚಾರಿತ್ರಿಕ ಅಧ್ಯಯನಗಳ ಮೂಲಕ ಮತ್ತು ವರ್ತನೆಗಳಲ್ಲಿನ ನಿಯತತೆಗಳ(regularities) ಶೋಧನೆಯ ಮೂಲಕ ಆಗಬೇಕೆಂದು ಒತ್ತಿ ಹೇಳಿದರು. ಇದು, ಮೆಂಜರ್

ಅವರು 1883ರಲ್ಲಿ ಪ್ರಕಟಿತವಾದ ತಮ್ಮ ಕೃತಿಯಲ್ಲಿ ಚಾರಿತ್ರಿಕ ಪ್ರಾಮುಖ್ಯ ದೃಷ್ಟಿಗೆ (ಚಾರಿತ್ರಿಕತತ್ತ್ವ) ಪ್ರಹಾರವನ್ನು ನೀಡಲು ಪ್ರೇರೇಪಿಸಿತು. ಅವರು ಸಾಮಾಜಿಕ ವಾಸ್ತವಾಂಶಗಳನ್ನು ಅವಶ್ಯಕತೆಯುಳ್ಳ ವ್ಯಕ್ತಿಯಿಂದ ಆರಂಭಿಸಿ ಕಂಡುಕೊಳ್ಳಬೇಕು ಎಂದು ವಾದಿಸಿದರು ಮತ್ತು ಯಾವುದೇ ಮನುಷ್ಯನು ಈ ವಿಷಯಕ್ಕೆ ಸಂಬಂಧಿಸಿದಂತೆ ಒಂದೇ ಪರಿಸ್ಥಿತಿಯಲ್ಲಿ ಇರುವುದರಿಂದ ವೀಕ್ಷಣೆ ಮತ್ತು ವೈಯಕ್ತಿಕ ಅನುಭವಗಳನ್ನು ಬಳಸಿಕೊಳ್ಳುವ ಮೂಲಕ ಸಿದ್ಧಾಂತವನ್ನು ರಚಿಸಬೇಕು: ಒಂದಷ್ಟು ಚಾರಿತ್ರಿಕ ವಾಸ್ತಮಾಂಶಗಳ ನಿಶ್ಚಿತ ಸಮುಚ್ಚಯವನ್ನು ಸಂಗ್ರಹಿಸಿದ ಕೂಡಲೇ ಆರ್ಥಿಕ ವರ್ತನೆಯ ಕುರಿತು ಮೂಲಭೂತ ಒಳನೋಟಗಳು ದೊರಕುವುದಿಲ್ಲ, ಬದಲಿಗೆ ಅವು ಸಾಧ್ಯವಾಗುವುದು ಈಗ ಇಲ್ಲೇ ನಡೆಯುವ ಆತ್ಮಾವಲೋಕನದಿಂದ ಎಂದರು. ಈ ರೀತಿಯಲ್ಲಿ ಗಳಿಸಿಕೊಂಡ ಒಳನೋಟಗಳನ್ನು ನಂತರ ಸಾಮಾನ್ಯೀಕರಿಸಬೇಕು ಮತ್ತು ತನ್ಮೂಲಕ ಅವುಗಳ ವಿಷಯವಸ್ತುವನ್ನು ವಿಸ್ತೃತಗೊಳಿಸಿ, ಸಾಮಾಜಿಕ ಅಂತರ್-ಕ್ರಿಯೆಗಳನ್ನು ವಿಶ್ಲೇಷಿಸಲು ಅವುಗಳನ್ನು ಉಪಯೋಗಿಸಿಕೊಳ್ಳಬೇಕು. ಇದಕ್ಕೆ ಶ್ಮೊಲರ್ ಪ್ರತಿಕ್ರಿಯಿಸಿದರು, ಮತ್ತೆ ಮೆಂಜರ್ ಅದನ್ನು ವಿರೋಧಿಸಿದರು; ಹೀಗೆ ಚರ್ಚೆಯು ವಿಸ್ತರಿಸಿತು, ಹೆಚ್ಚು ತೀಕ್ಷ್ಣವಾಯಿತು, ವ್ಯಕ್ತಿಗತವಾಯಿತು, ರಾಜಿ ಸಾಧ್ಯವಾಗದಂತಾಯಿತು. ಎರಡೂ ಕಡೆಯವರು ಕೂಡ ತಮ್ಮ ನಿಲುವುಗಳನ್ನು ಅತಿರೇಕಕ್ಕೆ ಕೊಂಡೊಯ್ದರು.

ಇಂದಿನ ದೃಷ್ಟಿಕೋನದಿಂದ ನೋಡಿದಾಗ ವಿಧಾನಗಳ ಕುರಿತಾದ ಈ ಸಮರವು ಬೌದ್ಧಿಕವಾಗಿ ಆಶ್ಚರ್ಯವೆನಿಸುವಷ್ಟು ನಿಷ್ಫಲವಾಗಿತ್ತು. ಜರ್ಮನಿಯ ವಿಶ್ವವಿದ್ಯಾಲಯದ ರಾಜನೀತಿಯ ದೃಷ್ಟಿಯಿಂದ ಹೇಳಬೇಕೆಂದರೆ, ಏನೇ ಇದ್ದರೂ ಅದು ಚಾರಿತ್ರಿಕ ವಿಚಾರಧಾರೆಯ ಅನುಯಾಯಿಗಳು ಒಗ್ಗಟ್ಟಾಗಿ, ತಮ್ಮ ವಿಭಾಗಗಳಿಂದ ಸೈದ್ಧಾಂತಿಕ ಮನಸ್ಸುಗಳನ್ನು ದೂರವಿಡುವುದರತ್ತ ಗಮನಹರಿಸುವಂತೆ ಅವರನ್ನು ಪ್ರೇರೇಪಿಸಿತು. ಆದರೆ ಆಸ್ಟ್ರಿಯಾದಲ್ಲಿ ಆರ್ಥಿಕ ಸಿದ್ದಾಂತಗಳು ಉಚ್ಛ್ರಾಯಸ್ಥಿತಿಗೇರಿತು; ಬೋಮ್ ಬಾವೆರ್ಕ್, ವೈಸರ್, ಫ್ರೆಡರಿಕ್ ಆಗಸ್ಟ್ ವಾನ್ ಹಾಯೆಕ್ (1899-1992) ಮತ್ತು ಶುಂಪೀಟರ್ ಅವರು ಉಚ್ಛ್ರಾಯದ ಮುಖ್ಯ ಕರ್ತೃಗಳೆನಿಸಿದರು. ಇದಕ್ಕೆ ವಿರುದ್ಧವಾಗಿ ಜರ್ಮನಿಯಲ್ಲಿ ಪೀಠದ ಸಮಾಜವಾದಿಗಳೆಂದು ಕರೆಯಲ್ಪಡುತ್ತಿದ್ದ ಚಾರಿತ್ರಿಕವಾದ(socialists)ದ ಸಮರ್ಥಕರು ಬಿಸ್ಮಾರ್ಕ್ ಅವರಿಗೆ, ಸಾಮಾಜಿಕ ಸುಧಾರಣೆಗಳ ನೀತಿಯನ್ನು ಕೈಗೆತ್ತಿಕೊಳ್ಳಬೇಕೆಂದೂ, ತನ್ಮೂಲಕ ಕಾರ್ಮಿಕ ವರ್ಗದ ಜೀವನ ಪರಿಸ್ಥಿತಿಗಳನ್ನು ಉತ್ತಮಪಡಿಸಿ ಸೋಶಿಯಲ್ ಡೆಮಾಕ್ರಟರ ಬೆಳವಣಿಗೆಯನ್ನು ನಿಯಂತ್ರಿಸಬೇಕೆಂದೂ ಸಲಹೆ ನೀಡಿದರು.

ಫ್ರೈಬರ್ಗ್ ವಿಚಾರಧಾರೆ ಅಥವಾ ವಾಲ್ಟರ್ ಯುಕೆನ್ (1891-1950) ಅವರ ಆರ್ಡೋಲಿಬರಲಿಸಂ ಎಂಬುದು ಒಂದು ಮಟ್ಟಿಗೆ ಈ ವಿಧಾನಗಳ ನಡುವಿನ ಸಮರಕ್ಕೆ ಮತ್ತು ಅದೇ ರೀತಿಯಲ್ಲಿ ನಿರಂಕುಶ ದೃಷ್ಟಿ(ಫ್ಯಾಸಿಸಂ) ಮತ್ತು ಸಮುದಾಯ ಸ್ವಾಮ್ಯತತ್ತ್ವದ ಅಪಾಯಗಳಿಗೂ ಸಹ ಪ್ರತಿಕ್ರಿಯೆಯಾಗಿತ್ತು. ವಾಗ್ವಾದದಲ್ಲಿ ವ್ಯಕ್ತವಾಗಿದ್ದ ತೀವ್ರ ವೈರುಧ್ಯಗಳನ್ನು ಮೂರನೆಯ ಹಾದಿಯ ಮೂಲಕ ನಿವಾರಿಸಬೇಕೆಂದು ಯೂಕೆನ್ ಆಶಿಸಿದ್ದರು. ಸೋವಿಯತ್ ಒಕ್ಕೂಟದಲ್ಲಿದ್ದ ಕೇಂದ್ರದಿಂದಲೇ ನಿರ್ದೇಶಿಸಲ್ಪಟ್ಟ ಆರ್ಥಿಕತೆ ಮತ್ತು ಜರ್ಮನಿಯಲ್ಲಿದ್ದ ನ್ಯಾಷನಲ್ ಸೋಶಿಯಲಿಸ್ಟ್ ಸರ್ವಾಧಿಕಾರ - ಇವುಗಳು ಅವರು ಬಂಡವಾಳವಾದ ಮತ್ತು ಸಮಾಜವಾದದ ನಡುವಿನ ವ್ಯವಸ್ಥೆಯೊಂದರ ಪರಿಕಲ್ಪನೆಯನ್ನು ರೂಪಿಸಲು ಪ್ರೇರಣೆ ನೀಡಿದ್ದವು. ಅವರ ಗುರಿ ಇದ್ದದ್ದು ಒಂದು ದೀರ್ಘಕಾಲ ಉಳಿಯುವ ಹಾಗೂ ಚೆನ್ನಾಗಿ ಕೆಲಸ ಮಾಡಬಹುದಾದ ಆರ್ಥಿಕ ವ್ಯವಸ್ಥೆ. ಅದು ವ್ಯಕ್ತಿಗತ ಸ್ವಾತಂತ್ರ್ಯ, ಸಾಮಾಜಿಕ ನ್ಯಾಯ ಇವೆರಡನ್ನು ಒಟ್ಟಿಗೆ ತಂದು ವಿರುದ್ಧಾತ್ಮಕ ಆಸಕ್ತಿಗಳನ್ನು ಬಗೆಹರಿಸಬೇಕೆಂದು ಆಶಿಸಿತ್ತು. ಸ್ಪರ್ಧೆ ಮತ್ತು ಸಮಾಜ ಕಲ್ಯಾಣ ನೀತಿಗಳು ಈ ವ್ಯವಸ್ಥೆಯ ಆಧಾರ ಸ್ತಂಭಗಳಾಗಿದ್ದು ಅದೊಂದು 'ಮಿಶ್ರವ್ಯವಸ್ಥೆ'ಯಾಗಿತ್ತು. ಎರಡನೇ ಮಹಾಯುದ್ಧದ ನಂತರ ಜರ್ಮನಿಯಲ್ಲಿ ಆರ್ಡೋಲಿಬರಲಿಸಂನ ಕಲ್ಪನೆಗಳು ಪ್ರಭಾವಶಾಲಿಯಾಗಿದ್ದವು ಮತ್ತು ಸಾಮಾಜಿಕ ಮಾರುಕಟ್ಟೆ ನೀತಿಯ ಪರಿಕಲ್ಪನೆಗೆ ಕಾರಣವಾದವು. ಇದನ್ನು ಅರ್ಥಶಾಸ್ತ್ರಜ್ಞರಾದ ಆಲ್ಫ್ರೆಡ್ ಮ್ಯುಲ್ಲರ್-ಆರ್ಮಾಕ್ (1901– 1978) ವಿಶದೀಕರಿಸಿದರು. 1949ರಿಂದ 1963ರವರೆಗೆ ಜರ್ಮನಿಯ ಸಂಘೀಯ ಗಣರಾಜ್ಯದ ಆರ್ಥಿಕ ವ್ಯವಹಾರಗಳ ಸಚಿವರಾಗಿದ್ದ ವಿಗ್ ಯೆರ್ಹಾರ್ಡ್ (1897- 1977) ಅವರು ಈ ಪರಿಕಲ್ಪನೆಯನ್ನು ಕೈಗೆತ್ತಿಕೊಂಡರಲ್ಲದೆ, ಜರ್ಮನಿಯ ಆರ್ಥಿಕ ಚಮತ್ಕಾರದ (ಅಂದರೆ ಮಹಾಯುದ್ಧದ ನಂತರ ಜರ್ಮನಿಯಲ್ಲಿ ಉಂಟಾದ ಆರ್ಥಿಕ ಅಭಿವೃದ್ಧಿ) ಜನಕ ಎಂಬ ಬಿರುದನ್ನು ಗಳಿಸಿದರು. ಆರ್ಡೋಲಿಬರಲ್ ವಿಚಾರಗಳ ಪ್ರತಿಧ್ವನಿಯನ್ನು ಯುರೋಪಿಯನ್ ಒಕ್ಕೂಟದ ಆರ್ಥಿಕ ಮತ್ತು ರಾಜಕೀಯ ಸಂರಚನೆಯಲ್ಲಿಯೂ ಗುರುತಿಸಬಹುದು.

ರಿಚರ್ಡ್ ಟಿ. ಈಲಿ (1854 -1943) ಎಂಬುವರು 1885ರಲ್ಲಿ ಇತರರೊಂದಿಗೆ ಸೇರಿ ಅಮೆರಿಕನ್ ಎಕನಾಮಿಕ್ ಅಸೋಸಿಯೇಷನ್ (ಎಇಎ) ಎಂಬ ಸಂಘಟನೆಯನ್ನು ಸ್ಥಾಪಿಸಿದರು. ಈತ ಜರ್ಮನಿಯ ಚಾರಿತ್ರಿಕ ಶಾಲೆಯಲ್ಲಿ ಕಲಿತವರಾಗಿದ್ದು ಜರ್ಮನ್ ಡಾಕ್ಟರೇಟ್ ಪದವಿಯನ್ನು ಹೊಂದಿದ್ದರು. ಈಲಿ ಅವರು 1873ರಲ್ಲಿ ಚಾರಿತ್ರಿಕವಾದಿಗಳು ಆರಂಭಿಸಿದ್ದ ಜರ್ಮನ್ ವೆರಿಯಿನ್ ಫುರ್ ಸೋಶಿಯಲ್ ಪೊಲಿಟಿಕ್ ಎಂಬ ಸಂಘದ ಮಾದರಿಯಲ್ಲಿ ಎಇಎ ಅನ್ನು ರೂಪಿಸಬೇಕೆಂದು ಆಶಿಸಿದ್ದರು. ಆದರೆ ಅವರು ಅರ್ಥಶಾಸ್ತ್ರದ ಕುರಿತು ಹೆಚ್ಚು ಮುಕ್ತವಾದ ಮತ್ತು ಸಿದ್ಧಾಂತ ಆಧಾರಿತ

ದೃಷ್ಟಿಕೋನವನ್ನು ಆರಿಸಿಕೊಂಡಿದ್ದ ಸಹೋದ್ಯೋಗಿಗಳಿಗೆ ಮಣಿಯಬೇಕಾಯಿತು. ಅಮೆರಿಕದ ಅರ್ಥಶಾಸ್ತ್ರೀಯ ವೃತ್ತಿಯ ಮೇಲೆ ಚಾರಿತ್ರಿಕವಾದವು ದೀರ್ಘಕಾಲಾವಧಿಯಲ್ಲಿ ಉಂಟುಮಾಡಿದ ಪ್ರಭಾವವು ಗಣನೀಯವಲ್ಲ. ಆದರೆ ತೀರ ಇತ್ತೀಚಿನ ಬೆಳವಣಿಗೆಗಳು ಮತ್ತು ವಿಶೇಷವಾಗಿ ಸಂಖ್ಯಾಶಾಸ್ತ್ರ ಮತ್ತು ಅರ್ಥಮಾಪನ ಶಾಸ್ತ್ರ(ಸ್ಟಾಟಿಸ್ಟಿಕ್ಸ್ ಮತ್ತು ಎಕನಾಮಿಟ್ರಿಕ್ಸ್)ಗಳನ್ನು ಆಗಾಗ ಉಪಯೋಗಿಸುತ್ತಿರುವ ರೀತಿಯನ್ನು ನೋಡಿದರೆ ಪರಿಮಾಣಾತ್ಮಕ ವಿಶ್ಲೇಷಣೆಯ ಶಕ್ತಿಶಾಲಿ ಉಪಕರಣಗಳನ್ನು ತೊಡಗಿಸಿಕೊಂಡು ಹೊಸ ರೀತಿಯಲ್ಲಿ ಚಾರಿತ್ರಿಕ ವಾದವನ್ನು ಪುನರುತ್ಥಾನಗೊಳಿಸಲಾಗಿದೆ ಎಂದು ವ್ಯಾಖ್ಯಾನಿಸಬಹುದೇನೋ. ಇಂತಹ ಕಾರ್ಯಗಳಲ್ಲಿ, ಇನ್ನು ಮುಂದೆ ಆರ್ಥಿಕ ಸಿದ್ಧಾಂತವು ಅನುಭವದ ಆಧಾರದ ಮೇಲೆ ಪರೀಕ್ಷಿಸಬೇಕಾದ, ಆರ್ಥಿಕ ಪರಿಮಾಣಗಳ ನಡುವೆ ವಿಶ್ಲೇಷಣಾತ್ಮಕವಾಗಿ ರೂಪಿಸಿದ ಸಂಬಂಧಗಳನ್ನು ಅರ್ಥಮಾಪನಶಾಸ್ತ್ರ(ಎಕನೋಮೆಟ್ರಿ)ಕ್ಕೆ ಸೂಚಿಸುವುದಿಲ್ಲ. ಬದಲಿಗೆ ಅಂತಹ ಕೆಲವು ಪರಿಮಾಣಗಳ ನಡುವೆ ಇರುವಂತಹ ಅವಲಂಬನೆಗಳ ಕುರಿತು ಗಮನವನ್ನು ಸೆಳೆಯುವ ಮೂಲಕ ಅರ್ಥಮಾಪನಶಾಸ್ತ್ರವು ಆರ್ಥಿಕ ವಿಶ್ಲೇಷಣೆಗೆ ಸೂಚನೆಯನ್ನು ನೀಡಿರುತ್ತದೆ.

**ಮಾರಿ- ಎಸ್ಪ್ರಿಟ್- ಲಿಯಾನ್ ವಾಲ್ರಾಸ್**

ಸ್ವಿಟ್ಸರ್ಲೆಂಡಿನ ಲೂಸಾನ್ನೆಯಲ್ಲಿ ಬೋಧನೆ ಮಾಡುತ್ತಿದ್ದ ಲಿಯಾನ್ ವಾಲ್ರಾಸ್ ಅವರು 1874 ಮತ್ತು 1877ರಲ್ಲಿ ಎರಡು ಭಾಗಗಳಲ್ಲಿ ಪ್ರಕಟಗೊಂಡ ತಮ್ಮ 'ಎಲಿಮೆಂಟ್ಸ್ ಡಿ ಎಕಾನಮಿ ಪೊಲಿಟಿಕ್‌ಕೆ ಪ್ಯೂರ್' ಕೃತಿಗಳ ಮೂಲಕ ಈ ಕ್ಷೇತ್ರದ ಮೇಲೆ ಪ್ರಮುಖವಾದ ಹಾಗೂ ದೀರ್ಘಕಾಲೀನ ಪ್ರಭಾವವನ್ನು ಬೀರಿದರು. ವಾಲ್ರಾಸ್ ಅವರು ಸಾಮಾನ್ಯ ಆರ್ಥಿಕ ಸಮಸ್ಥಿತಿಯ ಸಿದ್ಧಾಂತದ ಪ್ರಸ್ಥಾನ ಬಿಂದುವಾಗಿದ್ದರು. ಅವರು 'ಅರ್ಥಶಾಸ್ತ್ರದ ಶುದ್ಧ ವಿಜ್ಞಾನ'ವೆಂದರೆ ಅದು ವಾಸ್ತವಿಕ ಮಾದರಿಗಳಿಂದ ಅಮೂರ್ತೀಕರಿಸಿದ ಆದರ್ಶೀಕೃತ ಮಾದರಿಗಳ ವಿಶ್ಲೇಷಣೆ ಮತ್ತು ಅವುಗಳ ಅಂತಃಕ್ರಿಯೆಗಳನ್ನು ಗಣಿತೀಯ ವಿಧಾನಗಳಿಂದ ವಿಶ್ಲೇಷಿಸಲಾಗುತ್ತದೆ ಎಂದು ಅರ್ಥೈಸಿಕೊಂಡರು. ಹೀಗೆ ನಿರೂಪಿಸಲ್ಪಟ್ಟ ವಿಜ್ಞಾನವು 'ಪೂರ್ಣಗೊಂಡಾಗ' ಮಾತ್ರ ವಾಸ್ತವದ ಕಡೆಗೆ ವಾಪಸ್ಸಾಗುವ ಹಾದಿಯನ್ನು ಅನುಸರಿಸಬೇಕು ಮತ್ತು ತನ್ಮೂಲಕ ಅನ್ವಯಿಕ ಅರ್ಥಶಾಸ್ತ್ರದ ನೈಜ ಸಮಸ್ಯೆಗಳನ್ನು ಸೈದ್ಧಾಂತಿಕ ತಳಹದಿಯ ಮೇಲೆ ಪರಿಹರಿಸಲು ಸಾಧ್ಯವೆಂದು ವಾಲ್ರಾಸ್ ಪ್ರತಿಪಾದಿಸಿದರು. ಚಾರಿತ್ರಿಕ ಶಾಖೆಯ ದೃಷ್ಟಿಕೋನದ ಜೊತೆಗಿನ ವೈದೃಶ್ಯವು ಇದಕ್ಕಿಂತ ಸ್ಪಷ್ಟವಾಗಿರುವುದು ಸಾಧ್ಯವಿಲ್ಲ.

ವಾಲ್‌ರಾಸ್ ಅವರ ಪ್ರಕಾರ 'ಸಾಮಾಜಿಕ ಸಂಪತ್ತಿನ ಗಣಿತೀಯ ಸಿದ್ಧಾಂತ'ದ ಪ್ರಥಮ ಮುಖ್ಯ ಸಮಸ್ಯೆಯು ಶುದ್ಧ ವಿನಿಮಯವನ್ನು ಒಳಗೊಂಡಿದೆ (ಜೆವಾನ್ಸ್ ಮತ್ತು ಅವರಿಗಿಂತ ಮುಂಚೆ ಟುರ್ಗಾಟ್ ಅವರು ಈಗಾಗಲೇ ಇದರ ಬಗ್ಗೆ ಆಲೋಚಿಸಿದ್ದರು). ಇಬ್ಬರು ವ್ಯಕ್ತಿಗಳು ಪ್ರಾರಂಭದಲ್ಲಿ ಎರಡು ಸರಕುಗಳನ್ನು ಹೊಂದಿದ್ದಾರೆ ಎಂದಿಟ್ಟುಕೊಳ್ಳೋಣ. ಅವರಿಬ್ಬರೂ ತಮ್ಮಲ್ಲಿರುವ ಸರಕಿನ ಒಂದು ಭಾಗವನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವುದರ ಮೂಲಕ ತಮ್ಮ ಸೌಖ್ಯವನ್ನು ವೃದ್ಧಿಸಿಕೊಳ್ಳಬಹುದೇ? ಹಾಗಿದ್ದರೆ ಅದು ಯಾವ ಸಾಪೇಕ್ಷ ಬೆಲೆಯ ಮೂಲಕ? ಒಬ್ಬ ವ್ಯಕ್ತಿಯು ತನ್ನ ಉಪಯೋಗತ್ವವನ್ನು ಗರಿಷ್ಠಗೊಳಿಸಿಕೊಳ್ಳುವುದು, ಸೀಮಾಂತ ಉಪಯೋಗತ್ವವನ್ನು (ಇದನ್ನು ವಾಲ್ರಾಸ್ ಅವರು rareté ಎಂಬ ಪದದ ಮೂಲಕ ಸೂಚಿಸುತ್ತಾರೆ) ಸರಕಿನ ಬೆಲೆಯ ಮೂಲಕ ವಿಭಜಿಸಿದಾಗ ಅದು ಎಲ್ಲ ಸರಕುಗಳಿಗೂ ಸಮಾನವಾಗಿರುವ ಸಂದರ್ಭದಲ್ಲಿ. (ಇದನ್ನು ನಾವು ಗೊಸ್ಸೆನ್ ಅವರ ಎರಡನೆಯ ನಿಯಮ ಎಂದು ಗುರುತಿಸುತ್ತೇವೆ.) ಇದಲ್ಲದೆ ಪ್ರತಿಯೊಬ್ಬ ಕರ್ತೃವಿಗೆ ಸಂಬಂಧಿಸಿದಂತೆ, ಆತನ ಸಾಲವನ್ನು ಪಕ್ಕಕ್ಕಿಟ್ಟರೆ, ಆತನ ಮಾರಾಟಗಳ ಮೌಲ್ಯವು ಆತನ ಕೊಳ್ಳುವಿಕೆಗಳ ಮೌಲ್ಯಕ್ಕೆ ಅನುರೂಪವಾಗಿರಬೇಕು. ಇದು ಒಟ್ಟಾರೆ ಮೊತ್ತಕ್ಕೆ, ಇಡಿಯ ಆರ್ಥಿಕತೆಗೆ ಅನ್ವಯಿಸುವಂತಿರಬೇಕು. ಒಟ್ಟಾರೆ ಮಾರಾಟಗಳ ಮೊತ್ತವು ಒಟ್ಟಾರೆ ಖರೀದಿಗಳ ಮೊತ್ತಕ್ಕೆ ಸಮನಾಗಿರಬೇಕು. ಇದನ್ನು ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ: n-1 ಮಾರುಕಟ್ಟೆಗಳು ಸಮಸ್ಥಿತಿಯಲ್ಲಿದ್ದರೆ, ಅಂದರೆ ಮಾರಾಟಗಳ ಮೊತ್ತವು ಈ ಮಾರುಕಟ್ಟೆಗಳಲ್ಲಿನ ಖರೀದಿಗಳ ಮೊತ್ತಕ್ಕೆ ಸಮನಾಗಿದ್ದರೆ ಆಗ *n*th ಮಾರುಕಟ್ಟೆಯೂ ಸಹ ಸಮಸ್ಥಿತಿಯಲ್ಲಿರಬೇಕು. ಹೀಗಾಗಿ ಸಮಸ್ಥಿತಿಯನ್ನು ಸೂಚಿಸುವ ಸಮೀಕರಣಗಳ n-1ಗಳು ಮಾತ್ರ ಒಂದರಿಂದ ಇನ್ನೊಂದು ಸ್ವತಂತ್ರವಾಗಿರುತ್ತವೆ. ಇದನ್ನು 'ವಾಲ್ರಾಸ್ ನಿಯಮ' ಎಂದು ಉಲ್ಲೇಖಿಸಲಾಗುತ್ತದೆ.

ವಾಲ್ರಾಸ್ ಅವರ ಪ್ರಕಾರ ಎರಡನೆಯ ಮುಖ್ಯ ಸಮಸ್ಯೆಯು ಬಳಕೆ ವಸ್ತು(consumer goods)ಗಳ ಬೆಲೆಯ ರಚನೆಯನ್ನು ಕುರಿತಾದದ್ದು. ಇವು 'ಉತ್ಪಾದನಾ ವೆಚ್ಚ ಅಥವಾ ಅಸಲು ಬೆಲೆಯ ನಿಯಮ'ವನ್ನು ಅನುಸರಿಸುತ್ತವೆ. ವಾಲ್ರಾಸ್ ಅವರು ಎಲ್ಲ ಸರಕುಗಳ ಪ್ರತಿಯೊಂದು ಘಟಕವನ್ನು ಉತ್ಪಾದಕ ಸೇವೆಗಳ ಒಂದು ನಿಗದಿತ ಒಳಸುರಿ ಪರಿಮಾಣ(input quantity)ದೊಂದಿಗೆ ಉತ್ಪಾದಿಸಲಾಗುತ್ತದೆ ಎಂದು ಊಹಿಸಿದ್ದರು: ಅವುಗಳೆಂದರೆ ಶ್ರಮ, ಭೂಮಿ ಮತ್ತು ಬಂಡವಾಳ ಸೇವೆಗಳು. ಸಮೀಕರಣಗಳ ನಾಲ್ಕು ಸಮುಚ್ಚಯಗಳು ಸಾಮಾನ್ಯ ಸಮಸ್ಥಿತಿಯ ವ್ಯವಸ್ಥೆಯನ್ನು ಹೊಂದಿರುತ್ತವೆ: ೧. ಎಲ್ಲಾ ಸರಕು ಮತ್ತು ಸೇವೆಗಳ ಸಾಪೇಕ್ಷ ಬೆಲೆಗಳ ಮೇಲೆ ಅವಲಂಬಿತವಾದ ವಿಭಿನ್ನ ಉತ್ಪಾದಕ ಸೇವೆಗಳ ಸರಬರಾಜುಗಳನ್ನು ವಿವರಿಸುವ ಸಮೀಕರಣಗಳು ೨. ಸಾಪೇಕ್ಷ ಬೆಲೆಗಳ ಮೇಲೆ ಅವಲಂಬಿತವಾದ

ಬಳಕೆದಾರನ ಬೇಡಿಕೆಯನ್ನು ವಿವರಿಸುವ ಸಮೀಕರಣಗಳು ೩. ಕೋರಲ್ಪಟ್ಟ(demanded) ಮತ್ತು ಸರಬರಾಜು ಮಾಡಲ್ಪಟ್ಟ ಉತ್ಪಾದಕ ಸೇವೆಗಳ ಪರಿಮಾಣಗಳ ಸಮತೆಯನ್ನು ಅಭಿವ್ಯಕ್ತಿಸುವ ಸಮೀಕರಣಗಳು ೪. ಗ್ರಾಹಕ ವಸ್ತುಗಳ ಉತ್ಪಾದನಾ ವೆಚ್ಚ ಮತ್ತು ಬೆಲೆಗಳ ಸಮತೆಯನ್ನು ಅಭಿವ್ಯಕ್ತಿಸುವ ಸಮೀಕರಣಗಳು. ಅರಿವಿಗೆ ಸಿಗದಂತಹ ಅಜ್ಞಾತಗಳ (ಅನ್ನೋನ್ಸ್) ಸಂಖ್ಯೆ ಮತ್ತು ಸಮೀಕರಣಗಳ ಸಂಖ್ಯೆ ಸಮನಾಗಿ ಇರುವುದರಿಂದ ವಾಲ್ರಾಸ್ ಅವರು 'ಮುಕ್ತ ಸ್ಪರ್ಧೆಯ ಕಾರ್ಯನೀತಿಯ ಮೂಲಕ ಮಾರುಕಟ್ಟೆಯು ವಾಸ್ತವದಲ್ಲಿ ಯಾವ ಸಮಸ್ಯೆಯನ್ನು ಬಗೆಹರಿಸಿತ್ತೋ' ಅದಕ್ಕೆ ತಾನು 'ಸೈದ್ಧಾಂತಿಕ ಪರಿಹಾರ'ವನ್ನು ಕಂಡುಹಿಡಿದಿದ್ದೇನೆ ಎಂದು ತೀರ್ಮಾನಿಸಿದರು. ಯಾವುದೇ ಸರಕನ್ನು ಉತ್ಪಾದಿಸಲು ಅನೇಕ ವಿಧಾನಗಳು ಲಭ್ಯವಿದ್ದರೆ ಆಗ ಅತಿ ಕಡಿಮೆ ವೆಚ್ಚ ಯಾವುದಕ್ಕೆ ತಗಲುತ್ತದೆಯೋ ಅದು ಆಯ್ಕೆಯಾಗುವುದನ್ನು ಸ್ಪರ್ಧೆಯು ಖಾತ್ರಿಪಡಿಸುತ್ತದೆ.

ವಾಲ್ರಾಸ್ ಅವರ ಪ್ರಕಾರ ಸಾಮಾಜಿಕ ಸಂಪತ್ತಿನ ಗಣಿತೀಯ ಸಿದ್ದಾಂತದಲ್ಲಿರುವ ಮೂರನೆಯ ಮುಖ್ಯ ಸಮಸ್ಯೆಯು ಬಂಡವಾಳ ಸರಕುಗಳ ಬೆಲೆಯ ರಚನೆಗೆ ಸಂಬಂಧಿಸಿದ್ದು. ಇದು ಬಹುಕಾಲ ಬಾಳಿಕೆ ಬರುವ ಆದರೆ ಉಪಯೋಗಿಸಿದಂತೆ ಸವೆದುಹೋಗುವ ಹಾಗೂ ಅದರಿಂದಾಗಿ ಆಗಾಗ್ಗೆ ಬದಲಾಯಿಸುವ ಅವಶ್ಯಕತರಯಿರುವ ಮತ್ತು ಮಾಲೀಕರಿಗೆ ತಮ್ಮ ಉತ್ಪಾದಕ ಸೇವೆಗಳಿಂದಾಗಿ ನಿವ್ವಳ ಆದಾಯವನ್ನು (ಒಟ್ಟಾರೆ ಲಾಭದಲ್ಲಿ ಸವೆತವನ್ನು ಕಳೆದ ಮೇಲೆ ಸಿಗುವ ಲಾಭ) ಒದಗಿಸಿಕೊಡುವ ಬಂಡವಾಳ ಸರಕುಗಳಿಗೆ ಸಂಬಂಧಪಟ್ಟಿದ್ದು. ವಾಲ್ರಾಸ್ ಅವರ ಪ್ರಕಾರ ಸಮಸ್ಥಿತಿಯಲ್ಲಿ ಬಂಡವಾಳ ಸರಕಿನ ಹೊಚ್ಚ ಹೊಸ ಘಟಕವೊಂದರ ಬೆಲೆಗೆ ಸಾಪೇಕ್ಷವಾಗಿರುವ ನಿವ್ವಳ ಆದಾಯವು ಎಲ್ಲಾ ಬಂಡವಾಳ ಸರಕುಗಳಿಗೆ ಸಂಬಂಧಿಸಿದಂತೆ ಸಮವಾಗಿರುತ್ತದೆ. ಹೀಗಾಗಿ ಬಹುಕಾಲ ಬಾಳಿಕೆ ಬರುವ ಬಂಡವಾಳ ಸರಕಿನ ಬೆಲೆ ಮತ್ತು ಅದರ ಉತ್ಪಾದಕ ಸೇವೆಯ ಬೆಲೆ ಇವುಗಳ ನಡುವೆ ಒಂದು ನಿಕಟ ಸಂಬಂಧವಿರುತ್ತದೆ. ಮುಕ್ತ ಸ್ಪರ್ಧೆಯ ಪರಿಸ್ಥಿತಿಗಳಲ್ಲಿ ನಿವ್ವಳ ಆದಾಯದ ಸಮಾನ ದರವು, ನಿಶ್ಚಿತವಾಗಿಯೂ ಶಾಸ್ತ್ರೀಯ ಅರ್ಥಶಾಸ್ತ್ರದಲ್ಲಿ ಲಾಭದ ಸಮಾನ ದರವನ್ನೇ ಪ್ರತಿಧ್ವನಿಸುತ್ತದೆ.

ಅಲ್ಲದೆ ಒಂದು ಹೊಚ್ಚ ಹೊಸ ಬಂಡವಾಳ ಸರಕಿನ ಬೆಲೆಯು 'ಉತ್ಪಾದನಾ ವೆಚ್ಚದ ನಿಯಮ'ವನ್ನು ಅನುಸರಿಸುತ್ತದೆ. ಬಂಡವಾಳ ಸರಕುಗಳ ಬೆಲೆಗಳು ಉತ್ಪಾದನಾ ವೆಚ್ಚಗಳಿಗೆ ಸಮ ಎನ್ನುವಂತಹ ಸಮೀಕರಣಗಳ ಐದನೆಯ ಸಮುಚ್ಚಯಕ್ಕೆ ಇದು ಎಡೆಮಾಡಿಕೊಡುತ್ತದೆ. ಆದರೂ ಸಹ ಹೆಚ್ಚುವರಿ ಸಮೀಕರಣಗಳ ಸಂಖ್ಯೆಯು ಹೆಚ್ಚುವರಿ ಅಜ್ಞಾತಗಳ (ಬಂಡವಾಳ ಸರಕುಗಳ ಬೆಲೆಗಳು ಮತ್ತು ನಿವ್ವಳ ಆದಾಯದ ದರ ಅಥವಾ ಲಾಭದ ದರ) ಸಂಖ್ಯೆಗಿಂತ

ಒಂದು ಕಡಿಮೆ ಇರುತ್ತದೆ. ವಾಲ್ರಾಸ್ ಅವರು, ಹೊಸ ಅಜ್ಞಾತಗಳು ಇಲ್ಲದಿರುವ, ಒಟ್ಟಾರೆ ಉಳಿತಾಯ ಮತ್ತು ಒಟ್ಟಾರೆ ಹೂಡಿಕೆಗಳ ನಡುವೆ ಇರುವ ಸಮಸ್ಥಿತಿಯನ್ನು ಅಭಿವ್ಯಕ್ತಿಸುವ ಹೆಚ್ಚುವರಿ ಸಮೀಕರಣದೊಂದಿಗೆ ಈ ವ್ಯವಸ್ಥೆಯನ್ನು ಸಮಾಪ್ತಿಗೊಳಿಸಲು ಪ್ರಯತ್ನಿಸಿದರು. ಈ ಹೆಚ್ಚುವರಿ ಸಮೀಕರಣದೊಂದಿಗೆ ಎಲ್ಲಾ ಇತರ ಅಜ್ಞಾತಗಳೊಂದಿಗೆ ಲಾಭಗಳ ಸ್ಪರ್ಧಾತ್ಮಕ ದರ ಮಾತ್ರವಲ್ಲದೆ, ಬಂಡವಾಳ ಸಂಚಯದ ಒಟ್ಟಾರೆ ದರವನ್ನು(ಬಂಡವಾಳೀಕರಣವನ್ನು), ಮತ್ತು ಇದರಿಂದಾಗಿ ಒಂದು ವರ್ಷದಿಂದ ಇನ್ನೊಂದು ವರ್ಷಕ್ಕೆ ಆರ್ಥಿಕತೆಯು ಎಷ್ಟು ಬೆಳೆಯುತ್ತದೆ ಎಂಬುದನ್ನು ನಿಗದಿ ಮಾಡಲು ಈಗ ಸಾಧ್ಯವಾಗಬಹುದು ಎಂದು ಅವರು ಭಾವಿಸಿದರು.

ಪ್ರಾಪ್ತಿಪರ್ಯಂತ ಪ್ರಯತ್ನ (TÂTONNEMENT): ಸಮಸ್ಥಿತಿಯನ್ನು ಯಾವಾಗಲೂ ಸಹ ಕೂಡಲೇ ಸ್ಥಾಪಿಸುವುದು ಸಾಧ್ಯವಾಗುವುದಿಲ್ಲ ಎಂಬುದು ವಾಲ್ರಾಸ್ ಅವರಿಗೆ ಸ್ಪಷ್ಟವಾಗಿತ್ತು. ಆದರೆ ಏಕೆ ಮಾರುಕಟ್ಟೆಯಲ್ಲಿ ಸಮಸ್ಥಿತಿಯತ್ತ ವಾಲುವ ಪ್ರವೃತ್ತಿ ಇರುತ್ತದೆ? ಮಾರುಕಟ್ಟೆಗಳು 'ಸ್ಥಿರ' ಎಂದು ಏಕೆ ಭಾವಿಸಲಾಗುತ್ತದೆ? ಆತ TÂTONNEMENT ಎಂದು ಕರೆದ ಪರಿಕಲ್ಪನೆಯ ವಿಷಯ ಇದೇ ಆಗಿದೆ: ಅಂದರೆ ಒಂದು ಹುಡುಕಾಟವು, ಸರಿ ತಪ್ಪುಗಳನ್ನು ಮಾಡುತ್ತಾ ಸಮಸ್ಥಿತಿಯತ್ತ ನಡೆಯುವ ಚಲನೆ[trial and error (ಪ್ರಾಪ್ತಿಪರ್ಯಂತ ಪ್ರಯತ್ನ)]. ಒಬ್ಬ ಹರಾಜು ಹಾಕುವವನ ಚಿತ್ರದ ಮೂಲಕ ಈ ಮೂಲ ವಿಚಾರವನ್ನು ವಿವರಿಸಬಹುದು. ಎಲ್ಲ ವ್ಯಾಪಾರಯೋಗ್ಯ ಸರಕುಗಳಿಗೆ ಸಂಬಂಧಿಸಿದಂತೆ ಹರಾಜು ಹಾಕುವವನು ಇಚ್ಛಾನುಸಾರ ದರಗಳನ್ನು ಕೂಗುತ್ತಾನೆ. ಉದ್ದಿಮೆಗಳು ಅಥವಾ ಕುಟುಂಬಗಳು ತಾವು ಈ ದರದಲ್ಲಿ ಕೊಳ್ಳಲು ಅಥವಾ ಮಾರಲು ಇಷ್ಟಪಡುವ ವಸ್ತುಗಳ ಪ್ರಮಾಣವನ್ನು ಪಟ್ಟಿ ಮಾಡುತ್ತವೆ. ಹರಾಜುಹಾಕುವವನು ಈ ಮಾಹಿತಿಯನ್ನು ಸಂಗ್ರಹಿಸಿ ಪ್ರತಿಯೊಂದು ಮಾರುಕಟ್ಟೆಗೂ ಸಹ ಪ್ರಸ್ತುತವಾದ ಮೊತ್ತಗಳನ್ನು ಸೇರಿಸುತ್ತಾನೆ. ಆತನಿಗೆ ಎಲ್ಲ ಮಾರುಕಟ್ಟೆಗಳು ಏಕಕಾಲದಲ್ಲಿ ಸಮಸ್ಥಿತಿಯಲ್ಲಿ ಇಲ್ಲವೆನಿಸಿದರೆ ಅವನು ಹೊಸ ದರಗಳನ್ನು ಕೂಗುತ್ತಾನೆ. ಅದಕ್ಕೆ ಅವನು ಮಾರ್ಗವನ್ನು ನಿರ್ಧರಿಸುತ್ತಾನೆ. ಯಾವ ವಸ್ತುಗಳಿಗೆ ಸಂಬಂಧಿಸಿದಂತೆ ಬೇಡಿಕೆಗಿಂತ ಹೆಚ್ಚಿಗೆ ಸಾಮೂಹಿಕ ಸರಬರಾಜು ಇರುತ್ತದೋ(ಹೆಚ್ಚುವರಿ ಸರಬರಾಜು) ಅಲ್ಲಿ ಅವನು ಬೆಲೆಯನ್ನು ಇಳಿಸುತ್ತಾನೆ ಮತ್ತು ಇದಕ್ಕೆ ವಿರುದ್ಧವಾಗಿ ಹೆಚ್ಚುವರಿ ಬೇಡಿಕೆ ಇದ್ದಲ್ಲಿ ಅವನು ದರವನ್ನು ಹೆಚ್ಚಿಸುತ್ತಾನೆ. ಮತ್ತೊಮ್ಮೆ ಹರಾಜು ಕೂಗುವವನು ಅವರು ಎಷ್ಟು ಕೊಳ್ಳಲು ಅಥವಾ ಮಾರಲು ಇಚ್ಛಿಸುತ್ತಾರೆ ಎಂಬುದನ್ನು ಘೋಷಿಸುತ್ತಾನೆ ಮತ್ತು ಈ ಪ್ರಕ್ರಿಯೆಯು ಮುಂದುವರಿಯುತ್ತದೆ.

ಈ ಪ್ರಕ್ರಿಯೆಯು ಯಾವಾಗಲೂ ಒಂದು ಸಮಸ್ಥಿತಿಯತ್ತ ಚಲಿಸುತ್ತದೆ, ಅಂದರೆ ಅದು ಜಾಗತಿಕವಾಗಿ ಸ್ಥಿರವಾಗಿರುತ್ತದೆ ಎಂಬುದರ ಬಗ್ಗೆ ವಾಲ್ರಾಸ್ ಅವರಿಗೆ ವಿಶ್ವಾಸವಿತ್ತು. 'ಬೇಡಿಕೆ ಮತ್ತು ಸರಬರಾಜಿನ ನಿಯಮವು' ಖಗೋಳಶಾಸ್ತ್ರದಲ್ಲಿನ ಸಾರ್ವತ್ರಿಕ ಗುರುತ್ವಾಕರ್ಷಣ ನಿಯಮದಂತೆಯೇ ಇರುತ್ತದೆ ಎಂದು ಅವರು ಪರಿಗಣಿಸಿದರು. ದರಗಳ ಘೋಷಣೆಯಲ್ಲಿ ಸಮಸ್ಥಿತಿಯು ಉಂಟಾದಾಗ ಮಾತ್ರ ವ್ಯಾಪಾರವು ನಡೆಯುತ್ತದೆ ಎಂದು ವಾಲ್ರಾಸ್ ಭಾವಿಸಿದರು. ಭವಿಷ್ಯದ ಅರ್ಥಶಾಸ್ತ್ರಜ್ಞರು 'ಮಿಥ್ಯಾ ಬೆಲೆಗಳು' ಎಂದು ಕರೆಯಬಹುದಾದ ಯಾವುದೇ ವ್ಯವಹಾರ ಇರುವುದಿಲ್ಲ.

**ವಾಲ್ರಾಸ್ ಅವರ ಕೃತಿಗೆ ದೊರಕಿದ ಪ್ರತಿಕ್ರಿಯೆ**

ಶುಂಪೀಟರ್ ಅವರು ವಾಲ್ರಾಸ್ ಅವರ ಸಿದ್ಧಾಂತವನ್ನು ಅರ್ಥಶಾಸ್ತ್ರದ ಮ್ಯಾಗ್ನಕಾರ್ಟ ಎಂದು ಕರೆದರು. ಆದರೆ ಇದಕ್ಕೆ ಭಿನ್ನವಾಗಿ ಶುಂಪೀಟರ್ ಅವರಿಗೆ ಹಿಂದೆ ಅಧ್ಯಾಪಕರಾಗಿದ್ದ ಹಾಗೂ ಕಾರ್ಯಕಾರಣ ಅನುವಂಶಿಕ ವಿಧಾನದ ವಕ್ತಾರರಾದ ಯುಜೆನ್ ವಾನ್ ಬೋಮ್ ಬಾವೆರ್ಕ್ ಅವರು ಏಕಕಾಲೀನ ಸಮೀಕರಣಗಳ ವಿಧಾನವನ್ನು ಎಲ್ಲ 'ವೈಜ್ಞಾನಿಕ ತರ್ಕದ ವಿರುದ್ಧದ ಘೋರ ಪಾಪ' ಎಂದುಬಿಟ್ಟರು.

ವಾಲ್ರಾಸ್ ಅವರ ಸಂರಚನೆಯು ಎಷ್ಟೇ ಪ್ರಭಾವಶಾಲಿಯಾಗಿ ಕಂಡರೂ ಅದರಲ್ಲಿ ಸ್ಪಷ್ಟವಾದ ದೌರ್ಬಲ್ಯಗಳಿವೆ. ಈ ಪದ್ಧತಿಯಲ್ಲಿ 'ಪರಿಹಾರ' ಎಂಬುದು ಇದೆಯೇ? ಇದ್ದರೂ ಸಹ ಅದು ಅರ್ಥಶಾಸ್ತ್ರೀಯವಾಗಿ ಅರ್ಥಪೂರ್ಣವಾಗಿದೆಯೇ? ಸಮಾನ ಸಂಖ್ಯೆಯಲ್ಲಿರುವ ಅಜ್ಞಾತಗಳು ಮತ್ತು ಸಮೀಕರಣಗಳು ಒಂದು ಪರಿಹಾರವನ್ನು ಖಾತ್ರಿಪಡಿಸುವುದಿಲ್ಲ: ಸಮೀಕರಣಗಳು ಒಂದು ಇನ್ನೊಂದಕ್ಕೆ ವಿರುದ್ಧವಾಗಿದ್ದರೆ ಆಗ ಪರಿಹಾರ ಸಿಗುವುದಿಲ್ಲ. ಹಾಗೊಮ್ಮೆ ಸಿಕ್ಕರೂ ಸಹ ಅದು ಋಣಾತ್ಮಕ ಬೆಲೆಗಳನ್ನು ಹೊಂದಿರಬಹುದು, ಹಾಗಾದಾಗ ಅದಕ್ಕೆ ಅರ್ಥಶಾಸ್ತ್ರದ ಪ್ರಕಾರ ಯಾವ ಅರ್ಥವೂ ಇರುವುದಿಲ್ಲ. ಉತ್ಪಾದನಾ ಸಂಪನ್ಮೂಲಗಳೊಂದಿಗೆ ಒಂದಷ್ಟು ಆರಂಭಿಕ ಸಂಪನ್ನತೆಯನ್ನು ಹೊಂದಿರುವ ಆರ್ಥಿಕತೆಗೆ ಎಲ್ಲಾ ಸಂಪನ್ಮೂಲಗಳು ಸಂಪೂರ್ಣವಾಗಿ ನಿಯೋಜಿಸಲ್ಪಡುತ್ತವೆ ಎಂದು ಭಾವಿಸಲು ಯಾವ ಕಾರಣವೂ ಇಲ್ಲ. ಕೆಲವು ಹೆಚ್ಚಾಗಿ ಸರಬರಾಜಾಗುತ್ತಿದ್ದು ಅವು ಉಪಯೋಗಕ್ಕೆ ಬರುವ, ಆದರೆ ಇನ್ನೂ ಕಾರ್ಯರೂಪಕ್ಕೆ ತರದ ವಸ್ತುಗಳಾಗಿ ಉಳಿಯಬಹುದು. ಆಗ ಪ್ರಸ್ತುತ ಸಮಸ್ಥಿತೀಯ ಸ್ಥಿತಿಗಳನ್ನು ಸಮೀಕರಣಗಳು ಎನ್ನುವುದಕ್ಕಿಂತ ದುರ್ಬಲ ಅಸಮಾನತೆಗಳು ಎಂದು ವಿವರಿಸಬೇಕಾಗುತ್ತದೆ. ಆದರೆ ಲಭ್ಯವಿರುವ ಸಂಪನ್ಮೂಲದ ಪ್ರಮಾಣವು ಬೇಡಿಕೆಯ ಪ್ರಮಾಣಕ್ಕಿಂತ ಹೆಚ್ಚಾಗಿದ್ದರೆ ಏನು ಮಾಡುವುದು? ಆಗ ವಾಲ್ರಾಸ್ ಅವರ ತರ್ಕದ ಪ್ರಕಾರ ಅದರ ಬೆಲೆಯು

ಶೂನ್ಯವಾಗಬೇಕು. ಆದರೆ ಉದಾಹರಣೆಗಾಗಿ ಕೇಳಬೇಕೆಂದರೆ ಕೂಲಿಗಳು ಶೂನ್ಯಕ್ಕೆ ಕುಸಿಯಬಹುದೇ? ಹೌದಾದರೆ, ನಂತರ?

ಸಂಕ್ಷಿಪ್ತವಾಗಿ: ವಾಲ್ರಾಸ್ ಅವರ ಒಂದು ಆರಂಭಿಕ ನಿಧಿಯ ಪೂರ್ವ ತೀರ್ಮಾನವು ಹೆಚ್ಚೆಂದರೆ ಭೇದಾತ್ಮಕ (ಡಿಫರೆನ್ಶಿಯಲ್) ಲಾಭದ ದರಗಳಿರುವ ಅಲ್ಪಾವಧಿಯ ಸಮಸ್ಥಿತಿಯೊಂದಿಗೆ ಹೊಂದಿಕೊಳ್ಳಬಹುದು, ಆದರೆ ಅವರು ಅಂದುಕೊಂಡಂತೆ ದೀರ್ಘಾವಧಿಯೊಂದಿಗೆ ಹೊಂದುವುದಿಲ್ಲ. ಬಂಡವಾಳ ಸೃಜನೆಯ ಸಮಸ್ಯೆಯ ಕುರಿತು ಸಹ ಅವರ ದೃಷ್ಟಿಕೋನವು ಸಮರ್ಥನೀಯವಲ್ಲ. ವಾಲ್ರಾಸ್ ಅವರು ದೃಢವಾಗಿ ನಂಬಿದ್ದ ಉಳಿತಾಯಗಳ ಒಟ್ಟು ಮೊತ್ತ ಮತ್ತು ಹೂಡಿಕೆಗಳ ಒಟ್ಟು ಮೊತ್ತದ ನಡುವಿನ ಸಮಾನತೆಯು ಅವರಿಗೆ ಲಾಭಗಳ ದರವನ್ನು ಮತ್ತು ಬಂಡವಾಳ ಸಂಚಯದ ದರವನ್ನು ನಿರ್ಣಯಿಸಲು ಅವಕಾಶ ಮಾಡಿಕೊಟ್ಟಿದ್ದರೂ ಸಹ ವಾಸ್ತವದಲ್ಲಿ ಅದು ಸಮಸ್ಯೆಯನ್ನು ಪರಿಹರಿಸುವುದಿಲ್ಲ. ಅದಕ್ಕೆ ಕಾರಣವೂ ಸರಳವಾಗಿದೆ: ಪರಿಹಾರವೊಂದನ್ನು ಪಡೆದುಕೊಳ್ಳಲು ಚರ್ಚೆಯಲ್ಲಿ ಸ್ಥೂಲ ಆರ್ಥಿಕ ಸಮಾನತೆಯನ್ನು ಸಾಧಿಸಿದರೆ ಸಾಲದು; ನಾವು ಹೂಡಿಕೆಯನ್ನು ಕುರಿತ ಕೋರಿಕೆಯ ರೂಪಣೆಯನ್ನು ಸಹ ತಿಳಿದಿರಬೇಕಾಗುತ್ತದೆ - ಅಂದರೆ ಹೂಡಿಕೆಯಲ್ಲಿ ಇರುವ ಬಂಡವಾಳ ಸರಕುಗಳ ನಿರ್ದಿಷ್ಟ ಪ್ರಮಾಣಗಳು. ಆದರೆ ಇದನ್ನು ನಿರ್ಣಯಿಸದೆ ಬಿಡಲಾಗಿದೆ. ಈ ಪ್ರತಿಯೊಂದು ಬಂಡವಾಳ ಸರಕು ಯಾವ ಪ್ರಮಾಣದಲ್ಲಿ ಉತ್ಪಾದಿಸಲ್ಪಡುತ್ತದೆ ಎಂಬುದನ್ನು ಅರಿಯದೆ ವಿಭಿನ್ನ ವಸ್ತುಗಳ ಉತ್ಪನ್ನ ಪ್ರಮಾಣಗಳನ್ನು ಒಟ್ಟಾರೆಯಾಗಿ ನಿರ್ಣಯಿಸಲಾಗುವುದಿಲ್ಲ ಮತ್ತು ವಸ್ತುಗಳ ಹಾಗೂ ಉತ್ಪಾದನಾ ಸೇವೆಗಳ ದರಗಳನ್ನು ಸಹ ಅರಿಯಲು ಸಾಧ್ಯವಿಲ್ಲ.

ವಾಲ್ರಾಸ್ ಅವರು ಬಿಟ್ಟು ಹೋದಂತಹ ಅನೇಕ ಲೋಪ ದೋಷಗಳನ್ನು ಸರಿಪಡಿಸಬೇಕೆಂಬ ಉದ್ದೇಶದಿಂದ ಆ ಕ್ಷೇತ್ರದಲ್ಲಿನ ಅನೇಕ ಬೆಳವಣಿಗೆಗಳಿಗೆ ವಾಲ್ರಾಸ್ ಅವರ ಸಿದ್ಧಾಂತವೇ ಆರಂಭ ಬಿಂದುವಾಯಿತು. ವಿಲ್ಫ್ರೆಡೋ ಪ್ಯಾರೇಟೋ (1848-1923) ಅವರು ತಮ್ಮ 'ಮ್ಯಾನ್ಯುಯೆಲ್ ಡಿ ಎಕನಾಮಿಯ ಪೊಲಿಟಿಕ'(1906), ಮತ್ತು ಗುಸ್ತಾವ್ ಕ್ಯಾಸ್ಸೆಲ್ (1866-1945), ತಮ್ಮ 'ಥಿಯರಿ ಆಫ್ ಸೋಶಿಯಲ್ ಎಕಾನಮಿ' (1918) ಗ್ರಂಥಗಳಲ್ಲಿ ಏರುಪೇರಿಲ್ಲದ ಲಾಭದ ದರಗಳನ್ನು ಹೊಂದಿದ ದೀರ್ಘಾವಧಿ ಸಮಸ್ಥಿತಿಯನ್ನು ನಿರ್ಧರಿಸುವಲ್ಲಿ ವಾಲ್ರಾಸ್ ಅವರ ಆಸಕ್ತಿಯನ್ನೇ ಹಂಚಿಕೊಂಡಿದ್ದರು. ಇದರಿಂದಾಗಿ ಇಚ್ಛಾನುಸಾರ ನಿರ್ಧರಿಸಲಾದ ವಿಭಿನ್ನ ಬಂಡವಾಳ ಸರಕುಗಳ ಪ್ರಮಾಣಗಳು (ಸನಿಕೆಗಳು, ನೇಗಿಲುಗಳು, ಟ್ರ್ಯಾಕ್ಟರ್‌ಗಳು, ಕಂಪ್ಯೂಟರ್‌ಗಳು ಇತ್ಯಾದಿ) ಇರುವಂತಹ ಆರ್ಥಿಕತೆಯೊಳಗಿನ ಬಂಡವಾಳ ನಿಧಿಯ ಪೂರ್ವ ತೀರ್ಮಾನವನ್ನು ತ್ಯಜಿಸಬೇಕಾಯಿತು. ವಾಸ್ತವಿಕವೂ, ಆಸಕ್ತಿದಾಯಕವೂ ಅಲ್ಲದ,

ರಿಕಾರ್ಡೊ ಅವರ ಗೋಧಿಯಂತಹ ಕೇವಲ ಒಂದೇ ಪ್ರಕಾರದ ಬಂಡವಾಳ ಸರಕು ಇದ್ದಲ್ಲಿ ಮಾತ್ರವೇ ದೀರ್ಘಾವಧಿ ವಿಧಾನವನ್ನು ಉಳಿಸಿಕೊಳ್ಳಬಹುದಿತ್ತು. ಇಲ್ಲದಿದ್ದರೆ ಬಂಡವಾಳ ನಿಧಿಯನ್ನು, ಅದರ ಭೌತಿಕ ರಚನೆಯು ಪದ್ಧತಿಯ ಪರಿಹಾರದ ಭಾಗ ಎನ್ನುವಂತೆ ಮೌಲ್ಯದ ಮೊತ್ತವಾಗಿ ನೀಡಬೇಕಾಗುತ್ತಿತ್ತು(ಈಗಾಗಲೇ ತಿಳಿಸಲ್ಪಟ್ಟ ವಿಕ್ಸೆಲ್ ಅವರ ಪ್ರಕರಣದಲ್ಲಿ ಇದ್ದಂತೆ).

ಇದು ಸಾಕಷ್ಟು ತೃಪ್ತಿದಾಯಕವಾಗಿರಲಿಲ್ಲ ಮತ್ತು ಕೆಲವರು ಕೂಡಲೇ ಈ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳಲು ದೀರ್ಘಕಾಲಾವಧಿ ಸಮಸ್ಥಿತಿಯ ಪರಿಕಲ್ಪನೆಯನ್ನು ಕೈಬಿಟ್ಟು ಅದರ ಜಾಗದಲ್ಲಿ ಅಲ್ಪ ಕಾಲಾವಧಿ ಸಮಸ್ಥಿತಿಗಳ ಕಲ್ಪನೆಯನ್ನು ತರಲು ದಾರಿಗಳನ್ನು ಹುಡುಕಲಾರಂಭಿಸಿದರು. ಅಂತಹ ಸಮಸ್ಥಿತಿಯ ಪರಿಕಲ್ಪನೆಗಳಲ್ಲಿ ಎರಡು ಮಾದರಿಗಳಿವೆ: ಎರಿಕ್ ಲಿಂಡಾಲ್ (189-1960) ಮತ್ತು ಜಾನ್ ಹಿಕ್ಸ್ (1904–1989) ಅವರ ತಾತ್ಕಾಲಿಕ ಸಮಸ್ಥಿತಿಯು ಒಂದು ಕಡೆ ಇದ್ದರೆ, ಇನ್ನೊಂದು ಕಡೆ ಲಿಂಡಾಲ್ ಮತ್ತು ಹಾಯೆಕ್ ಅವರ ಅಂತರ್-ಕಾಲಿಕ ಸಮಸ್ಥಿತಿಯ ಮಾದರಿಯೂ ಇದೆ. ಎರಡನೆಯ ಮಾದರಿಯು ಕೆನ್ನೆತ್ ಆರೋ (ಜನನ: 1921) ಮತ್ತು ಜೆರಾರ್ಡ್ ಡೆಬ್ರು (1921-2004) ಅವರ ಕೃತಿಗಳಲ್ಲಿ ತನ್ನ ಉತ್ತುಂಗವನ್ನು ಕಂಡುಕೊಂಡಿತು. ಅವರ ಕೊಡುಗೆಗಳ ಬಗ್ಗೆ ನಾವು ಸಂಕ್ಷಿಪ್ತವಾಗಿ ಅಧ್ಯಾಯ 11ರಲ್ಲಿ ಪ್ರಸ್ತಾಪಿಸಲಿದ್ದೇವೆ.